"JANAPADA" Monthly - May 2016
"ಜನಪದ" ಮಾಸಿಕ – ಮೇ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26



ವಾರ್ಷಿಕ ಚಂದಾ ರೂ.25/–

# ಜನಪದ

ಮೇ 2016




## ಸರ್ಕಾರಕ್ಕೆ 3 ವರುಷ

## ಎಲ್ಲೆಡೆ ಹರುಷ..



ಡಾ. ಅಂಬೇಡ್ಕರರ 125ನೇ ಜಯಂತ್ಯುತ್ಸವದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ. ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಶ್ರೀ ಎಚ್ ಆಂಜನೇಯ ಉಪಸ್ಥಿತರಿದ್ದರು.




ಅಂಬೇಡ್ಕರ್ ಜಯಂತಿಯಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಡಾ. ಎಸ್ ಚಿನ್ನಸ್ವಾಮಿ ಮಾಂಬಳ್ಳಿ ಅವರಿಗೆ ಡಾ. ಬಿ ಆರ್ ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಲಾಯಿತು






ಬೆಂಗಳೂರಿನಲ್ಲಿ ವರನಟ ಡಾ. ರಾಜಕುಮಾರ್ 88 ನೇ ಜನ್ಮದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಅಭಿವೃದ್ಧಿ ಸಚಿವ ಕೆ ಜೆ ಜಾರ್ಜ್, ಕೇಂದ್ರ ಸಚಿವರಾದ ಅನಂತಕುಮಾರ್, ಶ್ರೀಮತಿ ಪಾರ್ವತಮ್ಮ ರಾಜಕುಮಾರ್, ಹಿರಿಯ ನಟ ಡಾ॥ ಶ್ರೀನಾಥ್, ಸಾ. ರಾ. ಗೋವಿಂದು, ವಿಜಯಲಕ್ಷ್ಮಿ ಅರಸ್, ಸಾಹಿತಿ ದೊಡ್ಡ ಹುಲ್ಲೂರು ರುಕ್ಕೋಜಿ ಅವರೊಂದಿಗೆ ವಾರ್ತಾ ಇಲಾಖೆಯ ನಿರ್ದೇಶಕರಾದ ಎನ್ ಆರ್ ವಿಶುಕುಮಾರ್ ಅವರು ಉಪಸ್ಥಿತರಿದ್ದರು.






**05** ಸಂಭ್ರಮಿಸಲು ಸರ್ಕಾರಕ್ಕೆ ಸಾಕಷ್ಟು ಕಾರಣಗಳಿವೆ
- ಎನ್. ಆರ್. ವಿಶುಕುಮಾರ್

ಸಂಪುಟ–59 • ಸಂಚಿಕೆ–2

**ಮೇ 2016**

ಪ್ರಧಾನ ಸಂಪಾದಕರು
**ಎನ್. ಆರ್. ವಿಶುಕುಮಾರ್**
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಆರ್. ಸರಸ್ವತಿ**
ಉಪ ನಿರ್ದೇಶಕರು

ಉಪ ಸಂಪಾದಕರು
**ಸಿ. ರೂಪಾ**
ಸಹಾಯಕ ನಿರ್ದೇಶಕರು

ಪ್ರಕಾಶಕರು
**ನಿರ್ದೇಶಕರು**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ
ಬೆಂಗಳೂರು–560 001
Email : varthajanapada@yahoo.co.in

ಮುದ್ರಕರು
**ಲಾವಣ್ಯ ಮುದ್ರಣ**
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ
ಬೆಂಗಳೂರು–560 050

ಲೇಖನದ ಅಭಿಪ್ರಾಯಗಳು, ಸರ್ಕಾರದ ಅಭಿಪ್ರಾಯಗಳಲ್ಲ

## ಪುಟ ತೆರೆದಂತೆ...

**12** ಸರ್ಕಾರಕ್ಕೆ ಮೂರು ವರ್ಷ
• ಡಿ. ಪಿ., ಮುರಳೀಧರ್

**19** ಮಾಹಿತಿ ತಂತ್ರಜ್ಞಾನದ ಮಹತ್ವದ ಹೆಜ್ಜೆಗಳು

**20** ರೈತರ ನೆರವಿಗೆ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ
• ಪ್ರಕಾಶ್ ಅಬ್ಬೂರು

**22** ಕೃಷಿ ಉತ್ಪನ್ನಗಳ ಆನ್‌ಲೈನ್ ವಹಿವಾಟು
• ಡಾ. ರಂಗನಾಥ್ ಕುಳಗಟ್ಟೆ

**28** 'ಹರೀಶ್' ಸಾಂತ್ವನ ಯೋಜನೆಗೆ ಚಾಲನೆ
• ಕೆ. ಚೇತನ್

**32** ಕರ್ನಾಟಕಕ್ಕೆ ಜೈನಧರ್ಮದ ವಾಸ್ತುಶಿಲ್ಪದ ಕೊಡುಗೆ ಸುಂದರ ಪ್ರಾಚೀನ ಬಸದಿಗಳು
• ಡಾ॥ ನಂಜುಂಡಸ್ವಾಮಿ

**37** ಪರಿಸರ ಸ್ನೇಹಿ ಅಂಗನವಾಡಿಗಳು: ಮೈಸೂರು ಮಾದರಿ
• ಪ್ರಕಾಶ್ ಅಬ್ಬೂರು

**39** ಅಡಿಕೆಯೊಂದಿಗೆ ಪಪ್ಪಾಯಿ; ಸಾರ್ಥಕ ಕೃಷಿ
• ಪ. ರಾಮಕೃಷ್ಣ ಶಾಸ್ತ್ರಿ

**41** ನಾರಿ ಸುವರ್ಣ ಕುರಿ
• ಡಾ॥ ಎಂ. ನಾರಾಯಣಸ್ವಾಮಿ

**43** ಕರ್ನಾಟಕ ಕುಲಪುರೋಹಿತ ; ಆಲೂರ ವೆಂಕಟರಾಯರು
• ಡಾ॥ ಸಂಗಮೇಶ್ ತಮ್ಮನಗೌಡ್ರ

**46** ಕರ್ನಾಟಕದ ಗಾಂಧಿ : ಹರ್ಡೇಕರ ಮಂಜಪ್ಪ
• ಬಸವರಾಜ ಆಕಳವಾಡಿ

**49** ತಂಬಾಕು ರಹಿತ ಜೀವನ ಸುಖ–ಸಂತೋಷಗಳ ಆಗರ
• ಡಾ॥ ಗುರುಲಿಂಗಪ್ಪ ಅಂಕದ



**24** ನೀರು ನೆಮ್ಮದಿ ಕಂಡ ಕೃಷಿಕರ ಗೆಲುವು...
• ಶೈಲಜಾ ಬೆಳ್ಳಂಕಿಮಠ

# ಓದುಗರಿಂದ...

**ಚಿಂತನಶೀಲ ಯಾನ**

ಏಪ್ರಿಲ್ 2016 ರ 'ಜನಪದ' ಬಹಳ ಇಷ್ಟವಾಯಿತು. ಬಾಬಾ ಸಾಹೇಬ್ ಡಾ. ಬಿ ಆರ್ ಅಂಬೇಡ್ಕರ್ ಅವರ ನೆನಪಿನಲ್ಲಿ ಮೂಡಿಬಂದ ಲೇಖನಗಳು ಅತ್ಯಂತ ವಿಚಾರಪೂರ್ಣವಾಗಿವೆ. 'ಕಾಲೇಜು ಕ್ಯಾಂಪಸ್‌ಗಳಲ್ಲಿ ಡಾ. ಅಂಬೇಡ್ಕರ್ ಚಿಂತನೆಗಳ ನವಯಾನ' □ ವಿಚಾರಯುಕ್ತ ಹಾಗೂ ಚಿಂತನಾರ್ಹ. ಪ್ರಚಲಿತ ವಿದ್ಯಮಾನದಲ್ಲಿ ಅವರ ಚಿಂತನೆಗಳು ಹಾಗೂ ವಿಚಾರಧಾರೆ ಅತ್ಯಂತ ಪ್ರಸ್ತುತವಾಗಿವೆ. ವರುಷಕ್ಕೊಮ್ಮೆ ಅವರ ಜನ್ಮದಿನ ಆಚರಿಸುವುದೊಂದನ್ನೇ ಗುರಿ ಮಾಡಿಕೊಳ್ಳದೆ ಅವರ ಚಿಂತನೆಗಳನ್ನು ಕಾರ್ಯರೂಪಕ್ಕೆ ಇಳಿಸಬೇಕಿದೆ.


**– ಗೌರೀಶ. ಎನ್**, ಚಿಕ್ಕಮಗಳೂರು

ಕಾಲೇಜು ಕ್ಯಾಂಪಸ್‌ಗಳಲ್ಲಿ ಡಾ. ಅಂಬೇಡ್ಕರ್ ಚಿಂತನೆಗಳ ನವಯಾನವು ವಿದ್ಯಾರ್ಥಿಗಳಿಗೆ ಡಾ. ಬಿ ಆರ್ ಅಂಬೇಡ್ಕರ್ ಅವರ ಪ್ರಖರ ಚಿಂತನಶೀಲ ವ್ಯಕ್ತಿತ್ವವನ್ನು ಹಾಗೂ ಅವರ ವಿಚಾರಧಾರೆಗಳನ್ನು ಅರ್ಥಮಾಡಿಕೊಡಲು ಮಾಡುತ್ತಿರುವ ಪ್ರಯತ್ನದ ಕಳಕಳಿಯನ್ನು ತೋರಿಸುತ್ತದೆ. ಸಮಾಜದಲ್ಲಿ ಮೂಲಭೂತ ಬದಲಾವಣೆ ತರಲು ಶ್ರಮಿಸಿದ ಮಹಾನ್ ಮಾನವತಾವಾದಿ ಅವರು. ಅವರ ಸಾಧನೆಯ ಚಿತ್ರಣವನ್ನು ಇಡಿಯಾಗಿ ನೀಡಿದ 'ಜನಪದ' ಸಂಚಿಕೆಗೆ ವಂದನೆಗಳು.

**– ಟಿ. ಸೋಮಶೇಖರ**, ತಿಪಟೂರು

ಬಾಬಾ ಸಾಹೇಬ್ ಅಂಬೇಡ್ಕರ್ ಭಾರತದ ವ್ಯವಸ್ಥೆ ಬೆಳಕು. ದೇಶದ ಸಮಸ್ತ ಶೋಷಿತ ಬಹುಜನ ಸಮಾಜದ ಆಶಾಕಿರಣ. ಅವರ 125ನೇ ಜಯಂತ್ಯುತ್ಸವದ ನೆನಪಿನಲ್ಲಿ ಮೂಡಿಬಂದ ಸಂಚಿಕೆಯು ಬಹಳ ಆಕರ್ಷಣೀಯವಾಗಿದೆ. ಧನ್ಯವಾದಗಳು.

**– ಸಚಿನ್ ಬಿ ರಾಜಗೋಳೀ**, ರಾಯಬಾಗ




**ಅಪೂರ್ವ ಮಾನವತಾವಾದಿಗೆ ನಮ್ಮ ನಮನಗಳು**

ಏಪ್ರಿಲ್ 'ಜನಪದ' ನಮ್ಮ ಸಂಗ್ರಹದಲ್ಲಿ ಇಟ್ಟು ಕೊಳ್ಳಬೇಕಾದಂಥ ಸಂಚಿಕೆ. ಅಂಬೇಡ್ಕರ್ ಜೀವನದ ವಿವಿಧ ಘಟ್ಟಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳು, ಅವರ ಅಗಾಧ ಜ್ಞಾನಭಂಡಾರ, ಅವರು ರಚಿಸಿರುವ ಕೃತಿಗಳ ವಿವರ ಎಲ್ಲವನ್ನೂ ಓದಿ ಬಹಳಷ್ಟು ಸಂತೋಷವಾಯಿತು. ಅಪೂರ್ವ ಮಾನವತಾವಾದಿಗೆ ನಮ್ಮ ನಮನಗಳು.

**–ಕೆ. ಪ್ರಸಾದ್**, ಕುದೂರು

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಮಹಾ ಮಾನವತಾವಾದಿ, ಭಾರತದ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ವಿಶೇಷ ಸಂಚಿಕೆ ಬಹಳ ಅರ್ಥಪೂರ್ಣವಾಗಿ ಮೂಡಿಬಂದಿದೆ. ಬಾಬು ಜಗಜೀವನ್ ರಾಮ್ ಅವರ ಕುರಿತಾದ ಲೇಖನವೂ ಗಮನ ಸೆಳೆಯಿತು. ಇಬ್ಬರೂ ಮಹಾನ್ ನಾಯಕರ ಪ್ರಜಾತಂತ್ರದ ಮೌಲಿಕ ಚಿಂತನೆಗಳು ಸದಾ ಸ್ಮರಣೀಯ. ಎಲ್ಲ ಲೇಖನಗಳು ಗಮನ ಸೆಳೆದವು.

ಆಯ–ವ್ಯಯ 2016–17 ರ ಸಾಲಿನ ಮುಖ್ಯಾಂಶಗಳ ವರದಿಗೆ ಧನ್ಯವಾದಗಳು.

**– ಹಾಜಿ ಎ ಅಬ್ದುಲ್ ನಬಿ ಚಿಪ್ಪಿ**, ಸಿರಗುಪ್ಪ

ಸಂಚಿಕೆ ಡಾ. ಬಿ ಆರ್ ಅಂಬೇಡ್ಕರರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಪರಿಚಯಿಸಿತು. ಹೋರಾಟಗಾರರಾಗಿ, ಅಧ್ಯಾಪಕರಾಗಿ, ನಮ್ಮ ಹೆಮ್ಮೆಯ ಸಂವಿಧಾನದ ಕರ್ತೃವಾಗಿ ಅವರ ಸಾಧನೆಗಳ ಪಟ್ಟಿ ಅಪರಿಮಿತ. ಉತ್ತಮ ಸಂಚಿಕೆಗಾಗಿ ಧನ್ಯವಾದಗಳು. ಬಾಬು ಜಗಜೀವನರಾಮ್ ಅವರ ಕುರಿತಾದ ಲೇಖನವೂ ಸಕಾಲಿಕವಾಗಿದೆ.

**–ಕೆ. ರಮೇಶ್**, ನೆಲಮಂಗಲ

ಅಂಬೇಡ್ಕರ್ ಜೀವನ ಕುರಿತ ಲೇಖನಗಳು ಒಂದಕ್ಕಿಂತ ಒಂದು ಉತ್ತಮವಾಗಿದ್ದು, ಸಂಚಿಕೆ ಅಪಾರವಾಗಿ ಸೆಳೆಯಿತು. ಪ್ರಕಾಂಡ ಪಂಡಿತರಾಗಿದ್ದ ಅಂಬೇಡ್ಕರರ ಸಾಮಾಜಿಕ ಕ್ರಾಂತಿಯ ಘಟ್ಟಗಳು, ಅವರ ಸಂದೇಶಗಳು ಯುವಪೀಳಿಗೆಗೆ ದಾರಿದೀಪವಾಗಿವೆ. ಅವರ ಸಂದೇಶದ

ಸ್ವ– ಸುಧಾರಣೆ

ಸ್ವ– ಏಳ್ಗೆ

ಸ್ವಾವಲಂಬನೆ

ಸ್ವಾಭಿಮಾನ

ಸ್ವ ನಂಬಿಕೆಗಳು

ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕಾದ ಜೀವನ ಮೌಲ್ಯಗಳು ಎಂಬುದನ್ನು ನೆನಪಿಡಬೇಕು.

**– ಜಿ. ಮಂಜುನಾಥ**, ಹರಪನಹಳ್ಳಿ

ಜನಪದಕ್ಕೆ ಚಂದಾ ಹಣವನ್ನು ಡಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು
**ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಣಾ ಶಾಖೆ ವಿಭಾಗ**
ವಾರ್ತಾಸೌಧ, 17, ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು–560 001





3 ನುಡಿದಂತೆ ನಡೆಯುತ್ತಿದ್ದೇವೆ...
ಸಾಧನೆಯ ಮೂರು ವರ್ಷಗಳು

# ಸಂಭ್ರಮಿಸಲು ಸರ್ಕಾರಕ್ಕೆ ಸಾಕಷ್ಟು ಕಾರಣಗಳಿವೆ...

▪ ಎನ್. ಆರ್. ವಿಶುಕುಮಾರ್

**"ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಇದು ಕನ್ನಡ ಆದಿಕವಿ ಪಂಪ ತನ್ನ ನೆಚ್ಚಿನ ನೆಲೆಯಾದ ಬನವಾಸಿಯನ್ನು ಕುರಿತು ಆಡಿದ ಮಾತು. ಕರ್ನಾಟಕವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡಿರುವ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಆಶಯದ ಮಾತುಗಳನ್ನು ಹಲವಾರು ಸಂದರ್ಭಗಳಲ್ಲಿ ಆಡಿದ್ದಾರೆ. ಕರ್ನಾಟಕವೇ ನನ್ನ ಕರ್ಮಭೂಮಿ, ಕನ್ನಡವೇ ನನ್ನ ಉಸಿರು; ನಾಡು–ನುಡಿಯ ಸಂರಕ್ಷಣೆಯೆ ನನ್ನ ಧ್ಯೇಯ; ಸಾಮಾಜಿಕ ನ್ಯಾಯವೆ ನನ್ನ ಆದ್ಯತೆ; ಬಡವರ ಅಭ್ಯುದಯವೇ ನನ್ನ ಪರಮಗುರಿ ಹೀಗೆ ಅವರ ಸದಾಶಯಗಳ ಸರಣಿ ಸಾಗುತ್ತದೆ.**

2013 ಮೇ 13 ರಂದು ಈ ನಾಡಿನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯನವರ ಮುಂದೆ ಹಲವಾರು ಸವಾಲುಗಳಿದ್ದವು. ಹಲವಾರು ಸಂದರ್ಭಗಳಲ್ಲಿ ಅವರೇ ಹೇಳಿಕೊಂಡಿರುವಂತೆ ಕೋಮು ಸೌಹಾರ್ದತೆಗೆ ಹೆಸರಾಗಿದ್ದ ಕರ್ನಾಟಕದಲ್ಲಿ ಕೋಮು ಸೌಹಾರ್ದತೆಯ ವಾತಾವರಣ ಕಲುಷಿತವಾಗಿತ್ತು. ಆರ್ಥಿಕ ಶಿಸ್ತಿಗೆ ಬದ್ಧವಾಗಿದ್ದ ಕರ್ನಾಟಕದಲ್ಲಿ ವಿತ್ತೀಯ ಶಿಸ್ತು ಅಪಾಯದ ಅಂಚಿನಲ್ಲಿತ್ತು. ದಕ್ಷ ಆಡಳಿತಕ್ಕೆ ಹೆಸರಾಗಿದ್ದ ಕರ್ನಾಟಕದ ಖ್ಯಾತಿ ಮಸುಕಾಗುತ್ತಿತ್ತು. ರಾಜ್ಯದ ಸ್ಥಿರ ರಾಜಕೀಯ ಅಸ್ಥಿರತೆಯ ಅಂಚಿಗೆ ಬಂದು ನಿಂತಿತ್ತು.

ಇಂತಹ ಸಂಕಷ್ಟದ ಸ್ಥಿತಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಸಿದ್ದರಾಮಯ್ಯನವರು ಈ ಸವಾಲುಗಳನ್ನು ದಿಟ್ಟತನದಿಂದಲೇ ಸ್ವೀಕರಿಸಿದರು. ತಮ್ಮ ಸುದೀರ್ಘ ರಾಜಕೀಯದ ಅನುಭವಗಳನ್ನು ಅಡಿಗಲ್ಲನ್ನಾಗಿಟ್ಟುಕೊಂಡು ಕರ್ನಾಟಕದ ಅಭಿವೃದ್ಧಿ ಸೌಧ ನಿರ್ಮಿಸುವ ಸಂಕಲ್ಪ ತೊಟ್ಟರು. ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲೇ ರಾಜ್ಯದ ಶಕ್ತಿ ವಿಧಾನಸೌಧದ ಮೂರನೇ ಮಹಡಿಯ ಸಚಿವ ಸಂಪುಟ ಸಭಾಂಗಣಕ್ಕೆ ಎದೆಯುಬ್ಬಿಸಿ ನಡೆದರು. ನಾಡಿನ ಜನತೆಯ ಒಳಿತನ್ನೇ ಉಸಿರಾಗಿಸಿಕೊಂಡಿದ್ದ ತಮ್ಮ ಮಾತ್ರ

ಹೃದಯದಿಂದ ಬಡ ಜನತೆಯ ಮೇಲೆ ಮಮತೆಯ ಮಹಾಪೂರವನ್ನೇ ಹರಿಸಿದರು. ಬಡಜನರ ಸಂಕಷ್ಟ ನಿವಾರಿಸುವ ದಿಟ್ಟ ನಿರ್ಧಾರಗಳನ್ನು ಪ್ರಕಟಿಸಿದರು. ನಾಡಿನ ಇತಿಹಾಸದಲ್ಲಿಯೇ ಮೊದಲಬಾರಿಗೆ ಏಕಸಚಿವ ಸಂಪುಟ ಸಭೆ ನಡೆಸಿ ಅನ್ನಭಾಗ್ಯ, ಕ್ಷೀರಧಾರೆ, ಋಣಮುಕ್ತ, ವಸತಿಭಾಗ್ಯ..... ಇತ್ಯಾದಿ ಜನಪರ ಯೋಜನೆಗಳನ್ನು ಜಾರಿಗೊಳಿಸುವುದಾಗಿ ಘೋಷಣೆ ಮಾಡಿದರು.

ಸಿದ್ದರಾಮಯ್ಯನವರ ಈ ದಿಟ್ಟ ನಡೆಯನ್ನು ನೋಡಿ ನಾಡಿನ ಜನತೆ ಹುಬ್ಬೇರಿಸಿತು. ಹಲವರು ಅನುಮಾನ ವ್ಯಕ್ತಪಡಿಸಿದರು. ಕೆಲವರು ಕುಹಕವಾಡಿದರು. ಇಂತಹ ಜನಾನುರಾಗಿ ಯೋಜನೆಗಳ ಮೂಲಕ ಇವರು ಬೊಕ್ಕಸವನ್ನೇ ಬರಿದುಗೊಳಿಸುತ್ತಾರೆ ಎಂದರು. ಆದರೆ ಸಿದ್ದರಾಮಯ್ಯನವರು ಈ ಕುಟುಕು ಮಾತುಗಳಿಂದ ಎದೆಗುಂದಲಿಲ್ಲ. ತಮ್ಮ ನುಡಿಗಳನ್ನು ನಡೆಯಲ್ಲಿ ತೋರಿಸಿದರು. ನುಡಿದಂತೆ ನಡೆದಿದ್ದೇವೆ ಎನ್ನುವ ಘೋಷವಾಕ್ಯವನ್ನೇ ರಚಿಸಿ ಅದರಂತೆ ನಡೆದರು.

ಈ ಹಿಂದೆ ಹಣಕಾಸು ಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿ ಆರು ಆಯವ್ಯಯಗಳನ್ನು ಮಂಡಿಸಿದ್ದ ಅನುಭವದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳಾಗಿ ತಮ್ಮ ಪ್ರಥಮ ಆಯ–ವ್ಯಯವನ್ನು ಆರ್ಥಿಕ ತಜ್ಞರುಗಳು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಂಡಿಸಿದರು. ಇಡೀ ದೇಶವೇ ಜಾಗತೀಕರಣದ ಜಾಡಿನಲ್ಲಿ ಸಾಗುತ್ತಿರುವಾಗ ಸಿದ್ದರಾಮಯ್ಯನವರು ತಮ್ಮ ಜನಪರ ಕಾಳಜಿ ಸಾಮಾಜಿಕ ನ್ಯಾಯದ ಬದ್ಧತೆಯನ್ನು ಕೇಂದ್ರ ಬಿಂದುವನ್ನಾಗಿಸಿಕೊಂಡು ಸಾಮಾಜಿಕ – ಆರ್ಥಿಕ ಆಶಯಗಳನ್ನು ಹದವರಿತು ಬೆರೆಸಿ ಹೊಸ ಮಾರ್ಗದ ಆಯವ್ಯಯವನ್ನು ಪರಿಚಯಿಸಿದರು. ಇದರಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯೂ ಇತ್ತು. ಆಧುನಿಕ ಅಭಿವೃದ್ಧಿ ಮಾದರಿಯ ಮುನ್ನೋಟಗಳೂ ಇದ್ದವು. ಹೀಗಾಗಿ ಈ ಆಯವ್ಯಯ ವಿನೂತನವಾದ ಸೋಷಿಯಲ್ ಎಂಜಿನಿಯರಿಂಗ್ ಮಾದರಿಯ ಹೊಸ ಹಾದಿ ಎಂದು ಆರ್ಥಿಕ ತಜ್ಞರಿಂದ ಮೆಚ್ಚುಗೆ ಪಡೆಯಿತು.

ಯಾವುದೇ ಸರ್ಕಾರದ ಪ್ರಥಮ ಆದ್ಯತೆ ಸಮಾಜದಲ್ಲಿ ನೊಂದವರ, ಅಸಹಾಯಕರ, ದುರ್ಬಲ ವರ್ಗದವರ ರಕ್ಷಣೆ ಎನ್ನುವುದು ನಾಡಿದ ಮುಖ್ಯಮಂತ್ರಿಗಳ ಗಟ್ಟಿ ನಂಬುಗೆಯಾಗಿತ್ತು. ಅಂತೆಯೆ ಅವರು ಸಾಮಾಜಿಕ ಕಳಕಳಿಯುಳ್ಳ ಯೋಜನೆಗಳಿಗೆ ತಮ್ಮ ಪ್ರಥಮ ಆಯವ್ಯಯದಲ್ಲಿ ಪ್ರಾಧಾನ್ಯತೆ ನೀಡಿದರು. ಹೀಗಾಗಿ ಹಸಿವು ಮುಕ್ತ ಕರ್ನಾಟಕ ಆಶಯದ "ಅನ್ನಭಾಗ್ಯ" ಯೋಜನೆ ಸರ್ಕಾರದ ಪ್ರಥಮ ಆದ್ಯತೆಯಾಯಿತು. ಸಾಲದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಾ ಮಾನಸಿಕವಾಗಿ ಹಿಂಸೆ ಅನುಭವಿಸುತ್ತಿದ್ದ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ, ಅಲ್ಪ ಸಂಖ್ಯಾತ ಫಲಾನುಭವಿಗಳಿಗೆ ಸಾಲದಿಂದ ಬಿಡುಗಡೆಯ ಭಾಗ್ಯ ದೊರೆಯಿತು. ಗ್ರಾಮೀಣ ಕರ್ನಾಟಕದಲ್ಲಿ ರೈತಾಪಿ ವರ್ಗಕ್ಕೆ ಆರ್ಥಿಕ ಚೈತನ್ಯ ನೀಡಿದ್ದ ಹೈನುಗಾರಿಕೆಗೆ ಪ್ರೋತ್ಸಾಹ ನೀಡಲು ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ 2 ರೂ.ಗಳ ಪ್ರೋತ್ಸಾಹ ಧನವನ್ನು ದುಪ್ಪಟ್ಟು ಮಾಡಿ 4 ರೂ.ಗಳಿಗೆ ಹೆಚ್ಚಿಸಲಾಯಿತು. ಮನೆ ಕಟ್ಟಿಕೊಳ್ಳುವುದನ್ನೇ ಜೀವನದ ಗುರಿಯಾಗಿಸಿಕೊಂಡಿದ್ದ ಬಡವರಿಗೆ ವಸತಿಭಾಗ್ಯ ಯೋಜನೆಯನ್ನು ಜಾರಿಗೊಳಿಸಿದರು.

ಮುಖ್ಯಮಂತ್ರಿಗಳು ತಮ್ಮ ಎರಡನೇ ಆಯವ್ಯಯದಲ್ಲಿ ಪ್ರಥಮ ಆಯವ್ಯಯದಲ್ಲಿ ಜಾರಿಗೊಳಿಸಿದ್ದ ಯೋಜನೆಗಳ ಫಲಶೃತಿಯನ್ನು ಆಧರಿಸಿ ಆ ಯೋಜನೆಗಳನ್ನು ಇನ್ನಷ್ಟು ಸಶಕ್ತಗೊಳಿಸಿದರು. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ/ಪಂಗಡದವರಿಗೆ ಯೋಜನಾ ಕಾರ್ಯಕ್ರಮದ ಅನುದಾನದಲ್ಲಿ ಶೇ. 24 ರಷ್ಟು ಹಣವನ್ನು ಮೀಸಲಿರಿಸಿ ಕಡ್ಡಾಯವಾಗಿ ಖರ್ಚು ಮಾಡುವ ಕಾಯಿದೆಯನ್ನೇ ಜಾರಿಗೆ ತಂದರು. ಆಧುನಿಕ ಅಭಿವೃದ್ಧಿಯ ಮಾದರಿಗೆ ಪೂರಕವಾಗುವಂತೆ ನೂತನ ಕೈಗಾರಿಕೆ ನೀತಿ ರೂಪಿಸಿದರು. ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ಸ್ಥಾಪನೆಗೆ ಉತ್ತೇಜನ ನೀಡಲು ವಿಶೇಷ ಪ್ರೋತ್ಸಾಹ ಸಹಾಯಧನದ ಸವಲತ್ತು ಕಲ್ಪಿಸಿದರು. ಆಡಳಿದತದಲ್ಲಿ ಮಾಹಿತಿ ತಂತ್ರಜ್ಞಾನ ಅನುಕೂಲತೆಗಳನ್ನು ಬಳಸಿಕೊಳ್ಳಲು "ಮೊಬೈಲ್ ಒನ್" ಎನ್ನುವ ವೇದಿಕೆಗೆ ಅನುವು ಮಾಡಿಕೊಟ್ಟರು. ನೂರಾರು ಸರ್ಕಾರಿ ಮತ್ತು ಖಾಸಗಿ ಸೇವೆಗಳನ್ನು ಅಂಗೈನಲ್ಲಿಯೇ ಒದಗಿಸುವ ಕರ್ನಾಟಕ ಸರ್ಕಾರದ ಈ ಪ್ರಯತ್ನ ಇಡೀ ರಾಷ್ಟ್ರದ ಗಮನ ಸೆಳೆಯಿತು. ಮೂರು ಮತ್ತು ನಾಲ್ಕನೆ ಆಯವ್ಯಯಗಳಲ್ಲಿ ತಮ್ಮ ಆದ್ಯತೆಯ ವಲಯಗಳನ್ನು ಇನ್ನಷ್ಟು ಸದೃಢಗೊಳಿಸಲು ಅವರು ಭದ್ರಬುನಾದಿ ಹಾಕಿದ್ದಾರೆ.

### ಆನ್‌ಲೈನ್ ಇ- ಕೃಷಿ ಮಾರುಕಟ್ಟೆ

ಕರ್ನಾಟಕ ಸರ್ಕಾರದ ಹಲವಾರು ಯೋಜನೆಗಳು ಇಂದು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದು ಗಣನೀಯ ಸಾಧನೆ ಮಾಡಿವೆ. ಇವೆಲ್ಲಕ್ಕೂ ಮಕುಟ ಪ್ರಾಯವಾಗಿರುವ ಆನ್‌ಲೈನ್ ಇ ಕೃಷಿ ಮಾರುಕಟ್ಟೆ ವ್ಯವಸ್ಥೆ ಇತ್ತೀಚಿನ ವರ್ಷಗಳಲ್ಲಿ ಇಡೀ ರಾಷ್ಟ್ರದಲ್ಲಿಯೇ ಯಶಸ್ವಿಯಾಗಿರುವ ಅಪರೂಪದ ಯೋಜನೆ. ರೈತರನ್ನು ದಲ್ಲಾಳಿಗಳ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿ ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರಕಿಸುತ್ತಿರುವ ಈ ಯೋಜನೆಯ ಯಶಸ್ಸಿಗೆ ಕೇಂದ್ರ ಸರ್ಕಾರವೇ ಮರುಳಾಗಿದೆ. ಕರ್ನಾಟಕ ಸರ್ಕಾರದ ಈ ಪ್ರತಿಷ್ಠಿತ ಯೋಜನೆಯನ್ನು ಯಥಾವತ್ತಾಗಿ ರಾಷ್ಟ್ರಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವುದೇ ಈ ಯೋಜನೆಯ ಯಶಸ್ಸಿಗೆ ಸಾಕ್ಷಿ.

### ಬೆಂಗಳೂರು: ಭಾರತದ ನವೋದ್ಯಮ ರಾಜಧಾನಿ



ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಕರ್ನಾಟಕವು ರಾಷ್ಟ್ರದಲ್ಲಿಯೇ ಮಂಚೂಣಿ ರಾಜ್ಯವೆಂದು ಹೆಸರಾಗಿ ಭಾರತದ ಸಿಲಿಕಾನ್ ಕಣಿವೆ ಎಂದೇ ಖ್ಯಾತಿಯಾಗಿದೆ. ಈ ನಿಟ್ಟಿನಲ್ಲಿಯೇ ಮುಂದುವರೆದಿರುವ ಬೆಂಗಳೂರು ನಗರ ನವೋದ್ಯಮಗಳ ಸ್ಥಾಪನೆಗೆ ಒತ್ತಾಸೆಯಾಗಿ ನಿಂತು ಭಾರತದ ನವೋದ್ಯಮಗಳ ರಾಜಧಾನಿ ಎಂದೇ ಹೆಸರಾಗಿದೆ. ಜಗತ್ತಿನಲ್ಲಿ ನವೋದ್ಯಮಗಳ ಸ್ಥಾಪನೆಯಲ್ಲಿ ಹೆಸರಾಗಿರುವ ಪ್ರಥಮ ಸಾಲಿನ ಇಪ್ಪತ್ತು ನಗರಗಳ ಪಟ್ಟಿಯಲ್ಲಿ ಸ್ಥಾನಗಳಿಸಿರುವ ಭಾರತದ ಏಕೈಕ ನಗರ– ಬೆಂಗಳೂರು. ಈ ಸರ್ಕಾರದ ಉದ್ಯಮ ಉತ್ತೇಜಕ ನೀತಿಗಳು ಮತ್ತು ಬಂಡವಾಳ ಸ್ನೇಹಿ ಕ್ರಮಗಳೇ ಇದಕ್ಕೆ ಪ್ರಮುಖ ಕಾರಣಗಳಾಗಿವೆ.

### ಭಾರತದ ಸ್ವಚ್ಛ ನಗರ: ಮೈಸೂರು

ರಾಷ್ಟ್ರದಲ್ಲಿ ರೂಪಿತವಾಗುವ ಯಾವುದೇ ಯೋಜನೆಗಳ ಅನುಷ್ಠಾನದಲ್ಲಿ ಕರ್ನಾಟಕವೇ ಸದಾ ಮುಂದು. ಇತ್ತೀಚೆಗೆ ಭಾರತ ಸರ್ಕಾರ ಆರಂಭಿಸಿರುವ ಸ್ವಚ್ಛ ಭಾರತ್ ಅಭಿಯಾನದ ಅಡಿಯಲ್ಲಿ ನಮ್ಮ ಮೈಸೂರು ನಗರ ಸತತವಾಗಿ ಎರಡನೇ ಬಾರಿಗೆ ಭಾರತದ ಪ್ರಥಮ ಸ್ವಚ್ಛ ನಗರವೆಂಬ ಖ್ಯಾತಿಯನ್ನು ಪಡೆದಿದೆ. ಕರ್ನಾಟಕದ ಹಲವಾರು ನಗರ ಮತ್ತು ಪಟ್ಟಣಗಳು ಭಾರತದ ಸ್ವಚ್ಛ ನಗರಗಳ ಮೇಲ್ಪಂಕ್ತಿಯಲ್ಲಿವೆ.

### ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ



ಕರ್ನಾಟಕ ಸದಾ ಪ್ರಗತಿಪರ ಚಿಂತನೆಗಳಿಗೆ ಹೆಸರಾದ ರಾಜ್ಯ. ಸಾಮಾಜಿಕ ನ್ಯಾಯ ವಿತರಣೆಯಲ್ಲಿ ಕರ್ನಾಟಕಕ್ಕೆ ನೂರಾರು ವರ್ಷಗಳ ಇತಿಹಾಸವೇ ಇದೆ. ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿಯನ್ನು ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಜಾರಿಗೆ ತಂದ ಖ್ಯಾತಿ ಕರ್ನಾಟಕಕ್ಕಿದೆ. ಈ ಪರಂಪರೆಯಲ್ಲಿ ಮುಂದುವರೆದಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪ್ರತಿ ಕುಟುಂಬದ ಸಾಮಾಜಿಕ –ಶೈಕ್ಷಣಿಕ ಸಮೀಕ್ಷೆಯನ್ನು



ಯಶಸ್ವಿಯಾಗಿ ನಡೆಸಿದೆ. ಈ ಸಮೀಕ್ಷೆಯನ್ನು ಆಧರಿಸಿ ಜನಸಂಖ್ಯೆಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸುವ, ಜಾರಿಗೊಳಿಸುವ ಉದ್ದೇಶ ಈ ಸರ್ಕಾರಕ್ಕಿದೆ.

### ದಕ್ಷ ಆಡಳಿತ

ಕರ್ನಾಟಕ ಲಾಗಾಯ್ತಿನಿಂದಲೂ ಮಾದರಿ ಆಡಳಿತಕ್ಕೆ ಹೆಸರಾದ ರಾಜ್ಯ. ಮೈಸೂರು ಅರಸರ ಆಡಳಿತದ ಬಗ್ಗೆ "ಮಾದರಿ ಮೈಸೂರು" ಎನ್ನುವ ನುಡಿಗಟ್ಟು ರಾಷ್ಟ್ರದಲ್ಲಿ ಚಾಲ್ತಿಯಲ್ಲಿತ್ತು. ಸಿದ್ದರಾಮಯ್ಯನವರ ಸರ್ಕಾರದ ಆಡಳಿತ ದಕ್ಷತೆಯ ಬಗ್ಗೆ ಕೂಡ ರಾಷ್ಟ್ರಮಟ್ಟದಲ್ಲಿ ಒಳ್ಳೆಯ ಅಭಿಪ್ರಾಯಗಳಿವೆ. ಇತ್ತೀಚೆಗೆ ಪ್ರತಿಷ್ಠಿತ ಸಂಸ್ಥೆಯೊಂದು ನಡೆಸಿದ ರಾಜ್ಯಗಳ ಅಡಳಿತದ ಬಗೆಗಿನ ಸಮೀಕ್ಷೆಯಲ್ಲಿ ಕರ್ನಾಟಕವು ಸಾಮಾನ್ಯ ಆಡಳಿತದಲ್ಲಿ ರಾಷ್ಟ್ರಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಸಂಕೀರ್ಣವಾದ ಆಡಳಿತ ವ್ಯವಸ್ಥೆಯ ಈ ದಿನಮಾನಗಳಲ್ಲಿ ಕರ್ನಾಟಕ ರಾಜ್ಯವು ದಕ್ಷತೆಯ ಆಡಳಿತ ನೀಡುವ ನಿಟ್ಟಿನಲ್ಲಿ ರಾಷ್ಟ್ರದಲ್ಲಿ ಮೂರನೇ ಸ್ಥಾನ ಪಡೆದಿರುವುದು ಸಣ್ಣ ಸಾಧನೆಯೇನಲ್ಲ.

### ಗಾಂಧೀಜಿ ಕನಸು ಕರ್ನಾಟಕದಲ್ಲಿ ನನಸು

ಕರ್ನಾಟಕವು ಸದಾ ರಾಷ್ಟ್ರ ನೇತಾರರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆಯುವ ರಾಜ್ಯ. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಕರ್ನಾಟಕ ರಾಜ್ಯವು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತದಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ ದಾಪುಗಾಲು ಹಾಕಿ ನಡೆಯುತ್ತಿದೆ. ಗಾಂಧೀಜಿ ಕಂಡಿದ್ದ ಗ್ರಾಮೀಣಾಭಿವೃದ್ಧಿಯ ಕನಸುಗಳೆಲ್ಲ ಈ ಸರ್ಕಾರದ ಆಡಳಿತದಲ್ಲಿ ನನಸಾಗಿವೆ. ಇದನ್ನು ಜನರಿಗೆ ಮನವರಿಕೆ ಮಾಡಿಕೊಡಲು ಗಾಂಧೀಜಿ ಜನಿಸಿದ ಅಕ್ಟೋಬರ್ ತಿಂಗಳಲ್ಲಿ "ಗಾಂಧೀಜಿ ಕನಸು ಕರ್ನಾಟಕದಲ್ಲಿ ನನಸು" ಎನ್ನುವ ಹೆಸರಿನಲ್ಲಿ ರಾಜ್ಯಾದ್ಯಂತ ಒಂದು ಪ್ರಚಾರ ಆಂದೋಲನವನ್ನೇ ಆರಂಭಿಸಿ ಯಶಸ್ವಿಯಾಗಿ ನಡೆಸಲಾಯಿತು. ಗಾಂಧೀಜಿ ಗ್ರಾಮ ಸ್ವಚ್ಛತೆಯನ್ನು ಪ್ರತಿಪಾದಿಸುತ್ತಿದ್ದರು. ಹಳ್ಳಿಗಳಿಗೆ ಪ್ರಾಥಮಿಕ ಮೂಲ

ಸೌಲಭ್ಯಗಳನ್ನು ಒದಗಿಸಬೇಕೆಂದು ಪಟ್ಟು ಹಿಡಿದಿದ್ದರು. ಈ ಸರ್ಕಾರ ಗಾಂಧೀಜಿಯವರ ಜೀವನ ಮೌಲ್ಯಗಳನ್ನು ಗೌರವಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ನಿರ್ಮಾಣದಲ್ಲಿ ರಾಷ್ಟ್ರದಲ್ಲಿಯೇ ಕರ್ನಾಟಕದ್ದು ಅದ್ವಿತೀಯ ಸಾಧನೆ. ಈ ಸಾಧನೆಗೆ ರಾಷ್ಟ್ರ ಪುರಸ್ಕಾರವು ದೊರೆತಿದೆ.

ಕುಡಿಯುವ ನೀರಿನ ಪೂರೈಕೆಯಲ್ಲಿ ಕೂಡ ಕರ್ನಾಟಕ ರಾಜ್ಯ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ ಅಲ್ಪದರದಲ್ಲಿ ಸ್ವಚ್ಛ ಕುಡಿಯುವ ನೀರನ್ನು ಪೂರೈಸುತ್ತಿದೆ. ಕರ್ನಾಟಕದ ಈ ಸಾಧನೆಯನ್ನು ಇಡೀ ರಾಷ್ಟ್ರವೇ ನಿಬ್ಬೆರಗಾಗಿ ನೋಡುತ್ತಿದ್ದು ಈ ಮಾದರಿಯನ್ನು ತಮ್ಮ ರಾಜ್ಯಗಳಲ್ಲಿಯೂ ಅಳವಡಿಸಿಕೊಳ್ಳುತ್ತಿವೆ.

### ಕೃಷಿ ಭಾಗ್ಯ

ರಾಷ್ಟ್ರದಲ್ಲಿ ರಾಜಾಸ್ಥಾನವನ್ನು ಹೊರತುಪಡಿಸಿದರೆ ಅತಿ ಹೆಚ್ಚು ಒಣಭೂಮಿ ಪ್ರದೇಶವನ್ನು ಹೊಂದಿರುವ ರಾಜ್ಯ ಕರ್ನಾಟಕ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡಿರುವ ಸರ್ಕಾರವು ಒಣಭೂಮಿ ಬೇಸಾಯದ ಅಭಿವೃದ್ಧಿಯನ್ನು ತನ್ನ ಆದ್ಯತಾ ವಲಯವನ್ನಾಗಿ ಪರಿಗಣಿಸಿದೆ. ಕರ್ನಾಟಕ ಕೃಷಿ ವಲಯದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಜಾರಿಗೊಳಿಸುತ್ತಿದೆ. ಮಳೆಗಾಲದಲ್ಲಿ ಬೀಳುವ ಮಳೆ ನೀರನ್ನು


ಕೃಷಿ ಹೊಂಡಕ್ಕೆ ಚಾಲನೆ

ಸಂಗ್ರಹಿಸಿ ಅದನ್ನು ಬೇಸಿಗೆ ಕಾಲದಲ್ಲಿ ಬಳಸಿಕೊಳ್ಳಲು ಕೃಷಿ ಹೊಂಡಗಳನ್ನು ನಿರ್ಮಿಸುತ್ತಿದೆ. ಅಲ್ಪ ನೀರಾವರಿ ಸೌಲಭ್ಯ ಬಳಸಿಕೊಂಡು ಕೃಷಿ ಮತ್ತು ತೋಟಗಾರಿಕೆ ಚಟುವಟಿಕೆ ಹಮ್ಮಿಕೊಳ್ಳಲು ಪಾಲಿಹೌಸ್ ನಿರ್ಮಿಸುತ್ತಿವೆ. ರೈತರು ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಅಲ್ಪ ನೀರಿನ ಆಸರೆಯೊಂದಿಗೆ ಅಧಿಕ ಫಸಲು ಪಡೆಯುತ್ತಿದ್ದಾರೆ.

ಆರಂಭದಲ್ಲಿ ಮಂದಗತಿಯಲ್ಲಿ ಸಾಗಿದ್ದ "ಕೃಷಿಭಾಗ್ಯ" ಯೋಜನೆ ಇದೀಗ ಶರವೇಗದಲ್ಲಿ ಜಾರಿಯಾಗುತ್ತಿದ್ದು ಕೃಷಿ ಸಚಿವರ ಮೊಗದಲ್ಲಿ ಮಂದ ಹಾಸ ಮೂಡಿಸಿದೆ. ಉತ್ತರ ಕರ್ನಾಟಕ ಭಾಗದ ರೈತರುಗಳು ಕೃಷಿ ಭಾಗ್ಯದ ಯಶಸ್ಸಿನಿಂದ ಬೀಗುತ್ತಿದ್ದು ಇದು ನಮ್ಮ ಭಾಗ್ಯದ ಬಾಗಿಲನ್ನೇ ತೆರೆದಿದೆ ಎಂದು ಸಂತಸ ಪಡುತ್ತಿದ್ದಾರೆ.

### ಎಲ್ಲರಿಗೂ ಆರೋಗ್ಯ ಎಲ್ಲೆಡೆ ಆರೋಗ್ಯ

ಇದು ಕರ್ನಾಟಕ ಸರ್ಕಾರದ ಹೊಸ ಘೋಷವಾಕ್ಯ ಆರೋಗ್ಯ ವಲಯದಲ್ಲಿ ಸರ್ಕಾರದ ಹೆಜ್ಜೆ ಗುರುತುಗಳು ಸ್ಪಷ್ಟವಾಗಿ ಮೂಡಿದ್ದು ಹಲವಾರು ಹೊಸ ಯೋಜನೆಗಳು ಜಾರಿಯಾಗಿವೆ. ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ಕೂಡ "ರಾಜೀವ್ ಆರೋಗ್ಯ ಭಾಗ್ಯ" ಎನ್ನುವ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಫಲಾನುಭವಿಗಳಿಂದ ಅಲ್ಪ ಕೊಡುಗೆ ಪಡೆದು ಮಾರಣಾಂತಿಕ ಖಾಯಿಲೆಗಳಿಗೆ ಅತ್ಯಾಧುನಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುವ ಈ ಯೋಜನೆ ಈಗ ಸಮಾಜದ ಎಲ್ಲ ಜನರನ್ನೂ ಆಕರ್ಷಿಸುತ್ತಿದೆ.

ಅಪಘಾತಕ್ಕೆ ಈಡಾದವರಿಗೆ ಉಚಿತವಾಗಿ ತುರ್ತು ಚಿಕಿತ್ಸೆ ನೀಡುವ ಹರೀಶ್ ಸಾಂತ್ವನ ಯೋಜನೆ ಈ ಸರ್ಕಾರದ ಮಾನವೀಯ ನಡೆಗೆ ಹಿಡಿದ ಕನ್ನಡಿಯಾಗಿದೆ. ನಗರ


ಬೈಕ್ ಆಂಬ್ಯುಲೆನ್ಸ್ ಯೋಜನೆ

ಪ್ರದೇಶಗಳ ಜನದಟ್ಟಣೆಯ ನಡುವೆ ಜನರಿಗೆ ಶೀಘ್ರವಾಗಿ ತುರ್ತು ಆರೋಗ್ಯ ಸೇವೆ ಒದಗಿಸಲು ಬೈಕ್ ಆಂಬುಲೆನ್ಸ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಯನ್ನು ಸುಧಾರಿಸಿ ಬಡಜನರಿಗೆ ಆರೋಗ್ಯ ರಕ್ಷಣೆ ನೀಡಲು ಈ ಸರ್ಕಾರ ಸಂಕಲ್ಪ ತಳೆದಿದ್ದು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯುತ್ತಿದೆ.

### ಕ್ಷೀರಭಾಗ್ಯ

ಸರ್ಕಾರಿ ಶಾಲೆ ಮತ್ತು ಅಂಗನವಾಡಿಯಲ್ಲಿನ ಒಂದು ಕೋಟಿಗೂ ಹೆಚ್ಚು ಮಕ್ಕಳಿಗೆ ವಾರದಲ್ಲಿ ಮೂರು ದಿನ 150 ಮಿಲಿ ಬಿಸಿ ಹಾಲನ್ನು ಉಚಿತವಾಗಿ ನೀಡುವ "ಕ್ಷೀರಭಾಗ್ಯ" ಯೋಜನೆ ಈ ಸರ್ಕಾರದ ಮತ್ತೊಂದು ಪ್ರಮುಖ ಯೋಜನೆ.



ಮಕ್ಕಳನ್ನು ಪುಷ್ಠಿದಾಯಕರನ್ನಾಗಿ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಒಂದರಿಂದ ಹತ್ತನೇ ತರಗತಿವರೆಗೆ ಕಲಿಯುತ್ತಿರುವ ಶಾಲಾ ಮಕ್ಕಳಲ್ಲಿ ಈ ಯೋಜನೆಯಿಂದ ಪೌಷ್ಠಿಕತೆ ಹೆಚ್ಚಾಗಿರುವ ಬಗ್ಗೆ ಅಧ್ಯಯನ ಕೈಗೊಳ್ಳುವ ಚಿಂತನೆ ನಡೆದಿದೆ.

### ನಮ್ಮ ಮೆಟ್ರೋ

ಭಾರತದ ಐಟಿ–ಬಿಟಿ ರಾಜಧಾನಿ, ನವೋದ್ಯಮಗಳ ರಾಜಧಾನಿ, ಉದ್ಯಾನ ನಗರಿ, ಸಿಲಿಕಾನ್ ಸಿಟಿ, ಇತ್ಯಾದಿ ಬಿರುದಾಂಕಿತ ಬೆಂಗಳೂರು ನಗರವು ಇತ್ತೀಚಿನ ವರ್ಷಗಳಲ್ಲಿ ಜನದಟ್ಟಣೆಯಿಂದ ನಲುಗುತ್ತಿದ್ದು ಇದನ್ನು ನಿವಾರಿಸಲು ಆಧುನಿಕ ಸಾರಿಗೆ ವ್ಯವಸ್ಥೆಯಾದ "ನಮ್ಮ ಮೆಟ್ರೋ" ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಶರವೇಗದಿಂದ ಮುನ್ನುಗ್ಗುತ್ತಿದೆ. ಪ್ರಥಮ ಹಂತದ ಮೆಟ್ರೋ ಯೋಜನೆಯ ಪ್ರಮುಖ ಘಟ್ಟಗಳೆಲ್ಲ ಅಂತಿಮ ಹಂತದಲ್ಲಿದ್ದು ಪೂರ್ವ–ಪಶ್ಚಿಮ ಕಾರಿಡಾರ್‌ನ ಬೈಯಪ್ಪನಹಳ್ಳಿ–ನಾಯಂಡನಹಳ್ಳಿವರೆಗಿನ ಮಾರ್ಗ ಪ್ರಯಾಣಿಕರ ಸಂಚಾರಕ್ಕೆ ತೆರೆದುಕೊಂಡಿದೆ. ಇದರಿಂದ ನಗರದ ಸಾರ್ವಜನಿಕ ಸಾರಿಗೆ ಸುಧಾರಣೆಗೊಳ್ಳಲಿದ್ದು ಸಂಚಾರ ದಟ್ಟಣೆ ಕಡಿಮೆಯಾಗಲಿದೆ.

### ಇನ್‌ವೆಸ್ಟ್ ಕರ್ನಾಟಕ

"ಕರ್ನಾಟಕ ಹೂಡಿಕೆದಾರರ ನೆಚ್ಚಿನ ತಾಣ. ರಾಜ್ಯದ ಕೈಗಾರಿಕಾ ಸ್ನೇಹಿ ಕಾನೂನುಗಳು, ಬಂಡವಾಳ ಹೂಡಿಕೆ ಉತ್ತೇಜನ ನೀತಿಗಳು, ಇಲ್ಲಿನ ಕುಶಲ ಕರ್ಮಿಗಳು, ಮಾನವ ಸಂಪನ್ಮೂಲ ಎಲ್ಲವೂ ಹೊಸ ಉದ್ದಿಮೆಗಳ ಸ್ಥಾಪನೆಗೆ ಹೇಳಿ ಮಾಡಿಸಿದಂತಿವೆ. ಇವು; ನಮ್ಮ ಮಾತುಗಳಲ್ಲ. ಕರ್ನಾಟಕ ಸರ್ಕಾರವು ಫೆಬ್ರವರಿ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಸಿದ 'ಇನ್‌ವೆಸ್ಟ್ ಕರ್ನಾಟಕ– 2016' ರಲ್ಲಿ ಭಾಗವಹಿಸಿದ್ದ ಕೈಗಾರಿಕಾ ದಿಗ್ಗಜರುಗಳಾದ ಟಾಟಾ ಕಂಪನಿಯ ರತನ್ ಟಾಟಾ, ಇನ್‌ಫೋಸಿಸ್ ಕಂಪನಿಯ ಎನ್.ಆರ್. ನಾರಾಯಣಮೂರ್ತಿ, ವಿಪ್ರೋ ಕಂಪನಿಯ ಅಜೀಂ ಪ್ರೇಮ್‌ಜಿ, ರಿಲಯನ್ಸ್ ಕಂಪನಿಯ ಅಂಬಾನಿ ಹಾಗೂ ಹಲವಾರು ವಿದೇಶಿ ಕಂಪನಿಯ ಮುಖ್ಯಸ್ಥರುಗಳು ಕರ್ನಾಟಕ ಸರ್ಕಾರದ ಕೈಗಾರಿಕಾ ಸ್ನೇಹಿ ವಾತಾವರಣವನ್ನು ಮುಕ್ತ ಕಂಠದಿಂದ ಹಾಡಿ ಹೊಗಳಿದರು. ಈ ಮೇಳದಲ್ಲಿ 1.27 ಲಕ್ಷ ಕೋಟಿ ರೂ.ಗಳ ಪ್ರಸ್ತಾಪಿತ ಬಂಡವಾಳ


ಇನ್‌ವೆಸ್ಟ್ ಕರ್ನಾಟಕ 2016



ಹೂಡಿಕೆ ಹಾಗೂ 1.69 ಲಕ್ಷ ಉದ್ಯೋಗ ಸೃಷ್ಟಿ ಸಾಮರ್ಥ್ಯದ 122 ಒಡಂಬಡಿಕೆಗಳಿಗೆ ಸಹಿ ಮಾಡಲಾಗಿದೆ.

### ನಾಡು-ನುಡಿಯ ಸಂರಕ್ಷಣೆ

ಕನ್ನಡ ನಾಡು–ನುಡಿ ಸಿದ್ದರಾಮಯ್ಯನವರ ಹೃದಯಕ್ಕೆ ಹತ್ತಿರವಾದ ವಿಷಯಗಳು. "ಕನ್ನಡ ಎನೆ ಕುಣಿದಾಡುವುದೆನ್ನದೆ, ಕನ್ನಡ ಎನೆ ಕಿವಿ ನಿಮಿರುವುದು" ರಾಷ್ಟ್ರ ಕವಿ ಕುವೆಂಪುರವರ ಈ ಕವಿವಾಣಿ ನಮ್ಮ ಮುಖ್ಯಮಂತ್ರಿಯವರ ಎದೆಯಾಳದ ದನಿಯೂ ಹೌದು. ಅಂತೆಯೇ ಕನ್ನಡ ಕಲೆ, ಸಂಸ್ಕೃತಿಗೆ ಅವರು ಕೊಡುಗೈ ದಾನಿಯಂತೆ ತಮ್ಮ ಆಯವ್ಯಯಗಳಲ್ಲಿ ಅನುದಾನ ಹಂಚಿಕೆ ಮಾಡಿದ್ದಾರೆ. ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸುವ ಮುನ್ನವೆ ಸಾಹಿತಿ, ಕಲಾವಿದರುಗಳ ಮನೆಗೆ ಭೇಟಿ ನೀಡಿ ಅವರ ಆಶಯಗಳನ್ನು ಅರಿತು ಕನ್ನಡ ಅಭಿವೃದ್ಧಿಗೆ ಕಂಕಣ ತೊಟ್ಟಿದ್ದಾರೆ.

ಈ ವರ್ಷ 2016– ಕರ್ನಾಟಕ ಏಕೀಕರಣದ ಅರವತ್ತನೇ ವರ್ಷದ ಸಂಭ್ರಮ. ಇದನ್ನು ಅರ್ಥಪೂರ್ಣವಾಗಿ ಆಚರಿಸಲು ವಿಶ್ವ ಕನ್ನಡ ಸಮ್ಮೇಳನ ಆಯೋಜಿಸಲು ಸಿದ್ಧತೆ ನಡೆಯುತ್ತಿದೆ. ಇದಕ್ಕೆ ಅಗತ್ಯವಾದ 30 ಕೋಟಿ ರೂ.ಗಳ ಅನುದಾನವನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ.

### ಮಹಿಳಾ ಅಭಿವೃದ್ಧಿ

ಮಹಿಳೆಯರ ಅಭಿವೃದ್ಧಿ ಈ ಸರ್ಕಾರದ ನೆಚ್ಚಿನ ಕ್ಷೇತ್ರವಾಗಿದೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಚಿಕಿತ್ಸೆ ಮತ್ತು ಸಾಂತ್ವನ ನೀಡಲು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವಿಶೇಷ ಚಿಕಿತ್ಸಾ ಘಟಕಗಳನ್ನು ಆರಂಭಿಸಲಾಗಿದೆ. ಸ್ತ್ರೀ ಶಕ್ತಿ ಗುಂಪುಗಳಿಗೆ ನೀಡುವ ಆವರ್ತಕ ನಿಧಿ ಮೊತ್ತವನ್ನು ಹೆಚ್ಚಿಸಲಾಗಿದೆ. ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಪುಷ್ಠಿದಾಯಕ

ಆಹಾರ ಮತ್ತು ವಿಟಮಿನ್ ಮಾತ್ರೆಗಳನ್ನು ಒದಗಿಸುವ ಯೋಜನೆ ರೂಪಿಸಲಾಗಿದೆ. ರಸ್ತೆ ಪಕ್ಕದಲ್ಲಿ ಸಣ್ಣ ವ್ಯಾಪಾರ ಮಾಡುವ ಮಹಿಳೆಯರಿಗೆ "ಸಮೃದ್ಧಿ" ಯೋಜನೆ ಅಡಿಯಲ್ಲಿ ಸಹಾಯಧನ ನೀಡಿ ಅವರನ್ನು ಸಬಲೀಕರಣಗೊಳಿಸಲಾಗುವುದು.

### ಅಭಿವೃದ್ಧಿಯ ಮಾರ್ಗ

ಉತ್ತಮ ರಸ್ತೆಗಳು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕ. ಉತ್ತಮ ರಸ್ತೆಗಳ ಜಾಲ ನಿರ್ಮಾಣದಿಂದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆ ಸಾಧಿಸಲು ಸಾಧ್ಯ. ಇದನ್ನು ಅರಿತಿರುವ ಸರ್ಕಾರ ರಾಜ್ಯದ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಹಾಗೂ ಸೇತುವೆಗಳ ನಿರ್ಮಾಣಕ್ಕೆ ಪ್ರಾಮುಖ್ಯ ನೀಡಿದೆ. 6572 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿಗಳು, 19288 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳು ಹಾಗೂ 49942 ಕಿ.ಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಇಲಾಖೆಯ ವ್ಯಾಪ್ತಿಯಲ್ಲಿವೆ. 2013ರ ಪ್ರಾರಂಭದಲ್ಲಿ ಇದ್ದ 4688 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ಪ್ರಸ್ತುತ 6572 ಕಿ.ಮೀಗೆ ಏರಿಸಲಾಗಿದೆ. ಇದಲ್ಲದೆ, 3245 ಕಿ.ಮೀ ಉದ್ದದ ಹೊಸ



ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ತಾತ್ವಿಕ ಅನುಮೋದನೆ ಪಡೆಯಲಾಗಿದೆ.

### ಭಾರಿ ಮತ್ತು ಮಧ್ಯಮ ನೀರಾವರಿ

ರಾಜ್ಯದ ಅಮೂಲ್ಯ ಜಲಸಂಪನ್ಮೂಲವನ್ನು ಪೂರ್ಣವಾಗಿ ರಾಜ್ಯದ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಬದ್ಧವಾಗಿರುವ ಸರ್ಕಾರವು ಐದು ವರ್ಷಗಳ ಅವಧಿಯಲ್ಲಿ 50 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ 9.25 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿ ಹಾಕಿಕೊಂಡಿತ್ತು. ಈ ಪೈಕಿ ಕಳೆದ ಮೂರು ವರ್ಷಗಳಲ್ಲಿ 30 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ 4.85 ಲಕ್ಷ ಎಕರೆ ಪ್ರದೇಶಗಳಿಗೆ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಿದೆ. ಇದು ಈ ಸರ್ಕಾರದ ಮಹತ್ವದ ಮೈಲಿ ಮೈಲಿಗಲ್ಲಾಗಿದೆ. ಇನ್ನೆರಡು ವರ್ಷಗಳಲ್ಲಿ ಸರ್ಕಾರವು 20 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ 3.5 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಬದ್ಧವಾಗಿದೆ.

ಆಲಮಟ್ಟಿ ಅಣೆಕಟ್ಟನ್ನು 524.25 ಮೀಟರ್‌ಗೆ ಏರಿಸುವ



ಉದ್ದೇಶಕ್ಕಾಗಿ ಮುಳುಗಡೆ ಪ್ರದೇಶದ ಭೂಸ್ವಾಧೀನ, ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಾಮಗಾರಿಗಳು ಚುರುಕು. ಉನ್ನತ ಮಟ್ಟದ ಸಮಿತಿ ಮತ್ತು ಕ್ರಿಯಾ ಯೋಜನೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಪುನರ್ವಸತಿಗೊಳ್ಳುವ ಬಾಧಿತ ಕುಟುಂಬಗಳ ಪುನರ್ವಸತಿಗೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ಸರ್ವಪಕ್ಷಗಳ ಸಹಮತಿಯಂತೆ ಮಹದಾಯಿ ನದಿ ವಿವಾದ ನ್ಯಾಯಾಧಿಕರಣದನ್ವಯ ರಾಜ್ಯದ ಪಾಲಿನ ನೀರನ್ನು ಪಡೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

### ಸಣ್ಣ ನೀರಾವರಿ

ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ ಮತ್ತು ಪಾರಂಪರಿಕ ಜಲಕಾಯಗಳ ಪುನರುಜ್ಜೀವನಕ್ಕೆ ಒತ್ತು ನೀಡಿರುವ ಸಣ್ಣ ನೀರಾವರಿ ಇಲಾಖೆಯು ಈ ಕಾರ್ಯವನ್ನು ಅನುಷ್ಠಾನಗೊಳಿಸುತ್ತಿದೆ. ಇದಕ್ಕಾಗಿ ಭಾರತ ಸರ್ಕಾರವು 350 ಕೋಟಿ ರೂ.ಗಳ ಅನುದಾನ ನೀಡಿದೆ. ರಾಜ್ಯದಲ್ಲಿರುವ ಸುಮಾರು 30 ಸಾವಿರ ಕೆರೆಗಳ ಕ್ರಮಬದ್ಧ ಅಭಿವೃದ್ಧಿಗಾಗಿ 'ಕೆರೆ ಅಭಿವೃದ್ಧಿ ಪ್ರಾಧಿಕಾರ'ವನ್ನು ರಚಿಸಿದೆ. ಇದರ ಮೂಲಕ 100 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೆರೆಗಳ ಒತ್ತುವರಿ






ತೆರವು ಮತ್ತು ಕೆರೆಗಳ ಪೋಷಕ ಕಾಲುವೆ / ರಾಜ ಕಾಲುವೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಅಂತರ್ಜಲ ನಿಯಂತ್ರಣ ಹಾಗೂ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಅಂತರ್ಜಲ ನಿರ್ದೇಶನಾಲಯವನ್ನು ಪ್ರತ್ಯೇಕವಾಗಿ ಸ್ಥಾಪಿಸಲಾಗಿದೆ.

### ಹೊಸ ಬೆಳಕು

ವಿದ್ಯುತ್ತಿಗೆ ಸದಾ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವುದರೊಂದಿಗೆ ವಿದ್ಯುತ್ ವಿತರಣೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಇಂಧನ ಇಲಾಖೆ ಆದ್ಯತೆ ನೀಡಿದೆ. ಬಡವರ, ಹಿಂದುಳಿದವರ ಬಾಳಿಗೆ ಬೆಳಕು ನೀಡುವ ಗಂಗಾ ಕಲ್ಯಾಣ, ಭಾಗ್ಯ ಜ್ಯೋತಿ, ಕುಟೀರ ಭಾಗ್ಯ ಮತ್ತು ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಇವುಗಳಿಗಾಗಿಯೇ ಸರ್ಕಾರ 19,500 ಕೋಟಿ ರೂ.ಗಳಷ್ಟು ಸಹಾಯಧನವನ್ನು ನೀಡಿದೆ. ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ರೂ. 1400 ಕೋಟಿಗಳಷ್ಟು ಬಂಡವಾಳ ಒದಗಿಸಿದೆ. ಇದರಿಂದಾಗಿ ಈ ಅವಧಿಯಲ್ಲಿ 1525 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲಾಗಿದೆ.

### ಸಾಮಾಜಿಕ ಭದ್ರತಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ

ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿ ನಮ್ಮ ರಾಜ್ಯ ಇಡೀ ದೇಶಕ್ಕೇ ಮೊದಲ ಸ್ಥಾನದಲ್ಲಿದೆ. ಎನ್ನುವುದು ಹೆಮ್ಮೆಯ ಸಂಗತಿ. ಸರ್ಕಾರ ಕಳೆದ ಮೂರು ವರ್ಷಗಳಲ್ಲಿ 3205 ಕೋಟಿ ರೂ.ಗಳನ್ನು ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ವೆಚ್ಚ ಮಾಡಿದೆ. ಒಟ್ಟು 73 ಲಕ್ಷ ಮಂದಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ಇದರ ಫಲವಾಗಿ ಅಸಹಾಯಕ ವೃದ್ಧರು, ವಿಧವೆಯರು, ಲಿಂಗ ಅಲ್ಪಸಂಖ್ಯಾತರು ಹಾಗೂ ಅಂಗವಿಕಲರಲ್ಲಿ ಭದ್ರತೆ ಮತ್ತು ನೆಮ್ಮದಿ ಭಾವನೆ ಮೂಡಿದೆ.

ಸಿದ್ದರಾಮಯ್ಯನವರ ಸರ್ಕಾರದ ಮೂರು ವರ್ಷದ ನಡೆಗಳನ್ನು ನೋಡಿದರೆ ಅದು ನುಡಿದಂತೆ ನಡೆಯುತ್ತಿದೆ. ಸಿದ್ದರಾಮಯ್ಯನವರು ತಮ್ಮ 2016–17 ನೇ ಸಾಲಿನ ಆಯವ್ಯಯ ಭಾಷಣದ ಆರಂಭದಲ್ಲಿಯೇ ಹೀಗೆ ಹೇಳುತ್ತಾರೆ. "ಕರ್ನಾಟಕದ ಪ್ರಜ್ಞಾವಂತ ಜನತೆಯ ಬೆಂಬಲ ಮತ್ತು ವಿಶ್ವಾಸದೊಂದಿಗೆ ನಮ್ಮ ಸರ್ಕಾರವು ಜನಪರ ಆಡಳಿದ ಮೂರನೇ ವರ್ಷಾಚರಣೆಯ ಹೊಸ್ತಿಲಿನಲ್ಲಿದೆ. ಈ ಹೊತ್ತಿನಲ್ಲಿ ನಮ್ಮ ಸರ್ಕಾರದ ನಡೆಯನ್ನು ಒಮ್ಮೆ ಹಿಂತಿರುಗಿ ನೋಡಿದರೆ ನನ್ನಲ್ಲಿ ಧನ್ಯತೆಯ ಭಾವ ಮೂಡುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ಜನತೆಗೆ ನೀಡಿದ್ದ ಬಹುತೇಕ ಭರವಸೆಗಳನ್ನು ಈಡೇರಿಸಿರುವ ಸಂತಸ ಗರಿಗೆದರುತ್ತಿದೆ. ನುಡಿದಂತೆ ನಡೆದಿರುವ ಈ ಸಂತೃಪ್ತಿ ಮತ್ತು ಹೆಮ್ಮೆಯ ನಡುವೆ ನಾನು ನಮ್ಮ ಸರ್ಕಾರದ ನಾಲ್ಕನೇ ಆಯವ್ಯಯವನ್ನು ಮಂಡಿಸುತ್ತಿದ್ದೇನೆ".

ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಆಧುನಿಕ ಮುನ್ನೋಟದ ಕಾರ್ಯಶೈಲಿ ನಮ್ಮ ಸರ್ಕಾರದ ಮುನ್ನಡೆಯ ಮಾರ್ಗದರ್ಶಿ ಸೂತ್ರಗಳಾಗಿವೆ. ಇವೆರಡನ್ನು ಸಮನ್ವಯಗೊಳಿಸಿ ಪ್ರಗತಿಪಥದಲ್ಲಿ ಸಾಗುತ್ತಿರುವ ಸಮಾಜಮುಖಿ ಸರ್ಕಾರ ನಮ್ಮದು.

**ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು।**
**ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ॥**
**ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ।**
**ಜಸವು ಜನಜೀವನಕೆ – ಮಂಕುತಿಮ್ಮ**

– ಡಿ.ವಿ.ಜಿ.

ಡಿ.ವಿ. ಗುಂಡಪ್ಪನವರ ಈ ಕವಿವಾಣಿಯ ಆಶಯದಂತೆ ನಾವು ಅವಕಾಶ ವಂಚಿತರ, ಶೋಷಿತರ ಅಭ್ಯುದಯದ ತಳ ಹದಿಯ ಮೇಲೆ ಆಧುನಿಕ ಕರ್ನಾಟಕದ ಅಭಿವೃದ್ಧಿ ಸೌಧ ನಿರ್ಮಿಸಬೇಕು ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿದ್ದೇವೆ. ಅಂತೆಯೇ ಸಾಮಾಜಿಕ ನ್ಯಾಯ, ಕೋಮು ಸೌಹಾರ್ದತೆ, ಗ್ರಾಮೀಣಾಭಿವೃದ್ಧಿ ಹಾಗೂ ರೈತರು, ಶೋಷಿತರು ಮತ್ತು ಮಹಿಳಾ ಪರ ಚಿಂತನೆಗಳಿಗೆ ನವ ಕರ್ನಾಟಕದ ಮುನ್ನೋಟವನ್ನು ಬೆಸುಗೆ ಮಾಡಿ ರಾಜ್ಯದ ಸಮಾನ ಮತ್ತು ಸಮಗ್ರ ಬೆಳವಣಿಗೆಗೆ ಶ್ರಮಿಸುತ್ತೇನೆ.

ಇದು ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಂಕಲ್ಪ. ಇವರ ಸಂಕಲ್ಪದ ಹಾದಿಯಲ್ಲಿಯೇ ಮುನ್ನಡೆಯುತ್ತಿರುವ ಸರ್ಕಾರದ ಕಳೆದ ಮೂರು ವರ್ಷದ ಸಾಧನೆಗಳು ಸಾಕಷ್ಟು ಚೇತೋಹಾರಿಯಾಗಿವೆ. ಅಂತೆಯೇ ಸರ್ಕಾರ ಸಂಭ್ರಮ ಪಡಲು ಸಾಕಷ್ಟು ಕಾರಣಗಳಿವೆ.

# ಸರ್ಕಾರಕ್ಕೆ 3 ವರುಷ

## ಎಲ್ಲೆಡೆ ಹರುಷ...



▪ ಡಿ ಪಿ ಮುರಳೀಧರ್

**ಮೇ** 13, 2013. ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನ. ಅಂದು ಸಮ ಸಮಾಜದ ಹರಿಕಾರ ಜಗಜ್ಯೋತಿ ಬಸವೇಶ್ವರರ ಜಯಂತಿ ಕೂಡಾ. ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಸಹಸ್ರ, ಸಹಸ್ರ ಅಭಿಮಾನಿಗಳ, ಹರ್ಷೋದ್ಗಾರಗಳ ನಡುವೆ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಅರ್ಧ ಗಂಟೆಯೊಳಗೇ ನಡೆದ ತಮ್ಮ ಏಕ ವ್ಯಕ್ತಿ ಸಚಿವ ಸಂಪುಟದ ಸಭೆಯಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ, ವಸತಿಭಾಗ್ಯ, ಋಣ ಮುಕ್ತಿ ಭಾಗ್ಯ ಹಾಗೂ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನಾಲ್ಕು ರೂ ಪ್ರೋತ್ಸಾಹ ಧನ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮಹತ್ತರ ನಿರ್ಣಯಗಳನ್ನು ಕೈಗೊಂಡರು.

ಇದರಲ್ಲಿ ಅನ್ನಭಾಗ್ಯ ಯೋಜನೆ ಹಸಿವು ಮುಕ್ತ ಕರ್ನಾಟಕದ ಪರಿಕಲ್ಪನೆಯಾದರೆ, ವಸತಿಭಾಗ್ಯ ಯೋಜನೆ ಗುಡಿಸಲು ಮುಕ್ತ ಕರ್ನಾಟಕದ ಕನಸನ್ನು ಸಾಕಾರಗೊಳಿಸುವ ಪ್ರಾಮಾಣಿಕ ಪ್ರಯತ್ನವಾಗಿದೆ.

### ಏನಿದು ಅನ್ನಭಾಗ್ಯ ?

ಬಡತನ ರೇಖೆಗಿಂತಲೂ ಕೆಳಗಿರುವ ಕುಟುಂಬಗಳಿಗೆ ಒಂದು ಕೆ ಜಿ ಗೆ ಒಂದು ರೂ ದರದಲಿ ಒಂದು ಕುಟುಂಬಕ್ಕೆ ಗರಿಷ್ಠ 30 ಕೆ ಜಿ ಅಕ್ಕಿ ವಿತರಿಸುವ ಮಹತ್ವದ ಯೋಜನೆಯೇ ಅನ್ನಭಾಗ್ಯ. ನಂತರದ ದಿನಗಳಲ್ಲಿ ಈ ಯೋಜನೆಯನ್ನು ಪ್ರಾದೇಶಿಕ ಬೇಡಿಕೆಗಳಿಗೆ ಅನುಗುಣವಾಗಿ ರಾಗಿ ಹಾಗೂ ಜೋಳ ವಿತರಿಸಲು ಅನುಕೂಲವಾಗುವಂತೆ ಮಾರ್ಪಡಿಸಲಾಯಿತು. ಪ್ರಸ್ತುತ ಈ ಯೋಜನೆಯಲ್ಲಿ ಆಹಾರ ಧಾನ್ಯದ ವಿತರಣಾ ಪ್ರಮಾಣದಲ್ಲಿ ಬದಲಾವಣೆ ತರಲಾಗಿದೆ. ಅಲ್ಲದೆ, ಆಹಾರ ಧಾನ್ಯಗಳನ್ನು ಸಂಪೂರ್ಣ ಉಚಿತವಾಗಿ ವಿತರಿಸಲಾಗುತ್ತಿದೆ. ಅನ್ನಭಾಗ್ಯ ಯೋಜನೆಯ ಫಲಾನುಭವಿಗಳು ಒಂದು ಕೋಟಿ ಎಂಟು ಲಕ್ಷ ಕುಟುಂಬಗಳು. ಅಂದರೆ ಅಂದಾಜು ನಾಲ್ಕು ಕೋಟಿ ಜನರಿಗಿಂತಲೂ ಹೆಚ್ಚು ಮಂದಿ ಈ ಯೋಜನೆಯ ಲಾಭವನ್ನು ಪಡೆಯುತ್ತಿದ್ದಾರೆ.

ಅನ್ನಭಾಗ್ಯ ಯೋಜನೆಯನ್ನು ಪ್ರಪ್ರಥಮವಾಗಿ ಘೋಷಿಸಿದಾಗ, ಒಂದೆಡೆ ಯೋಜನೆಯ ಅನುಷ್ಠಾನ ಸಾಧ್ಯವೇ ಇಲ್ಲ ಎಂಬುದು ಹಲವರ ಅಭಿಪ್ರಾಯವಾಗಿತ್ತು. ಮತ್ತೊಂದೆಡೆ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಿದರೆ ಅನ್ನಭಾಗ್ಯದ ಫಲಾನುಭವಿಗಳು ಸೋಮಾರಿಗಳಾಗುತ್ತಾರೆ ಎಂಬ ಹೇಳಿಕೆಗಳೂ ಎಲ್ಲೆಡೆ ಹರಿದಾಡಿದವು.

"ಅನ್ನಭಾಗ್ಯ ಯೋಜನೆಯ ವಿರುದ್ಧ ಟೀಕೆ ಮಾಡುತ್ತಿರುವವರೆಲ್ಲರೂ ಹೊಟ್ಟೆ ತುಂಬಿದವರು. ಹಸಿವು ಎಂದರೆ ಏನು ಎಂದು ಗೊತ್ತಿಲ್ಲದವರು. ಹಸಿವಿನಿಂದ ಬಳಲುತ್ತಿರುವ ಅನ್ನಭಾಗ್ಯ ಫಲಾನುಭವಿಗಳು ತಮ್ಮ ಸಂಕಟವನ್ನು ತೋಡಿಕೊಳ್ಳಲೂ ಧ್ವನಿ ಇಲ್ಲದ ಅಸಹಾಯಕರು" ಎಂದು ಗಟ್ಟಿಯಾಗಿ ಹೇಳುವ ಮೂಲಕ ಮುಖ್ಯಮಂತ್ರಿಯವರು ಈ ಯೋಜನೆಯ ಅನುಷ್ಠಾನದ ಬೆಂಬಲಕ್ಕೆ ನಿಂತರು.

ಕೇರಳದಲ್ಲಿ ಬಡವರ ಸಂಖ್ಯೆ ಶೇಕಡಾ 12, ತಮಿಳುನಾಡಿನಲ್ಲಿ ಶೇಕಡಾ 17, ಆಂಧ್ರ ಪ್ರದೇಶದಲ್ಲಿ ಶೇಕಡಾ 21 ಹಾಗೂ ಕರ್ನಾಟಕದಲ್ಲಿ ಶೇಕಡಾ 23.6 ರಷ್ಟು ಬಡವರಿದ್ದಾರೆ. ಈ ಅಂಕಿ–ಅಂಶಗಳನ್ನು ಗಮನಿಸಿದಾಗ ಇಡೀ ದಕ್ಷಿಣ ಭಾರತದಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದ ಬಡತನ ಕರ್ನಾಟಕದಲ್ಲಿದೆ ಎಂಬುದು ವ್ಯಕ್ತವಾಗುತ್ತದೆ. ಈ ಪರಿಸ್ಥಿತಿ ಸುಧಾರಿಸಲು ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ ಎಂದು ಸಿದ್ದರಾಮಯ್ಯ ಅವರು ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ.

ಪ್ರಸ್ತುತ ರಾಜ್ಯದಲ್ಲಿನ ಬಡತನ ರೇಖೆಗಿಂತಲೂ ಕೆಳಗಿನ ಆದ್ಯತಾ ಕುಟುಂಬಗಳಿಗೆ ಕುಟುಂಬದಲ್ಲಿನ ವ್ಯಕ್ತಿಗಳ ಆಧಾರದ ಮೇರೆಗೆ ಉಚಿತ ಆಹಾರ ಧಾನ್ಯದ ಜೊತೆಗೆ ರಿಯಾಯಿತಿ ದರದಲ್ಲಿ ಎರಡು ರೂಪಾಯಿಗೆ ಒಂದು ಕೆ ಜಿ ಐಯೋಡಿನ್‌ಯುಕ್ತ ಉಪ್ಪು, 13.50 ರೂ ಗಳಿಗೆ ಒಂದು ಕೆ ಜಿ ಸಕ್ಕರೆ ಹಾಗೂ 25 ರೂ ಗಳಿಗೆ ಒಂದು ಲೀಟರ್ ತಾಳೆ ಎಣ್ಣೆ ವಿತರಿಸಲಾಗುತ್ತಿದೆ.

### ಯೋಜನೆಗಳು ರೂಪುಗೊಂಡದ್ದು ಹೇಗೆ ?

ಅನ್ನಭಾಗ್ಯ ಹಾಗೂ ಕ್ಷೀರಭಾಗ್ಯ ಯೋಜನೆಗಳೂ ಕೂಡಾ ನನ್ನ ಅನುಭವದ ಮೂಸೆಯಲ್ಲಿಯೇ ರೂಪುಗೊಂಡ ಯೋಜನೆಗಳು. ಬಡತನ ಎಂದರೆ ಏನು ? ಎಂಬುದನ್ನು ನಾನು ನಿಘಂಟು ನೋಡಿ ತಿಳಿದಿಲ್ಲ. ಅನುಭವಿಸಿ ಅರಿತಿದ್ದೇನೆ ಎಂಬ ಸಿದ್ದರಾಮಯ್ಯ ಅವರ ಮಾತುಗಳಲ್ಲಿ ಜನಪರ ಕಳಕಳಿಯನ್ನು ಕಾಣಬಹುದು.

ತಾವೂ ಕೂಡಾ ಬಡತನದ ಹಿನ್ನೆಲೆಯಿಂದ ಬಂದವರಾದರೂ, ಮೈಸೂರು ಜಿಲ್ಲೆಯ ತಮ್ಮ ತವರು ಸಿದ್ದರಾಮನ ಹುಂಡಿಯ ಇತರೆ ಕುಟುಂಬಗಳಿಗೆ ಹೋಲಿಸಿದರೆ ತಮ್ಮದು ಸ್ಥಿತಿವಂತರ ಕುಟುಂಬ ಎಂದೇ ಬಣ್ಣಿಸಬಹುದಾಗಿತ್ತು. ಬಡವರ ಮನೆಯಲ್ಲಿ ಮಕ್ಕಳಿಗೆ ಜ್ವರ ಬಂದಾಗ, ಅನ್ನಕ್ಕಾಗಿ ಅವರು ಶ್ರೀಮಂತರ ಮನೆಯ ಬಳಿ ಕೈಯ್ಯೊಡ್ಡಿ ನಿಲ್ಲುತ್ತಿದ್ದರು. ಕಡುಬಡತನದ ಈ ಕಷ್ಟವನ್ನು ನಿವಾರಿಸುವವರು ಯಾರು ? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದ ತಮಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕ್ಷಣವೇ ಕಡುಬಡವರ ಕಷ್ಟ ನಿವಾರಿಸುವ ಶಕ್ತಿ ದೊರೆಯಿತು ಎಂಬುದು ಸಿದ್ದರಾಮಯ್ಯ ಅವರ ಬಿಚ್ಚು ನುಡಿ.



ಹಸಿದವರಿಗೆ 'ಅನ್ನಭಾಗ್ಯ'

ಹಾಲು ಮಾರಾಟ ಮಾಡುವ ಭರದಲ್ಲಿ ರೈತರು ತಮ್ಮ ಮನೆಯಲ್ಲೇ ಒಂದು ಲೋಟ ಹಾಲು ಇಟ್ಟುಕೊಳ್ಳುತ್ತಿಲ್ಲ. ತಮ್ಮ ಮಕ್ಕಳಿಗೆ ಹಾಲು, ಮೊಸರು, ಅಷ್ಟೇ ಏಕೆ ? ಮಜ್ಜಿಗೆಯನ್ನೂ ನೀಡುತ್ತಿಲ್ಲ. ಅನಿರೀಕ್ಷಿತವಾಗಿ ನೆಂಟರು ಬಂದರೆ ರೈತರ ಮನೆಯಲ್ಲಿ ಚಹಾಗೂ ಹಾಲು ಇರುವುದಿಲ್ಲ ! ಎಂಬ ವಾಸ್ತವವನ್ನು ಅರಿತ ಸಿದ್ದರಾಮಯ್ಯ ಅವರು ತಾವು ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಎರಡು ರೂ ಇದ್ದ ಪ್ರೋತ್ಸಾಹ ಧನವನ್ನು ನಾಲ್ಕು ರೂ ಗಳಿಗೆ ದುಪ್ಪಟುಗೊಳಿಸಿದರು.

ಸಿದ್ದರಾಮಯ್ಯ ಅವರ ಈ ಕ್ರಮದಿಂದ ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನದ ಹಾಲು ಉತ್ಪಾದನೆ 72 ಲಕ್ಷ ಲೀಟರ್ ತಲುಪಿದೆ. ರಾಜ್ಯದಲ್ಲಿ ಹಾಲು ಉತ್ಪಾದನಾ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡು ಬಂದೊಡನೆಯೇ ಸಿದ್ದರಾಮಯ್ಯ ಅವರ ಸರ್ಕಾರ ಅನುಷ್ಠಾನಕ್ಕೆ ತಂದ ಮತ್ತೊಂದು ಕ್ರಾಂತಿಕಾರಕ ಯೋಜನೆ ಕ್ಷೀರಭಾಗ್ಯ. ಅಂಗನವಾಡಿಯಲ್ಲಿನ 40 ಲಕ್ಷ ಮಕ್ಕಳೂ ಒಳಗೊಂಡಂತೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ ಒಂದು ಕೋಟಿ ಐದು ಲಕ್ಷ ಮಕ್ಕಳಿಗೆ ವಾರಕ್ಕೆ ಮೂರು ದಿನ 150 ಮಿಲಿ ಲೀಟರ್ ಹಾಲನ್ನು ಕುಡಿಯಲು ನೀಡುವ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಕಂಡು ಇಡೀ ರಾಷ್ಟ್ರವೇ ಮೆಚ್ಚುಗೆ ವ್ಯಕ್ತಪಡಿಸಿದೆ. ಕ್ಷೀರಭಾಗ್ಯ ಯೋಜನೆಯನ್ನು ಐದು ದಿನಗಳಿಗೆ ವಿಸ್ತರಿಸುವ ಪ್ರಸ್ತಾವನೆ ರಾಜ್ಯ ಸರ್ಕಾರದ ಗಂಭೀರ ಪರಿಶೀಲನೆಯಲ್ಲಿದೆ.

ಕ್ಷೀರಭಾಗ್ಯ ಯೋಜನೆಯ ಅನುಷ್ಠಾನದಿಂದ ಒಂದೆಡೆ ಮಕ್ಕಳಿಗೆ ಕುಡಿಯಲು ಹಾಲು ದೊರೆಯುತ್ತಿದೆ. ಮತ್ತೊಂದೆಡೆ ಅಪೌಷ್ಠಿಕತೆ ಹಾಗೂ ಪೌಷ್ಠಿಕಾಂಶದ ಕೊರತೆಯಿಂದ ತೀವ್ರವಾಗಿ ಬಳಲುತ್ತಿದ್ದ ಮಕ್ಕಳ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಮಗದೊಂದೆಡೆ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯಲ್ಲಿ ಗಮನಾರ್ಹ ಸುಧಾರಣೆಯಾಗಿದೆ. ಇವೆಲ್ಲದರ ಜೊತೆ ಜೊತೆಗೆ

ಹಾಲು ಕೃಷಿಕರಿಗೆ ಅವರ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ಹಾಗೂ ಉತ್ತಮ ಮಾರುಕಟ್ಟೆ ಲಭಿಸಿದೆ.

ಅನ್ನಭಾಗ್ಯ ಹಾಗೂ ಕ್ಷೀರಭಾಗ್ಯ ಯೋಜನೆಗಳನ್ನು ತಮ್ಮ ಸರ್ಕಾರ ಜಾರಿಗೆ ತರಲು ಈ ಘಟನೆಗಳೂ ಪ್ರೇರಣೆ ಹಾಗೂ ಸ್ಫೂರ್ತಿ ಎಂದು ಸಿದ್ದರಾಮಯ್ಯ ಅವರು ಸಾರ್ವಜನಿಕ ವೇದಿಕೆಗಳಲ್ಲಿ ಹಲವೊಮ್ಮೆ ಹೇಳಿದ್ದಾರೆ.


ಎಲ್ಲಾ ಭಾಷಿಗರೂ, ಎಲ್ಲಾ ಜಾತಿಯವರೂ ಹಾಗೂ ಎಲ್ಲಾ ಧರ್ಮದ ಫಲಾನುಭವಿಗಳಿರುವ ಈ ಎರಡೂ ಯೋಜನೆಗಳನ್ನು ಅತ್ಯಂತ ಜಾತ್ಯಾತೀತ ಯೋಜನೆಗಳು ಎಂದೇ ಪರಿಗಣಿಸಬಹುದು.

### ಅನುಭವದ ಹಿನ್ನೆಲೆಯಲ್ಲಿಯೇ ವಿದ್ಯಾಸಿರಿ !

ಮೈಸೂರಿನ ಯುವರಾಜ ಮಹಾವಿದ್ಯಾಲಯದಲ್ಲಿ ವಿಜ್ಞಾನ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಹಾಸ್ಟೆಲ್‌ನ ಪ್ರವೇಶ ದೊರೆಯದ ಹಿನ್ನೆಲೆಯಲ್ಲಿ ನಾನು ಮತ್ತು ನನ್ನ ಸಹಪಾಠಿ ಮೈಸೂರಿನಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದಿದ್ದೆವು.

ಆ ಅವಧಿಯಲ್ಲಿ ಒಂದು ದಿನ ನಾನು ಮತ್ತೊಂದು ದಿನ ನನ್ನ ಗೆಳೆಯ ನಾವು ವಾಸವಿದ್ದ ಕೊಠಡಿಯಲ್ಲಿಯೇ ಅನ್ನ ಮಾಡಿಕೊಳ್ಳುತ್ತಿದ್ದೆವು. ಹೋಟೆಲ್‌ನಿಂದ ಸಾಂಬಾರ್ ತಂದುಕೊಳ್ಳುತ್ತಿದ್ದೆವು. ಪ್ರತಿದಿನವೂ ಹೋಟೆಲ್‌ನಿಂದ ಸಾಂಬಾರ್ ತರುವ ಕೆಲಸ ನನ್ನದಾಗಿತ್ತು. ಪಾತ್ರೆ ತೊಳೆಯುವ ಕೆಲಸ ಆತನದಾಗಿತ್ತು. ಹಾಸ್ಟೆಲ್‌ನಲ್ಲಿ ಸೀಟು ಸಿಗದಿದ್ದರೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅನುಭವಿಸುವ ಕಷ್ಟ ಏನು ? ಎಂಬುದನ್ನು ಸ್ವತಃ ಅನುಭವಿಸಿದ್ದೇನೆ. ನನ್ನ ಅನುಭವದ ಹಿನ್ನೆಲೆಯಲ್ಲಿಯೇ ವಿದ್ಯಾಸಿರಿ ಯೋಜನೆಯನ್ನು ರೂಪಿಸಿದ್ದೇನೆ ಎಂದು ಸಿದ್ದರಾಮಯ್ಯ ಅವರು ಹೇಳುತ್ತಾರೆ.

ಪ್ರಾರಂಭದಲ್ಲಿ ಈ ಯೋಜನೆಯನ್ನು ಚಾಲನೆಗೆ ತಂದಾಗ ಕನಿಷ್ಠ 25,000 ಫಲಾನುಭವಿಗಳಿಗೆ ಯೋಜನೆಯ ಲಾಭ ತಲುಪಿಸಬೇಕೆಂಬ ಗುರಿ ಹೊಂದಲಾಗಿತ್ತು. ಇದೀಗ ಈ ಯೋಜನೆಯು ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ. ಮೊದಲು ಕೇವಲ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ರೂಪಿಸಿದ ಈ ಯೋಜನೆಯನ್ನು ನಂತರದ ದಿನಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.



ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ "ವಿದ್ಯಾಸಿರಿ"

ಕಳೆದ 2015–16 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ 87,000 ವಿದ್ಯಾರ್ಥಿಗಳು ಪ್ರತಿ ತಿಂಗಳಿಗೆ 1500 ರೂ ನಂತೆ ಹತ್ತು–ತಿಂಗಳ ಒಂದು ಶೈಕ್ಷಣಿಕ ವರ್ಷದಲ್ಲಿ 15,000 ರೂ ಶಿಷ್ಯ ವೇತನ ಪಡೆದು, ಪಟ್ಟಣ, ನಗರ ಹಾಗೂ ಮಹಾನಗರಗಳಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಲು ಈ ಯೋಜನೆ ಅನುಕೂಲವಾಗಿದೆ. ಪ್ರಸಕ್ತ ವರ್ಷದಲ್ಲಿ ವಸತಿ ಹಾಗೂ ಭೋಜನಕ್ಕೆ ನೆರವು ಒದಗಿಸುವ ಈ ವಿದ್ಯಾಸಿರಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಒಂದು ಲಕ್ಷದ ಗಡಿಯನ್ನೂ ದಾಟುವ ನಿರೀಕ್ಷೆ ಇದೆ ಎಂಬುದು ಸಿದ್ದರಾಮಯ್ಯ ಅವರ ಸ್ಪಷ್ಟ ನುಡಿ.

### ಯೋಜನೆಗಳಲ್ಲಿ ಮಾನವೀಯತೆಯ ಸ್ಪರ್ಶ

ಸಿದ್ದರಾಮಯ್ಯ ಸರ್ಕಾರದ ಹಲವು ಯೋಜನೆಗಳಲ್ಲಿ ಮನಸ್ವಿನಿ ಮತ್ತು ಮೈತ್ರಿ ಕೂಡಾ ಪ್ರಮುಖವಾದವು. ನಲವತ್ತು ವರ್ಷ ದಾಟಿದ ಹೆಣ್ಣು ಮದುವೆಯಾಗದೆ ಮನೆಯಲ್ಲಿಯೇ ಇದ್ದರೆ ಸ್ವತಃ ಆಕೆಯ ತಂದೆ ತಾಯಿ ಕೂಡಾ ತಮ್ಮ ಮಗಳನ್ನೇ ಹೊರೆ ಎಂದು ಭಾವಿಸುತ್ತಾರೆ. ಮದುವೆಯಾಗದೇ ಉಳಿದಿರುವ ಇಂತಹ ಮಹಿಳೆಯರಿಗೆ ಐದು ನೂರು ರೂ ಮಾಸಾಶನ ನೀಡುವ ಮಹತ್ವದ ಯೋಜನೆಯನ್ನು ಸಿದ್ದರಾಮಯ್ಯ ಜಾರಿಗೊಳಿಸಿದರು. ಅಲ್ಲದೆ, ಈ ಯೋಜನೆಯನ್ನು ವಿಚ್ಛೇಧಿತ ಹಾಗೂ ಗಂಡನಿಂದ ಪರಿತ್ಯಕ್ತರಾದ ನತದೃಷ್ಟ ಮಹಿಳೆಯರಿಗೂ ವಿಸ್ತರಿಸಿದರು. ಸರ್ಕಾರದ ಯೋಜನೆಗಳು ಕೇವಲ ಪುರುಷರು ಹಾಗೂ ಮಹಿಳೆಯರಿಗೆ ಮಾತ್ರವಲ್ಲ, ತೃತೀಯ ಲಿಂಗಿಗಳಿಗೂ ವಿಸ್ತರಿಸುವ ಮಹತ್ವದ ನಿರ್ಧಾರದ ಫಲಶೃತಿಯೇ ಮೈತ್ರಿ ಯೋಜನೆ. ಉದ್ಯೋಗಾವಕಾಶಗಳಿಂದ ವಂಚಿತರಾಗಿ ಸಮಾಜದ ಅವಕೃಪೆಗೆ ಒಳಗಾಗಿರುವ ಲಿಂಗ ಅಲ್ಪಸಂಖ್ಯಾತ ಈ ಸಮುದಾಯಕ್ಕೆ 500 ರೂ ಮಾಸಾಶನ ನೀಡುವ ಈ ಯೋಜನೆ ಜನ ಮೆಚ್ಚುವ ಯೋಜನೆ ಎನಿಸಿದೆ. ಸಿದ್ದರಾಮಯ್ಯ ಅವರ ಸರ್ಕಾರದ ಮನಸ್ವಿನಿ ಹಾಗೂ ಮೈತ್ರಿ ಯೋಜನೆಗಳಲ್ಲಿ ಮಾನವೀಯತೆಯ ಸ್ಪರ್ಶವನ್ನು ಕಾಣಬಹುದು.

### ಕೃಷಿಕರ ಪರ ಸರ್ಕಾರ

ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯಬೇಕು ಎಂಬುದು ಸರ್ಕಾರದ ಸದಾಶಯ. ರೈತರಿಗೆ ನೆರವು ಒದಗಿಸುವ ಹತ್ತು ಹಲವು ಪ್ರೋತ್ಸಾಹದಾಯಕ ಯೋಜನೆಗಳನ್ನು ಪ್ರಕಟಿಸಿರುವ ಸಿದ್ದರಾಮಯ್ಯ ಸರ್ಕಾರವು ಕೃಷಿಕರ ಪರ ಸರ್ಕಾರ ಎಂದೇ ಹೆಸರು ಗಳಿಸಿದೆ.

ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಬೆಳೆ ಸಾಲ ನೀಡುವ ಯೋಜನೆಯನ್ನು ರೂಪಿಸಿರುವ ಸಹಕಾರಿ ಇಲಾಖೆ ಮೂರು ಲಕ್ಷ ರೂ ವರೆಗೆ ಬಡ್ಡಿ–ರಹಿತ ಅಲ್ಪಾವಧಿ ಸಾಲ, ಮೂರು ಲಕ್ಷ ರೂ ನಿಂದ ಹತ್ತು ಲಕ್ಷ ರೂ ವರೆಗೆ ಮಧ್ಯಮಾವಧಿ ಹಾಗೂ ಶೇ. 3ರ ಬಡ್ಡಿ ದರದಲ್ಲಿ ದೀರ್ಘಾವಧಿ ಸಾಲ ವಿತರಿಸುತ್ತಿದೆ. ಕೃಷಿ ಯಂತ್ರೋಪಕರಣಗಳನ್ನು ಅತ್ಯಲ್ಪ ದರದಲ್ಲಿ ಬಾಡಿಗೆಗೆ ನೀಡುವ ಕೃಷಿ ಯಂತ್ರಧಾರೆ ಯೋಜನೆ, ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಬಡ ರೈತರಿಗೆ ಸಹಕಾರಿಯಾಗಿದೆ.





ಅನ್ನದಾತನ ಆತ್ಮಹತ್ಯೆಗೆ ಸಾಂತ್ವನ...

ಮಳೆಯಾಶ್ರಿತ ರೈತರ ಹಿತದೃಷ್ಟಿ ಕಾಯ್ದುಕೊಳ್ಳಲು ರೂಪಿಸಿರುವ ಕೃಷಿಭಾಗ್ಯ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸಲು ರೂಪಿಸಿರುವ ಸಾವಯವ ಭಾಗ್ಯ ಯೋಜನೆಗಳು ರೈತರ ಬದುಕನ್ನು ಹಸನಾಗಿಸುವಲ್ಲಿ ಸಫಲವಾಗಿದೆ.

### ಅಧೀರನಾದ ರೈತ, ನೆರವಿಗೆ ಧಾವಿಸಿದ ಸರ್ಕಾರ

ರೈತ ಶ್ರಮಜೀವಿ. ಆತನ ದುಡಿಮೆಗೆ ಬೆಲೆಕಟ್ಟಲಾಗದು. ಬಿತ್ತನೆ ಮಾಡಲು ಬೀಜ ಹಾಗೂ ಭೂಮಿಯ ಫಲವತ್ತತೆ ಹೆಚ್ಚಿಸಲು ರಸಗೊಬ್ಬರ ಖರೀದಿ ಹೀಗೆ ಎಲ್ಲಕ್ಕೂ ಸಾಲ ಮಾಡುವ ಸ್ಥಿತಿ ಭಾರತೀಯ ರೈತನದು. ಬೆಳೆ ಬೆಳೆಯಲು ಸಾಲ ಮಾಡಿ, ಬೆವರು ಸುರಿಸಿದ ನಂತರ ಮಳೆಯ ನಿರೀಕ್ಷೆಯಲ್ಲಿ ಮೋಡ ನೋಡುತ್ತಾನೆ. ವರುಣ ಕೈಕೊಟ್ಟರೆ ಆತನ ಕಷ್ಟ ಹೇಳ ತೀರದು. ಇಂತಹ ಪರಿಸ್ಥಿತಿಯನ್ನು ಎದುರಿಸಲಾಗದೆ ಕರ್ನಾಟಕವೂ ಸೇರಿದಂತೆ ರಾಷ್ಟ್ರದ ವಿವಿಧೆಡೆಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮ್ಮ ಅರಿವಿಗಿಲ್ಲದೆಯೇ ತಮ್ಮ ಕುಟುಂಬಗಳನ್ನು ಸಂಕಷ್ಟಕ್ಕೆ ದೂಡಿದ್ದಾರೆ.

ರೈತರ ಆತ್ಮಹತ್ಯೆಗಳ ಪ್ರಕರಣಗಳ ಹಿನ್ನೆಲೆಯನ್ನು ಹತ್ತಿರದಿಂದ ಪರಿಶೀಲಿಸಿದಾಗ, ಬಹುತೇಕ ಆತ್ಮಹತ್ಯೆ ಪ್ರಕರಣಗಳು ಖಾಸಗಿ ಲೇವಾದೇವಿಗಾರರು ನಿಯಮಗಳನ್ನು ಉಲ್ಲಂಘಿಸಿ ಹೆಚ್ಚು ಪ್ರಮಾಣದಲ್ಲಿ ಬಡ್ಡಿಯನ್ನು ವಸೂಲಿ ಮಾಡಿ ರೈತರನ್ನು ಶೋಷಿಸುತ್ತಿರುವುದರಿಂದ ಉಂಟಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಲೇವಾದೇವಿ ಅಧಿನಿಯಮ 1961, ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ–2004 ರ ಪ್ರಕಾರ ಸಾಲಪಡೆದ ರೈತರ ಹಿತ ಕಾಪಾಡಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ.

ಈ ಅಧಿನಿಯಮದ ಪ್ರಕಾರ ಭದ್ರತೆ ನಿಡಿರುವ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇಕಡಾ 14 ಬಡ್ಡಿಯನ್ನು ಹಾಗೂ ಭದ್ರತೆ–ರಹಿತ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇಕಡಾ 16 ಬಡ್ಡಿಯನ್ನು ಮಾತ್ರ ವಿಧಿಸಲು ಅವಕಾಶವಿದೆ. ಯಾವುದೇ ವ್ಯಕ್ತಿಯು ನೀಡಿದ ಸಾಲಕ್ಕೆ ಮಿತಿಮೀರಿದ ಬಡ್ಡಿಯನ್ನು ವಿಧಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸಾಲ ನೀಡಿದ ವ್ಯಕ್ತಿಯ ಕಿರುಕುಳ ಅಥವಾ ಹಿಂಸೆಗೆ ಒಳಗಾಗಿ ಯಾವುದೇ ಸಾಲಗಾರ ಅಥವಾ ಆ ವ್ಯಕ್ತಿಯ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಂಡಲ್ಲಿ, ಅದು ಸಾಲ ನೀಡಿದ ವ್ಯಕ್ತಿಯೇ ಆತ್ಮಹತ್ಯೆಗೆ ಪ್ರಚೋದನೆ ನೀಡಿದಂತಾಗುತ್ತದೆ ಎಂಬ ಪರಿಚ್ಛೇಧವೂ ಇದೆ. ಸಾಲ ಮರುಪಾವತಿಗೆ ನಿರಂತರ ಒತ್ತಾಯ ಮಾಡುವುದನ್ನು, ದೌರ್ಜನ್ಯ ಹಾಗೂ ಬೆದರಿಕೆ ಒಡ್ಡುವುದನ್ನು ಈ ಅಧಿನಿಯದಡಿ ಹಿಂಸೆ ಎಂದು ಪರಿಗಣಿಸಲಾಗುತ್ತದೆ.

ಅಂತಹ ವ್ಯಕ್ತಿಗಳಿಗೆ ಕರ್ನಾಟಕ ಲೇವಾದೇವಿ ಅಧಿನಿಯಮದ ಪರಿಚ್ಛೇದ 38 ರ ಪ್ರಕಾರ ಸಜೆ ಅಥವಾ ದಂಡ ಅಥವಾ ಎರಡೂ ಶಿಕ್ಷೆಗಳನ್ನು ವಿಧಿಸಬಹುದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರ ಪಾಲಿಗೆ ಯಮಸ್ವರೂಪಿಗಳಾಗಿದ್ದ ಖಾಸಗಿ ಲೇವಾದೇವಿಗಾರರನ್ನು ರಾಜ್ಯ ಸರ್ಕಾರ ಬಗ್ಗು ಬಡಿದಿದೆ. ರೈತರನ್ನು ಶೋಷಣೆ ಮಾಡುತ್ತಿದ್ದ ಲೇವಾದೇವಿಗಾರರನ್ನು ಪೊಲೀಸರು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ. ಈ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಆದ್ಯತೆ ನೀಡಿ ರೈತರ ಹಿತ ರಕ್ಷಿಸಿದೆ.

ಅಧೀರರಾಗಿ ಆತ್ಮಹತ್ಯೆಗೆ ಶರಣಾದ ರೈತರ ಸಂತ್ರಸ್ತ ಕುಟುಂಬಗಳಿಗೆ ಮಾನವೀಯ ನೆರವು, ಮೃತ ರೈತನ ಪತ್ನಿಗೆ ಎರಡು ಸಾವಿರ ರೂ ಮಾಸಾಶನ ಹಾಗೂ ಆತನ ಮಕ್ಕಳಿಗೆ ಸ್ನಾತಕೋತ್ತರ ಪದವಿಯವರೆಗೂ ಉಚಿತ ಶಿಕ್ಷಣ ಘೋಷಿಸಿ ನೆರವಿಗೆ ಧಾವಿಸಿದ ಸಿದ್ದರಾಮಯ್ಯ ಸರ್ಕಾರವು ರೈತರಲ್ಲಿ ಆತ್ಮಸ್ಥೈರ್ಯ ತುಂಬಿದೆ ಎಂಬುದು ಗಮನಾರ್ಹ ಅಂಶ.

### ನೀರಾವರಿಗೆ ಪರಮಾದ್ಯತೆ

ಕಾವೇರಿ ಹಾಗೂ ಕೃಷ್ಣಾ ಕೊಳ್ಳದ ಎಲ್ಲಾ ನೀರಾವರಿ ಯೋಜನೆಗಳಿಗಾಗಿ ವರ್ಷಕ್ಕೆ ಹತ್ತು ಸಾವಿರ ಕೋಟಿ ರೂ ನಂತೆ 50,000 ಕೋಟಿ ರೂ ವೆಚ್ಚ ಮಾಡಬೇಕೆಂಬ ನಿರ್ಧಾರವನ್ನು ಸಿದ್ದರಾಮಯ್ಯನವರು ಕೈಗೊಂಡಿದ್ದರು. ಅವರು ಮಂಡಿಸಿದ ನಾಲ್ಕೂ ಆಯವ್ಯಯಗಳನ್ನು ಪರಾಮರ್ಶಿಸಿದಾಗ, ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ನೀರಾವರಿ ಯೋಜನೆಗಳಿಗೆ ಮಾಡುವ ವೆಚ್ಚ 50,000 ಕೋಟಿ ರೂ ಅಲ್ಲ, 60,000 ಕೋಟಿ ರೂ ತಲುಪುವ ನಿರೀಕ್ಷೆ ಇದೆ. ಸಿದ್ದರಾಮಯ್ಯ ಸರ್ಕಾರ ನೀರಾವರಿಗೆ ಪ್ರಥಮಾದ್ಯತೆ ಮಾತ್ರವಲ್ಲ, ಪರಮಾದ್ಯತೆ ನೀಡಿದೆ ಎಂದೇ ಹೇಳಬಹುದು.





### ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವೇಗ ಚುರುಕು

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ಪರಿಚ್ಛೇಧ 371–ಜೆ ಅನ್ವಯ ವಿಶೇಷ ಸ್ಥಾನಮಾನ ದೊರಕಿಸಿಕೊಡುವಲ್ಲಿ ಈ ಸರ್ಕಾರದ ಪಾತ್ರ ಸ್ಮರಣಾರ್ಹ. ಈ ಪ್ರದೇಶಕ್ಕೆ ಸಂವಿಧಾನಬದ್ಧವಾಗಿ ದೊರಕಿಸಿಕೊಡಬೇಕಾದ ಸೌಲಭ್ಯಗಳನ್ನು ಕಲ್ಪಿಸುವಲಿ ತಮ್ಮ ಸರ್ಕಾರ ಸ್ಪಂದಿಸುತ್ತಿದೆ. ಮುಂದಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳ ವೇಗ ಅತ್ಯಂತ ಚುರುಕಾಗಿ ನಡೆಯಲಿದೆ ಎಂಬುದು ಮುಖ್ಯಮಂತ್ರಿಯವರ ವಿಶ್ವಾಸ.

### ವಸತಿ ಭಾಗ್ಯದಲ್ಲ ಮುನ್ನಡೆ

ಗುಡಿಸಲು ಮುಕ್ತ ಕರ್ನಾಟಕದ ಕನಸನ್ನು ನನಸು ಮಾಡಲು ಹೊರಟಿರುವ ಸಿದ್ದರಾಮಯ್ಯ ಸರ್ಕಾರ ವರ್ಷಕ್ಕೆ ಮೂರು ಲಕ್ಷ ಮನೆಗಳಂತೆ ಐದು ವರ್ಷಗಳಲಿ 15 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಿತ್ತು. ಅದರಂತೆ, 2013–14 ನೇ ಸಾಲಿನಲಿ ಮೂರು ಲಕ್ಷ, 2014–15 ನೇ ಸಾಲಿನಲ್ಲಿ 3.17 ಲಕ್ಷ ಹಾಗೂ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ವ್ಯಾಪ್ತಿಯ 1.5 ಲಕ್ಷ ಮನೆಗಳೂ ಸ್ಥೆರಿದಂತೆ 2015–16 ನೇ ಸಾಲಿನಲ್ಲಿ 4.5 ಲಕ್ಷ ಮನೆಗಳ ನಿರ್ಮಾಣ ಮಾಡಿ, ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ.

### ಕ್ರಾಂತಿಕಾರಿ ಹೆಜ್ಜೆ

ಅನುಸೂಚಿತ ಜಾತಿಗಳ ಯೋಜನೆ ಹಾಗೂ ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ – 2013 ಸಿದ್ದರಾಮಯ್ಯ ಅವರ ಸರ್ಕಾರದ ಕ್ರಾಂತಿಕಾರಿ ಹೆಜ್ಜೆಗಳಲ್ಲೊಂದು. ದಲಿತರ ಬಗೆಗಿನ ಕಾಳಜಿ ಕೇವಲ ಬಾಯಿ ಮಾತಿನದ್ದಲ್ಲ ಎಂಬುದನ್ನು ಸಾಬೀತುಪಡಿಸಿದ ಈ ಅಧಿನಿಯಮವು ರಾಜ್ಯದ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು. ಇದಕ್ಕಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿರುವ ಯೋಜನಾ ವೆಚ್ಚದ ಶೇಕಡಾ 24.1 ರಷ್ಟು ಮೊತ್ತವನ್ನು ಈ ಸಮುದಾಯಗಳ ಅಭಿವೃದ್ಧಿಗೆ ಮೀಸಲಿರಿಸಲಾಗಿದೆ.

ಇದು ಒಂದು ಅವಧಿಯ ಜನಪ್ರಿಯ ಕಾರ್ಯಕ್ರಮ ಅಲ್ಲ. ಇದೊಂದು ಶಾಶ್ವತವಾದ ಕಾರ್ಯಕ್ರಮ. ಇದಕ್ಕೆ ಈಗ ಕಾನೂನಿನ ಬೆಂಬಲವೂ ಇದೆ. ಸಂವಿಧಾನದತ್ತವಾದ ಮೀಸಲಾತಿ ನೀತಿಯಂತೆಯೇ ರಾಜ್ಯದಲ್ಲಿರುವ ಈ ಕಾಯಿದೆಗೆ ಮನ್ನಣೆ ಇದೆ. ಯಾರೇ ಅಧಿಕಾರದಲ್ಲಿರಲಿ ಅಥವಾ ಯಾವುದೇ ಪಕ್ಷದವರು ಅಧಿಕಾರದಲ್ಲಿರಲಿ ಈ ಕಾಯಿದೆಯನ್ನು ಗೌರವಿಸಬೇಕು ಹಾಗೂ ಈ ಕಾಯಿದೆಯಂತೆ ಕಾರ್ಯನಿರ್ವಹಿಸಬೇಕು. ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ಅವರು ದಲಿತರ ಸರ್ವಾಂಗೀಣ ಅಭಿವೃದ್ಧಿಯತ್ತ ಕಂಡ ಕನಸನ್ನು ನನಸು ಮಾಡುವ ಪ್ರಯತ್ನ ಇದಾಗಿದೆ ಎಂಬುದು ಮುಖ್ಯಮಂತ್ರಿಯವರ ಬಹಿರಂಗ ಮಾತು.

ಈ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಮೀಸಲಿರಿಸಿದ ಅನುದಾನವನ್ನು ಆಯಾ ಸಾಲಿನಲ್ಲೇ ಬಳಕೆ ಮಾಡಬೇಕು. ಒಂದು ವೇಳೆ ಯಾವುದೇ ಕಾರಣಕ್ಕಾಗಲಿ ಆ ವರ್ಷದಲ್ಲಿ ಅನುದಾನವನ್ನು ಬಳಕೆ ಮಾಡಲು ಸಾಧ್ಯವಾಗದಿದ್ದಲ್ಲಿ ಅನುದಾನವು ವ್ಯರ್ಥವಾಗುವುದಿಲ್ಲ. ಆ ಅನುದಾನವನ್ನು ಮುಂದಿನ ವರ್ಷಕ್ಕೆ ಮುಂದುವರೆಸಿ ಉಪಯೋಗಿಸಲು ಅವಕಾಶವಿದೆ. ಅಂತೆಯೇ, ಸಕಾಲದಲ್ಲಿ ಅನುದಾನವನ್ನು ಬಳಕೆ ಮಾಡಲು ನಿರ್ಲಕ್ಷಿಸಿದ ಅಥವಾ ಅಸಮರ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಆರು ತಿಂಗಳ ಕಾರಾಗೃಹ ವಾಸಕ್ಕೂ ಕಳುಹಿಸಲು ಕಾಯಿದೆಯಲ್ಲಿ ಅವಕಾಶವಿದೆ.

ರಾಜ್ಯದ 33 ಅಭಿವೃದ್ಧಿ ಇಲಾಖೆಗಳ ವಿವಿಧ ಯೋಜನೆಗಳಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗಳಡಿಯಲ್ಲಿ ಒಟ್ಟು 40,800 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಅಂದರೆ 2016–17 ನೇ ಸಾಲಿನಲ್ಲಿ ಒಟ್ಟಾರೆ 19,572 ಕೋಟಿ ರೂ ಅನುದಾನ ಮೀಸಲಿರಿಸಿದೆ. ಇದು ತಮ್ಮ ಸರ್ಕಾರದ ದಲಿತಪರ ಕಾಳಜಿ ಅಲ್ಲದೆ ಮತ್ತೇನು ? ಎಂಬುದು ಸಿದ್ದರಾಮಯ್ಯ ಅವರ ಪ್ರಶ್ನೆ.

### ಹೂಡಿಕೆದಾರರ ಮೆಚ್ಚುಗೆ ಮಾತುಗಳು

ಬೆಂಗಳೂರಿನಲ್ಲಿ ಫೆಬ್ರವರಿಯಲ್ಲಿ ನಡೆದ ಇನ್ವೆಸ್ಟ್ ಕರ್ನಾಟಕ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಎಲ್ಲೆಡೆ ಮೆಚ್ಚುಗೆ ಮಾತುಗಳು ವ್ಯಕ್ತವಾಗಿದೆ. ಈ ಸಮಾವೇಶದಲ್ಲಿ ಪಾಲ್ಗೊಂಡ ಕೈಗಾರಿಕೋದ್ಯಮಗಳು ಹಾಗೂ ಉದ್ಯಮಪತಿಗಳು ಕರ್ನಾಟಕವನ್ನು ಕೈಗಾರಿಕಾ–ಸ್ನೇಹಿ ಹಾಗೂ ಬಂಡವಾಳ ಹೂಡಿಕೆದಾರರ ಸ್ನೇಹಿ ರಾಜ್ಯ ಎಂದು ಬಣ್ಣಿಸಿದ್ದಾರೆ.



### ಹೊಸ ಇಲಾಖೆಯ ಸೃಜನೆ

ಮುಖ್ಯಮಂತ್ರಿಯವರ ನೇರ ನಿಗಾ ಹಾಗೂ ನಿಯಂತ್ರಣದಲ್ಲೇ ಕೌಶಲ್ಯ ಅಭಿವೃದ್ಧಿ ಹಾಗೂ ಜೀವನೋಪಾಯ ಇಲಾಖೆ ಎಂಬ ಹೊಸ ಇಲಾಖೆಯನ್ನು ಸೃಜಿಸಲಾಗಿದೆ. ಕೈಗಾರಿಕೆ, ಕೃಷಿ ಹಾಗೂ ಸೇವಾ ಕ್ಷೇತ್ರದ ಅಗತ್ಯಗಳು, ಅವಶ್ಯಕತೆಗಳು ಹಾಗೂ ಬೇಡಿಕೆಗಳನ್ನು ಪೂರೈಸಲಿರುವ ಈ ಇಲಾಖೆಯು ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಸೃಷ್ಟಿಸಿ ಬೆಳವಣಿಗೆಗೆ ಪೂರಕವಾಗಲಿದೆ. ಸಾವಿರಾರು ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗಾವಕಾಶಗಳನ್ನು ದೊರೆಕಿಸಿಕೊಡಲಿರುವ ಈ ಇಲಾಖೆಯ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ 500 ಕೋಟಿ ರೂ ಮೀಸಲಿರಿಸಲಾಗಿದೆ.

### ಎಲ್ಲದರಲ್ಲೂ ಕರ್ನಾಟಕ ಮೊದಲು

ರಾಷ್ಟ್ರದಲ್ಲೇ ಮೊದಲ ಬಾರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ವಹಿವಾಟು ನಡೆಸುವ ಏಕೀಕೃತ ಮಾರುಕಟ್ಟೆ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದಿರುವ ಕ್ರಮವನ್ನು ಕೇಂದ್ರ ಸರ್ಕಾರವೂ ಸ್ವಾಗತಿಸಿ, ಅನುಕರಿಸುತ್ತಿರುವುದು ರಾಜ್ಯ ಸರ್ಕಾರದ ಹಿರಿಮೆ ಮತ್ತು ಗರಿಮೆಯಾಗಿದೆ.

ಅಲ್ಲದೆ, ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನವೋದ್ಯಮ ನೀತಿ (ಸ್ಟಾರ್ಟ್ ಅಪ್ ಪಾಲಿಸಿ) ಪ್ರಕಟಿಸಿ, ವಿಶ್ವದ 20 ಮಹಾನಗರಗಳಲ್ಲಿ ಬೆಂಗಳೂರಿಗೂ ಸ್ಥಾನ ದೊರೆತಿದೆ. ನಮ್ಮ ರಾಜ್ಯದ ರಾಜಧಾನಿ ಉದ್ಯಾನ ನಗರಿ ಬೆಂಗಳೂರು ಮಹಾ ನಗರವು ಭಾರತದ ನವೋದ್ಯಮಗಳ ರಾಜಧಾನಿಯಾಗಿ ಪರಿವರ್ತಿತವಾಗಿದೆ.

ಅಂತೆಯೇ, ಇಡೀ ಭಾರತದಲ್ಲೇ ಅರಮನೆ ನಗರಿ ಮೈಸೂರು ಎರಡನೇ ಬಾರಿಗೆ ಸ್ವಚ್ಛತಾ ನಗರಿ ಎಂಬ ಗೌರವಕ್ಕೆ ಪಾತ್ರವಾಗಿದೆ. ಸರ್ವರಿಗೂ ಸಮಪಾಲು ಹಾಗೂ ಸರ್ವರಿಗೂ ಸಮಬಾಳು ಎಂಬ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ವೈಜ್ಞಾನಿಕವಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿಯನ್ನು ಮಾಡುವಲ್ಲಿಯೂ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯವೇ ಮೊದಲ ರಾಜ್ಯವಾಗಿದೆ. ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿಯೂ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ.

### ಶುದ್ಧ ಕುಡಿಯುವ ನೀರು ಒದಗಿಸಲು ಬದ್ಧ

ರಾಜ್ಯದಲ್ಲಿ ತಮ್ಮ ಅಧಿಕಾರಾವಧಿ ಪೂರ್ಣಗೊಳ್ಳುವ ಮುನ್ನ ಶುದ್ಧ ಕುಡಿಯುವ ನೀರಿನ ಏಳು ಸಾವಿರ ಘಟಕಗಳ ಸ್ಥಾಪನೆಗೆ ತಾವು ಬದ್ಧ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

### ಬಯಲು ಬಹಿರ್ದೆಸೆ ಮುಕ್ತ ರಾಜ್ಯ

ರಾಜ್ಯದಲ್ಲಿ 55 ಲಕ್ಷ ಗ್ರಾಮೀಣ ಶೌಚಾಲಯಗಳ ನಿರ್ಮಾಣದ ಗುರಿಗೆ ಪ್ರತಿಯಾಗಿ 21 ಲಕ್ಷ ಗ್ರಾಮೀಣ ಶೌಚಾಲಯಗಳನ್ನು ನಿರ್ಮಿಸಿ ರಾಷ್ಟ್ರದಲ್ಲೇ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ಪ್ರಸಕ್ತ ಸಾಲಿನಲ್ಲಿ 10.2 ಲಕ್ಷ ಶೌಚಾಲಯದ ನಿರ್ಮಾಣದ ಗುರಿ ಇದೆ. ಇದರಲ್ಲಿ 6.5 ಲಕ್ಷ ಶೌಚಾಲಯಗಳನ್ನು ನಿರ್ಮಿಸಿ ಈಗಾಗಲೇ ಗುರಿ ಸಾಧಿಸಲಾಗಿದೆ.

ಮುಂದಿನ ವರ್ಷ 12 ಲಕ್ಷ ಶೌಚಾಲಯಗಳ ನಿರ್ಮಾಣದ ಗುರಿ ಹಾಕಿಕೊಂಡಿದ್ದೇವೆ. ಅಲ್ಲದೆ, 2018 ರಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧಿ ಅವರ 150 ನೇ ಜನ್ಮ ದಿನಾಚರಣೆಯ ವೇಳೆಗೆ ರಾಜ್ಯದಲ್ಲಿ ನಿಗದಿತ ಗುರಿಯಂತೆ ಎಲ್ಲಾ 55 ಲಕ್ಷ ಶೌಚಾಲಯಗಳನ್ನೂ ನಿರ್ಮಿಸಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯ ಕರ್ನಾಟಕವಾಗಲಿದೆ ಎಂದು ಮುಖ್ಯಮಂತ್ರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.






### ಭೂ ಒತ್ತುವರಿ ತೆರವು

ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದು ಲಕ್ಷ ಕೋಟಿ ರೂ ಮಾರುಕಟ್ಟೆ ಮೌಲ್ಯದ 5211 ಎಕರೆ ಭೂ ಒತ್ತುವರಿ ತೆರವು ಮಾಡಿಸಿ ವಶಪಡಿಸಿಕೊಂಡ ಹೆಗ್ಗಳಿಕೆಯೂ ಈ ಸರ್ಕಾರದ್ದಾಗಿದೆ.



### ಬೆಳಕಿನ ಭಾಗ್ಯ

ರಾಜ್ಯದಲ್ಲಿ ಅಸಂಪ್ರದಾಯಿಕ ಹಾಗೂ ನವೀಕರಿಸಬಹುದಾದ ವಿದ್ಯುತ್ ಘಟಕಗಳ ಸ್ಥಾಪನೆಗೆ ಆದ್ಯತೆ. ಸೌರ ವಿದ್ಯುತ್ ಉತ್ಪಾದನೆಗೆ ಚಾಲನೆ. ಜಲ ವಿದ್ಯುತ್ ಉತ್ಪಾದನಾ ಸ್ಥಾವರಗಳ ಪುನಶ್ಚೇತನ. ಹೀಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ರಾಜ್ಯಕ್ಕೆ ಬೆಳಕಿನ ಭಾಗ್ಯ ದೊರಕಿಸಿಕೊಡಲು ತಮ್ಮ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಿದೆ ಎಂಬುದು ಸಿದ್ದರಾಮಯ್ಯ ಅವರ ನೇರ ನುಡಿ.

### ಕೇವಲ ಭರವಸೆಗಳ ಹೊತ್ತಿಗೆಯಲ್ಲ

"ಚುನಾವಣಾ ಪ್ರಣಾಳಿಕೆ ಎಂಬುದು ಕೇವಲ ಭರವಸೆಗಳ ಹೊತ್ತಿಗೆಯಲ್ಲ. ಅದು ನಮ್ಮ ಸರ್ಕಾರದ ಬದ್ಧತೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲನೇ ದಿನವೇ ಚುನಾವಣಾ ಪೂರ್ವದಲ್ಲಿ ಪ್ರಕಟಿಸಿದ್ದ ಪಕ್ಷದ ಪ್ರಣಾಳಿಕೆಯಲ್ಲಿನ 165 ಭರವಸೆಗಳಲ್ಲಿ ರಾಜ್ಯದ ಒಂದು ಕೋಟಿಗೂ ಹೆಚ್ಚು ಕುಟುಂಬಗಳಿಗೆ ಅನುಕೂಲವಾಗುವ ಅನ್ನಭಾಗ್ಯ, ಅಂಗನವಾಡಿ ಮಕ್ಕಳೂ ಒಳಗೊಂಡಂತೆ ಸರ್ಕಾರಿ ಶಾಲೆಗಳಲಿ ವ್ಯಾಸಂಗ ಮಾಡುತ್ತಿರುವ ಒಂದು ಕೋಟಿಗೂ ಹೆಚ್ಚು ಮಕ್ಕಳಿಗೆ ಕ್ಷೀರಭಾಗ್ಯ, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮಕ್ಕಳ ವಸತಿ ಹಾಗೂ ಭೋಜನ ಸಹಾಯ ಯೋಜನೆ ವಿದ್ಯಾಸಿರಿ, ಸ್ವಯಂ ಉದ್ಯೋಗ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದವರು ಪಡೆದ ಸಾಲ ಮನ್ನಾ ಋಣಮುಕ್ತ ಭಾಗ್ಯ, ಮನೆ ನಿರ್ಮಾಣಕ್ಕೆ ಸಹಾಯ ಧನ ಒದಗಿಸುವ ವಸತಿ ಭಾಗ್ಯ ಸೇರಿದಂತೆ 100 ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆದಿದ್ದೇವೆ ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎದೆಯುಬ್ಬಿಸಿ ಹೇಳುತ್ತಾರೆ. ಅಂತೆಯೇ ಇದು ನುಡಿದಂತೆ ನಡೆಯುತ್ತಿರುವ ಸ್ಥಿರ ಸರ್ಕಾರ.






# ಮಾಹಿತಿ ತಂತ್ರಜ್ಞಾನದ ಮಹತ್ವದ ಹೆಜ್ಜೆಗಳು..

ಕರ್ನಾಟಕ, ದೇಶದ ನಕ್ಷೆಯಲ್ಲಿ ವಿಸ್ತೀರ್ಣದಲ್ಲಿ 8 ನೆಯ ದೊಡ್ಡರಾಜ್ಯ ಎನ್ನುವ ಹೆಗ್ಗಳಿಕೆಯ ಹಾಗೂ ಜನಸಂಖ್ಯೆಯಲ್ಲಿ ಒಂಭತ್ತನೆಯ ಸ್ಥಾನದಲ್ಲಿರುವ ಅತಿವೇಗವಾಗಿ ಕೈಗಾರೀಕರಣಗೊಳ್ಳುತ್ತಿರುವ ರಾಜ್ಯ.

'ಕರ್ನಾಟಕದಲ್ಲಿ ಬಂಡವಾಳ ಹೂಡಿ, ನೀವೂ ಬೆಳೆಯಿರಿ ಮತ್ತು ಕೈಗಾರಿಕಾ ಕ್ಷೇತ್ರವನ್ನು ಬೆಳೆಸಿರಿ' ಎನ್ನುವ ಆಶಯದೊಂದಿಗೆ ಈಚೆಗಷ್ಟೇ ಬೆಂಗಳೂರಿನಲ್ಲಿ ನಡೆದ 'ಇನ್ವೆಸ್ಟ್ ಕರ್ನಾಟಕ– 2016' ಅಪೂರ್ವ ಯಶಸ್ಸು ಕಂಡಿದೆ.

ಕೈಗಾರಿಕಾ ಕ್ಷೇತ್ರದಲ್ಲಿ ವಿವಿಧ ಕೌಶಲಗಳನ್ನು, ನಾವೀನ್ಯತೆ–ನೈಪುಣ್ಯತೆಗಳನ್ನು ಅಳವಡಿಸಿಕೊಂಡು ದೇಶದ ಕೈಗಾರಿಕರಂಗದಲ್ಲಿ'ತಾಂತ್ರಿಕ ಕೌಶಲ'ಕ್ಕೆ ಮಾದರಿಯಾಗಿ ತನ್ನದೇ ಛಾಪು ಮೂಡಿಸಿರುವಂತಹ ಹೆಮ್ಮೆಯ ರಾಜ್ಯ ಕರ್ನಾಟಕ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಎಲೆಕ್ಟ್ರಾನಿಕ್ ಉದ್ದಿಮೆ, ಕಂಪ್ಯೂಟರ್ ಸಾಫ್ಟ್‌ವೇರ್ ಕ್ಷೇತ್ರಗಳಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿ ಆರ್ಥಿಕ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡಿರುವಂಥ ರಾಜ್ಯ.

ರಾಜ್ಯದ ಮಾಹಿತಿ ತಂತ್ರಜ್ಞಾನದ ಸರ್ವಾಂಗೀಣ ಅಭಿವೃದ್ಧಿಗೆ ಉತ್ಸಾಹಿ ಉದ್ದಿಮೆದಾರರು, ತಾಂತ್ರಿಕ ಪರಿಣಿತರ ಲಭ್ಯತೆ ಅಷ್ಟೇ ಅಲ್ಲದೆ ರಾಜ್ಯದ ಪರಿಸರ ಸ್ನೇಹಿ ವಾತಾವರಣ, ಕೈಗಾರಿಕಾ ಸ್ನೇಹಿ ನೀತಿಗಳು ಕೂಡಾ ಕಾರಣವಾಗಿವೆ. ವಿಶ್ವಾದ್ಯಂತ ಕೈಗಾರಿಕೋದ್ಯಮಿಗಳು ಕರ್ನಾಟಕದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರುತ್ತಿರುವುದು ಇದೇ ಕಾರಣಗಳಿಗಾಗಿಯೇ. ದೇಶದ ಮಾಹಿತಿ ತಂತ್ರಜ್ಞಾನ ರಫ್ತೀಕರಣ ಪ್ರಕ್ರಿಯೆಯಲ್ಲಿ ರಾಜ್ಯದ ಪಾಲು ಶೇಕಡ 30% ರಷ್ಟಿದೆ ಎಂಬುದೂ ಗಮನಾರ್ಹ ಅಂಶ.

ಅಸೋಚಾಮ್‌ನ (ಅಸೋಸಿಯೇಟೆಡ್ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್) ಈಚಿನ ಸಮೀಕ್ಷೆಗಳ ಪ್ರಕಾರ ಉದ್ಯೋಗ ಸೃಷ್ಟಿಯಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ. 2015–16 ರ ನಾಲ್ಕನೆಯ ತ್ರೈಮಾಸಿಕ ಅಂತ್ಯಕ್ಕೆ ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕದ ಕೊಡುಗೆ ಶೇಕಡ 24 ರಷ್ಟು! ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ (ಶೇಕಡ 23%) ಹಾಗೂ ತಮಿಳುನಾಡು (10.5%) ಗಳಿವೆ.

ವರದಿಯ ಪ್ರಕಾರ ಮಾಹಿತಿ ತಂತ್ರಜ್ಞಾನ ವಲಯ 2016 ಜನವರಿ ಹಾಗೂ ಮಾರ್ಚ್ ವೇಳೆಗೆ ಸುಮಾರು 9 ಲಕ್ಷ ಉದ್ಯೋಗಗಳನ್ನು ಸೃಜಿಸಿ ಶೇ. 57% ರಷ್ಟು ಉದ್ಯೋಗವಕಾಶಗಳನ್ನು ಕಲ್ಪಿಸಿದೆ. ಕರ್ನಾಟಕ ಈ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕ ಅಂತ್ಯಕ್ಕೆ 2.16 ಲಕ್ಷ ಉದ್ಯೋಗವಕಾಶಗಳನ್ನು ಕಲ್ಪಿಸಿದ್ದು ಆನಂತರ ಸ್ಥಾನಗಳಲ್ಲಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣರಾಜ್ಯಗಳಿವೆ.

ರಾಜ್ಯದ ಮಾಹಿತಿ ತಂತ್ರಜ್ಞಾನ ವಲಯದ ಈ ತ್ರಿವಿಕ್ರಮ ಬೆಳವಣಿಗೆಗೆ ಮುಖ್ಯ ಕಾರಣಗಳೆಂದರೆ ರಾಜ್ಯದ ಪರಿಸರ ಸ್ನೇಹಿ ವಾತಾವರಣ, ಮಾಹಿತಿ ತಂತ್ರಜ್ಞಾನ ಸ್ನೇಹಿ ನೀತಿಗಳು, ಜತೆಗೆ ಕರ್ನಾಟಕದ ರಾಜಧಾನಿ ಬೆಂಗಳೂರು– ದೇಶದ 'ಸಿಲಿಕಾನ್ ಕಣಿವೆ' ಎಂಬ ಹೆಗ್ಗಳಿಕೆಯೂ ಸೇರಿದೆ.

ಕರ್ನಾಟಕ ಸರ್ಕಾರ ಕಳೆದ ವರ್ಷ ಪ್ರಕಟಿಸಿರುವ 'ಕರ್ನಾಟಕ ಐ–4' ನೀತಿಯು ಟಯರ್–2, ಟಯರ್–3 ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ವಲಯದ ಬೆಳವಣಿಗೆಗೆ ಪೂರಕವಾಗಿದ್ದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ–ತಂತ್ರಜ್ಞಾನ ಇಲಾಖೆಗಳು ಏಕ ಗವಾಕ್ಷಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಗಿದ್ದು ನವೋದ್ಯಮಿಗಳಿಗೆ ವರದಾನವಾಗಿದೆ. ಅನಿಮೇಶನ್, ಕಂಪ್ಯೂಟರ್ ಗ್ರಾಫಿಕ್ಸ್, ಟೆಲಿಕಾಂ, ಬಿಪಿಓ ಕ್ಷೇತ್ರಗಳು ಇದರ ಲಾಭ ಪಡೆಯಲು ಗರಿಗೆದರಿ ನಿಂತಿವೆ.

ದೇಶದಲ್ಲಿಯೇ ಪ್ರಥಮ ಬಾರಿಗೆ ನವೋದ್ಯಮ ನೀತಿ ಜಾರಿಗೆ ತಂದ ರಾಜ್ಯ ಎಂಬ ಹೆಗ್ಗಳಿಕೆಯ ಕರ್ನಾಟಕ 2,000 ಕೋಟಿ ಹೂಡಿಕೆಯಲ್ಲಿ 20 ಸಾವಿರ ನವೋದ್ಯಮಗಳನ್ನು ಸೃಷ್ಟಿಸಿ ಸಂಶೋಧನೆ ಮತ್ತು ಅಭಿವೃದ್ಧಿಯ ಕಡೆಗೆ ದೃಢ ಹೆಜ್ಜೆಗಳನ್ನಿರಿಸಿದೆ.

ಇದರೊಂದಿಗೆ 2016–17 ರ ಆಯವ್ಯಯದಲ್ಲಿ ನ್ಯೂ ಏಜ್ ಇನ್ ಕ್ಯುಬೇಷನ್ ನೆಟ್‌ವರ್ಕ್ ಅಡಿ ರಾಜ್ಯಾದ್ಯಂತ ಸ್ನಾತಕೋತ್ತರ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ 10 ಹೊಸ ಇನ್ ಕ್ಯುಬೇಟರ್‌ಗಳ ಸ್ಥಾಪನೆ; ಕಿಯೋನಿಕ್ಸ್ ವತಿಯಿಂದ ಬೆಂಗಳೂರು ಮತ್ತು ಶಿವಮೊಗ್ಗ, ಬಾಗಲಕೋಟೆ ಮತ್ತು ಕಲ್ಬುರ್ಗಿ ಐ.ಟಿ. ಪಾರ್ಕುಗಳಲ್ಲಿ ಇನ್‌ಕ್ಯುಬೇಟರ್ ಮತ್ತು ಸಾಮಾನ್ಯ ಇನ್ಸ್ಟ್ರುಮೆಂಟ್ಸ್ ಸೌಲಭ್ಯ. ಬೆಳಗಾವಿ, ಬೀದರ್ ಮತ್ತು ವಿಜಯಪುರಗಳಲ್ಲಿ ಹೊಸ ಐ.ಟಿ. ಪಾರ್ಕ್ ಇನ್‌ಕ್ಯೂಬೇಟರ್ ಗಳ ಸ್ಥಾಪನೆ ಮಾಡುವುದಾಗಿ ಘೋಷಿಸಿರುವುದು ಮಾಹಿತಿ– ತಂತ್ರಜ್ಞಾನ ವಲಯದಲ್ಲಿನ ಅಭೂತಪೂರ್ವ ಬೆಳವಣಿಗೆಗೆ , ಅದ್ಭುತ ಸಾಧನೆಗಳಿಗೆ ನಾಂದಿ ಹಾಡಲಿದೆ.



# ರೈತರ ನೆರವಿಗೆ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ

▪ ಪ್ರಕಾಶ್ ಅಬ್ಬೂರು

**ಮು**ಖ್ಯಮಂತ್ರಿ ಸಿದ್ದರಾಮಯ್ಯ ಅವರು 2016–17ನೇ ಸಾಲಿನ ಬಜೆಟ್‌ನ ಆರಂಭದಲ್ಲಿಯೇ ಪ್ರಸ್ತಾಪಿಸಿರುವ ವಿಷಯ. "ನಮ್ಮ ಸರ್ಕಾರ ಪ್ರಗತಿಪರ ಕಾರ್ಯನೀತಿ ಮತ್ತು ಆಯವ್ಯಯ ಬೆಂಬಲದಿಂದಾಗಿ ಹಲವಾರು ರಾಷ್ಟ್ರೀಯ ಸಾಧನೆ ಮತ್ತು ಮನ್ನಣೆಗೆ ಪಾತ್ರವಾಗಿದೆ. ನಮ್ಮ ಸರ್ಕಾರ ಕಳೆದ ವರ್ಷ ಜಾರಿಗೊಳಿಸಿದ ಕೃಷಿ ಮಾರುಕಟ್ಟೆಯ ಆನ್‌ಲೈನ್ ಹರಾಜು ಪದ್ಧತಿಯ ಯಶಸ್ಸಿನಿಂದ ಪ್ರೇರಣೆ ಪಡೆದಿರುವ ಕೇಂದ್ರ ಸರ್ಕಾರವು ಈ ವರ್ಷ ಇದನ್ನು ತನ್ನ ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಅಳವಡಿಸಿಕೊಂಡಿದೆ".

ದೇಶಕ್ಕೆ ಮಾದರಿಯಾದ ಈ ಕಾರ್ಯಕ್ರಮವಾದರೂ ಏನು ! ವರ್ಷವಿಡೀ ಕಷ್ಟಪಟ್ಟು ಬೆಳೆದ ಬೆಳೆಗೆ ಸೂಕ್ತ ಬೆಲೆ ದೊರೆಯದೆ, ದಳ್ಳಾಳಿಗಳ ಕೈಯಲ್ಲಿ ನಲುಗಿ, 'ಬೇಸಾಯ ಅಂದರೆ ನೀ ಸಾಯ, ಮನೆಮಂದಿಯೆಲ್ಲಾ ಸಾಯ' ಎಂಬ ಹಳೆಯ ಮಂತ್ರವನ್ನೇ ಜಪಿಸುತ್ತಾ, ಹತಾಶರಾಗಿರುವ ರೈತರಿಗೆ ಇದರಿಂದ ದೊರೆಯಬಹುದಾದ ಪ್ರಯೋಜನವಾದರೂ ಏನು ?

ರೈತರ ಬೆಳೆಗಳಿಗೆ ಸ್ಪರ್ಧಾತ್ಮಕವಾದ, ನ್ಯಾಯಸಮ್ಮತವಾದ ಬೆಲೆ ದೊರಕಿಸಿಕೊಡುವ ಪ್ರಯತ್ನವೇ ವಿದ್ಯುನ್ಮಾನ ವೇದಿಕೆಯ ಮೂಲಕ ಕೃಷಿ ಉತ್ಪನ್ನಗಳ ಮಾರಾಟ ಅರ್ಥಾತ್ ಕೃಷಿ ಉತ್ಪನ್ನಗಳ ಆನ್‌ಲೈನ್ ಮಾರಾಟ. ಸರ್ಕಾರವು 2013ರಲ್ಲಿ ಜಾರಿಗೊಳಿಸಿದ ಕೃಷಿ ಮಾರಾಟ ನೀತಿಯ ಪರಿಣಾಮವಾಗಿ ಈ ವ್ಯವಸ್ಥೆ ರೂಪುಗೊಂಡಿದೆ. ಇದನ್ನು ರೈತಬಾಂಧವರಿಗೆ ಮನವರಿಕೆ ಮಾಡಿಕೊಡುವ ಸಲುವಾಗಿಯೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಕಾರದಲ್ಲಿ ಕೃಷಿ ಮಾರಾಟ ಇಲಾಖೆ ಹಾಗೂ ಕೃಷಿ ಮಾರುಕಟ್ಟೆ ಮಂಡಳಿ ರಾಜ್ಯವ್ಯಾಪಿ ಮಾಹಿತಿ ಅಭಿಯಾನ ಹಮ್ಮಿಕೊಂಡಿದೆ.

**ಕೃಷಿ ಮಾರಾಟ ನೀತಿ**

2013ರಲ್ಲಿ ಇಡೀ ದೇಶದಲ್ಲಿಯೇ ಮೊದಲನೆಯದಾಗಿ ಕೃಷಿ ಮಾರುಕಟ್ಟೆ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದ್ದು, ಈ ಮೂಲಕ ರೈತರಿಗೆ ಸ್ಪರ್ಧಾತ್ಮಕ ಬೆಲೆ ದೊರಕಿಸಿಕೊಡಲು ಹಲವಾರು ಕ್ರಮ ಕೈಗೊಳ್ಳಲಾಗಿದೆ. ನೀತಿಯ ಪ್ರಮುಖ ಅಂಶಗಳು ಹೀಗಿವೆ.

- ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಪಾರದರ್ಶಕವಾಗಿ ಬೆಲೆ ನಿಗಧಿಪಡಿಸಲು ಅನುಕೂಲವಾಗುವಂತೆ ವಿದ್ಯುನ್ಮಾನ ಹರಾಜು ಪದ್ಧತಿಯನ್ನು ಜಾರಿಗೆ ತರುವುದು.
- ರಾಜ್ಯದ ವಿವಿಧ ನಿಯಂತ್ರಿತ ಮಾರುಕಟ್ಟೆಗಳು ಹಾಗೂ ಗೋದಾಮುಗಳ ಜೋಡಣೆ ಮಾಡುವುದರ ಮೂಲಕ ಮಾರುಕಟ್ಟೆಗಳ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸುವುದು.
- ಕೃಷಿ ಉತ್ಪನ್ನಗಳ ಹರಾಜು ಪ್ರಕ್ರಿಯೆಯಲ್ಲಿ ಸ್ಪರ್ಧಾತ್ಮಕ ವಾತಾವರಣವನ್ನು ನಿರ್ಮಿಸುವುದು.
- ಕೃಷಿ ಉತ್ಪನ್ನಗಳ ಗುಣಮಟ್ಟ ನಿರ್ಧರಿಸಲು ಮಾನದಂಡ ರೂಪಿಸುವುದು ಹಾಗೂ ಉತ್ಪನ್ನದ ಗುಣ ಪರೀಕ್ಷೆ ಮಾಡುವುದಕ್ಕಾಗಿ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವುದು.



- ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸುವುದ್ದಾಗಿ ಗ್ರಾಮೀಣ ಹಂತದಲ್ಲಿ ಉತ್ಪನ್ನಗಳನ್ನು ಒಟ್ಟುಗೂಡಿಸಿ ಪ್ರಾಥಮಿಕ ಮೌಲ್ಯವರ್ಧನೆ ಮಾಡುವ ಸಲುವಾಗಿ ರೈತರ ಗುಂಪುಗಳನ್ನು ಪ್ರೋತ್ಸಾಹಿಸುವುದು.
- ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ನಿರ್ಧಾರ ಕೈಗೊಳ್ಳುವ ಪೂರ್ವದಲ್ಲಿಯೇ ಮಾರುಕಟ್ಟೆಗಳಲ್ಲಿ ಪ್ರಚಲಿತವಿರುವ ಬೆಲೆಯ ವಿವರಗಳನ್ನು ಪಡೆಯುವುದು.
- ರೈತರು ತಮ್ಮ ಉತ್ಪನ್ನಗಳ ಬೆಲೆಯನ್ನು ತಾವೇ ನಿರ್ಧರಿಸಲು ಅನುಕೂಲವಾಗುವಂತೆ ಅವಶ್ಯ ಮಾಹಿತಿ ಒದಗಿಸಲು ಹುಟ್ಟುವಳಿ ಮಾರಾಟದ ನಂತರ ಉತ್ಪನ್ನದ ಬೆಲೆಯನ್ನು ಆನ್‌ಲೈನ್ ಮೂಲಕ ಪಡೆಯಲು ಅವಕಾಶ ಕಲ್ಪಿಸುವುದು.

**ದೇಶಕ್ಕೇ ಮಾದರಿ:**

ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ವಿದ್ಯುನ್ಮಾನ ವೇದಿಕೆಯ ಮೂಲಕ ನೇರವಾಗಿ ಮಾರಾಟ ಮಾಡುವ ಮೂಲಕ ಹೆಚ್ಚಿನ ಬೆಲೆ ಪಡೆಯಬಹುದಾಗಿದ್ದು, ಇಡೀ ರಾಷ್ಟ್ರಕ್ಕೆ ಈಗ ಈ ವ್ಯವಸ್ಥೆ ಮಾದರಿಯಾಗಿದೆ.

ವಿದ್ಯುನ್ಮಾನ ವೇದಿಕೆಯ ಮೂಲಕ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ರಾಜ್ಯದ ವಿವಿಧ ಭಾಗಗಳಲ್ಲಿರುವ ವರ್ತಕರು ತಾವಿರುವ ಸ್ಥಳದಿಂದಲೇ ವಿದ್ಯುನ್ಮಾನ ವೇದಿಕೆಯಲ್ಲಿ ಉತ್ಪನ್ನಗಳಿಗೆ ಬೆಲೆ ನಮೂದಿಸಿ ಖರೀದಿಸಬಹುದು. ಮಾರಾಟಕ್ಕೆ ಮೊದಲು ಉತ್ಪನ್ನಗಳ ಗುಣಮಟ್ಟ ಪರೀಕ್ಷೆ ಮಾಡುವುದರಿಂದ ಗುಣಮಟ್ಟಕ್ಕೆ ತಕ್ಕಂತೆ ರೈತರಿಗೆ ನ್ಯಾಯಯುತ ಬೆಲೆ ದೊರೆಯುತ್ತದೆ.

ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳಿಂದ ರೈತರಿಗೆ ಆಗುವ ಅನ್ಯಾಯ ತಪ್ಪಿಸಲು ವಿದ್ಯುನ್ಮಾನ ವೇದಿಕೆಯ ಮೂಲಕ ಮಾರಾಟ ಮಾಡುವುದು ಅತ್ಯುತ್ತಮ ವಿಧಾನ. ಮಾರಾಟ ಕಾರ್ಯ ಪೂರ್ಣಗೊಂಡ 24 ಗಂಟೆಗಳ ಒಳಗಾಗಿ ರೈತರ ಬ್ಯಾಂಕ್ ಖಾತೆಗೇ ನೇರವಾಗಿ ಹಣ ಪಾವತಿ ಮಾಡಲಾಗುತ್ತದೆ. ತೂಕದಲ್ಲಿಯೂ ಯಾವುದೇ ರೀತಿಯ ಮೋಸಕ್ಕೆ ಅವಕಾಶ ಇರುವುದಿಲ್ಲ. ರಾಜ್ಯದ 103 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಆನ್‌ಲೈನ್ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲ 156 ಎ.ಪಿ.ಎಂ.ಸಿ.ಗಳ 80 ಸಾವಿರ ವರ್ತಕರು ಆನ್‌ಲೈನ್ ಖರೀದಿಯಲ್ಲಿ ಭಾಗವಹಿಸಬಹುದಾಗಿದೆ. ಇದರಿಂದ ಯಾವುದೇ ಭಾಗದ ರೈತರಿಗೆ ರಾಜ್ಯವ್ಯಾಪಿ ಬಿಡ್‌ನ ಅವಕಾಶ ದೊರೆತು ಹೆಚ್ಚಿನ ಬೆಲೆ ದೊರೆಯುತ್ತದೆ. ಯಾವುದೇ ಕಮಿಷನ್‌ಗಳ ಕಡಿತ ಇಲ್ಲದೆ ರೈತರ ಬ್ಯಾಂಕ್ ಖಾತೆಗೆ ಹಣ ಜಮಾ ಆಗುತ್ತದೆ.

ಆನ್‌ಲೈನ್ ವ್ಯವಹಾರದಿಂದ ಪಾರದರ್ಶಕತೆ ಹೆಚ್ಚುತ್ತದೆ ಹಾಗೂ ರೈತರಿಗೆ ನ್ಯಾಯಯುತ ಬೆಲೆ ದೊರೆಯುತ್ತದೆ. ಪ್ರಸ್ತುತ 14 ಲಕ್ಷ ರೈತರು ತಮ್ಮ ಉತ್ಪನ್ನಗಳನ್ನು ವಿದ್ಯುನ್ಮಾನ ವೇದಿಕೆಯ ಮೂಲಕ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕದ ಈ ವ್ಯವಸ್ಥೆ ದೇಶಕ್ಕೆ ಮಾದರಿಯಾಗಿದ್ದು, ಕೇಂದ್ರ ಸರಕಾರ ಸಹ ಈ ವ್ಯವಸ್ಥೆಯನ್ನು ಶ್ಲಾಘಿಸಿ, ತನ್ನ ನೀತಿಯಲ್ಲಿ ಅಳವಡಿಸಿಕೊಂಡಿದೆ. ಹುಬ್ಬಳ್ಳಿಯಲ್ಲಿ ಈ ಕುರಿತು ನಡೆದ ಸಮಾವೇಶದಲ್ಲಿ ವಿವಿಧ ರಾಜ್ಯಗಳ ಜನಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸಿ ತಮ್ಮ ರಾಜ್ಯದಲ್ಲಿಯೂ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಮುಂದೆ ಬಂದಿದ್ದಾರೆ.

ಉಗ್ರಾಣ ಆಧಾರಿತ ಮಾರುಕಟ್ಟೆ ವ್ಯವಸ್ಥೆಯನ್ನು ಸಹ ರೂಪಿಸಲಾಗಿದ್ದು, ರೈತರು ತಮ್ಮ ಉತ್ಪನ್ನಗಳನ್ನು ಉಗ್ರಾಣಗಳಲ್ಲಿ ಸಂಗ್ರಹಿಸುವುದೇ ಅಲ್ಲದೇ, ಅಲ್ಲಿಂದಲೇ ವಿದ್ಯುನ್ಮಾನ ವೇದಿಕೆ ಮೂಲಕ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕಗಳನ್ನು ಸಹ ಸ್ಥಾಪಿಸಲು ಕ್ರಮವಹಿಸಲಾಗಿದೆ.

ಯಾವುದೇ ಯೋಜನೆ ಸಫಲವಾಗಲು ಭಾಗೀದಾರ ಫಲಾನುಭವಿಗಳ ಭಾಗವಹಿಸುವಿಕೆ ಅತಿ ಮುಖ್ಯ. ರೈತರು ಸಹ ಆನ್‌ಲೈನ್ ಮಾರುಕಟ್ಟೆ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡು, ತಮ್ಮ ಬೆಳೆಗಳಿಗೆ ನ್ಯಾಯಯುತ ಬೆಲೆ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ krishimaratavahini.kar.nic.in ಸಂಪರ್ಕಿಸಬಹುದಾಗಿದೆ.





# ಕೃಷಿ ಉತ್ಪನ್ನಗಳ ಆನ್‌ಲೈನ್ ವಹಿವಾಟು

**ಆನ್‌ಲೈನ್ ವಹಿವಾಟಿನ ಮೂಲಕ ಕಳೆದ ಮೂರು ವರ್ಷದಲ್ಲಿ 1471227 ಕ್ವಿಂಟಲ್ ಹತ್ತಿ ಮತ್ತು ಗೋಧಿ ಉತ್ಪನ್ನಗಳ ವಹಿವಾಟು ನಡೆದಿದೆ. ಜಿಲ್ಲೆಯಲ್ಲಿ ಬೇರೆ ಬೇರೆ ಬೆಳೆಗಳು ಬೆಳೆಯುತ್ತಿದ್ದರೂ ಹತ್ತಿ ಮತ್ತು ಗೋಧಿ ಮಾತ್ರ ಆನ್‌ಲೈನ್ ಮೂಲಕ ಮಾರಾಟ ವ್ಯವಸ್ಥೆ ಚಾಲ್ತಿಯಲ್ಲಿದೆ.**

▪ ಡಾ. ರಂಗನಾಥ್ ಕುಳಗಟ್ಟೆ

**ನೂ**ತನ ಕೃಷಿ ಮಾರಾಟ ನೀತಿಯ ಅನುಸಾರ ವಿಜಯಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಆನ್‌ಲೈನ್ ವಹಿವಾಟು ಆರಂಭಗೊಂಡಿದೆ. 45 ಸಾವಿರ ರೈತರು ಈ ಆನ್‌ಲೈನ್ ವಹಿವಾಟಿನಲ್ಲಿ ಭಾಗವಹಿಸುತ್ತಿದ್ದಾರೆ.

ಆನ್‌ಲೈನ್ ವಹಿವಾಟಿನ ಮೂಲಕ ಕಳೆದ ಮೂರು ವರ್ಷದಲ್ಲಿ 1471227 ಕ್ವಿಂಟಲ್ ಹತ್ತಿ ಮತ್ತು ಗೋಧಿ ಉತ್ಪನ್ನಗಳ ವಹಿವಾಟು ನಡೆದಿದೆ. ಜಿಲ್ಲೆಯಲ್ಲಿ ಬೇರೆ ಬೇರೆ ಬೆಳೆಗಳು ಬೆಳೆಯುತ್ತಿದ್ದರೂ ಹತ್ತಿ ಮತ್ತು ಗೋಧಿ ಮಾತ್ರ ಆನ್‌ಲೈನ್ ಮೂಲಕ ಮಾರಾಟ ವ್ಯವಸ್ಥೆ ಚಾಲ್ತಿಯಲ್ಲಿದೆ.

ವರ್ಷವಾರು ವಿವರದಂತೆ 2014ನೇ ಸಾಲಿನಲ್ಲಿ 2.53,775 ಕ್ವಿಂಟಲ್, 2015ನೇ ಸಾಲಿನಲ್ಲಿ 8,43,988 ಕ್ವಿಂಟಲ್ ಹಾಗೂ 2016ನೇ ಸಾಲಿನಲ್ಲಿ 3,73,464 ಕ್ವಿಂಟಲ್ ಹತ್ತಿ ಮತ್ತು ಗೋವಿನ ಜೋಳ (ಮೆಕ್ಕೆಜೋಳ)ದ ವಹಿವಾಟು ಆನ್‌ಲೈನ್ ಮೂಲಕ ನಡೆಸಲಾಗಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಕಾರ್ಯದರ್ಶಿ ರಮೇಶ ಮಾಹಿತಿ ನೀಡುತ್ತಾರೆ.

ಉಗ್ರಾಣ ಆಧಾರಿತ ಮಾರಾಟ ವ್ಯವಸ್ಥೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರೈತರಿಗೆ ರಾಷ್ಟ್ರೀಯ ಗ್ರಾಮೀಣ ಕೃಷಿ ವಿಕಾಸ ಯೋಜನೆಯಡಿ ವಿಜಯಪುರದಲ್ಲಿ 1000 ಮೆಟ್ರಿಕ್ ಟನ್, 1300ಮೆಟ್ರಿಕ್ ಟನ್ ಹಾಗೂ 400 ಮೆಟ್ರಿಕ್ ಟನ್ ಸಾಮರ್ಥ್ಯದ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಉಪಮಾರುಕಟ್ಟೆ ಬಸವನಬಾಗೇವಾಡಿಯಲ್ಲಿ 1500 ಹಾಗೂ 400 ಮೆಟ್ರಿಕ್ ಟನ್ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಿ ರೈತರಿಗೆ ಉಗ್ರಾಣ ಆಧಾರಿತ ಮಾರಾಟ ವ್ಯವಸ್ಥೆಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ ದಾಸ್ತಾನು ಮಳಿಗೆಗಳನ್ನು ವಿಜಯಪುರ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ಇಂಡಿ, ಸಿಂದಗಿ ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಆನ್‌ಲೈನ್ ವ್ಯವಸ್ಥೆ ಜಾರಿಗೊಂಡಿಲ್ಲ.

ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಕುರಿತಂತೆ ಬಹುಪಾಲು ರೈತರು ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಆನ್‌ಲೈನ್ ವ್ಯವಸ್ಥೆಯಿಂದ ರೈತರಿಗೆ ಸಮಯದ ಉಳಿತಾಯ, ಬೆಳೆಗೆ ಸ್ಪರ್ಧಾತ್ಮಕ ಬೆಲೆ, ದಲ್ಲಾಳಿಗಳ ವಂಚನೆ ತಪ್ಪಿದೆ. ವಿಶೇಷವಾಗಿ ರೈತನ ಆಯ್ಕೆಗೆ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅವಕಾಶ ಸಿಕ್ಕಿದೆ. ಆದರೆ ಈಗಿನ ವ್ಯವಸ್ಥೆಯಲ್ಲಿ ಸೀಮಿತ ಖರೀದಿದಾರರು ಮಾತ್ರ ಭಾಗವಹಿಸುತ್ತಿದ್ದು, ರಾಜ್ಯದ ಬೇರೆ ಬೇರೆ ಪ್ರದೇಶದ ಖರೀದಿದಾರರು, ಅಂತರರಾಜ್ಯ ಮಟ್ಟದ ಖರೀದಿದಾರರು ಭಾಗವಹಿಸುವಂತಾಗಬೇಕು. ವಾಣಿಜ್ಯ ವಹಿವಾಟು ನಡೆಸುವ ಫ್ಲಿಫ್ ಕಾಟ್ ಆನ್‌ಲೈನ್ ಶಾಪಿಂಗ್ ಮಾದರಿಯಲ್ಲಿ ವಸ್ತುಗಳ ಶಾಂಪಲ್‌ಗಳನ್ನು ಚಿತ್ರಸಹಿತ ತೋರಿಸುವಂತೆ ಕೃಷಿ ಉತ್ಪನ್ನ ಆನ್‌ಲೈನ್ ವಹಿವಾಟಿನಲ್ಲಿ ರೈತರ ಉತ್ಪನ್ನಗಳ ಮಾದರಿಯನ್ನು ಚಿತ್ರಸಹಿತ ತೋರಿಸುವ ವ್ಯವಸ್ಥೆಯಾದರೆ ಹೆಚ್ಚು ಅನುಕೂಲಕರ ಎಂಬುದ ಇಲ್ಲಿನ ರೈತರ ಸಾರ್ವತ್ರಿಕ ಅಭಿಪ್ರಾಯವಾಗಿದೆ.

ವಿಜಯಪುರ ತಾಲೂಕಿನ ಸವನಳ್ಳಿ ಗ್ರಾಮದ 41 ವರ್ಷ ವಯೋಮಾನದ ಸಿದ್ದು ಬಗಲಿ ಎಂಬ ರೈತ 11 ಎಕರೆ ಒಣ ಬೇಸಾಯ, 3 ಎಕರೆ ನೀರಾವರಿಯಲ್ಲಿ ಕೃಷಿ ಮಾಡುತ್ತಿದ್ದು, ಹತ್ತಿ, ಉಳ್ಳಾಗಡ್ಡಿ, ಕಡಲೆ, ತೊಗರಿ ಇತರೆ ಬೆಳಗಳನ್ನು ಬೆಳೆಯುತ್ತಾನೆ. ವಾರ್ಷಿಕವಾಗಿ ಐದಾರು ಲಕ್ಷ ರೂ.ಗಳ ಕೃಷಿ ಉತ್ಪನ್ನಗಳನ್ನು ಬೆಳೆಯುವ ಈತ ಹತ್ತಿಯನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುತ್ತಿದ್ದಾನೆ.

ಆನ್‌ಲೈನ್ ವ್ಯವಸ್ಥೆಯಿಂದ ಫಟಾಪಟ್ ಬೆಲೆ ನಿಗದಿಯಾಗುತ್ತದೆ. ನನ್ನ ಮಾಲಿಗೆ ಖರೀದಿದಾರ ನೀಡಿದ ಬೆಲೆ ಸರಿಯಾಗಿ ಅನಿಸಿದರೆ ಮಾತ್ರ ಮಾರಾಟ ಮಾಡುತ್ತೇನೆ. ಇಲ್ಲವಾದರೆ ತಿರಸ್ಕರಿಸಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲೇ ನನ್ನ ಮಾಲನ್ನು ಬಿಟ್ಟು ಹೋಗಿರುವ ಸಂದರ್ಭಗಳು ನಡೆದಿವೆ. ಮಾರುಕಟ್ಟೆಗೆ ಮಾಲು ತಂದ 10–15 ನಿಮಿಷದಲ್ಲಿ ಮಾರಾಟವಾಗಿ ತಕ್ಷಣವೇ ಹಣ ನಮ್ಮ ಕೈ ಸೇರುತ್ತದೆ. ಇದರಿಂದ ನಮ್ಮ ಸಮಯ ಉಳಿತಾಯವಾಗಿದೆ ಎಂದು ರೈತ ಸಿದ್ದು ಬಗಲಿಯ ಅಭಿಪ್ರಾಯ.


ಆನ್‌ಲೈನ್ ವ್ಯವಸ್ಥೆಯ ಪೂರ್ವದಲ್ಲಿ ದಲ್ಲಾಳಿಗಳಿಗೆ ಕಮೀಷನ್ ಕೊಡಬೇಕಾಗಿತ್ತು. ಅವರು ಹೇಳಿದ ದರಕ್ಕೆ ನಾವು ಅನಿವಾರ್ಯವಾಗಿ ಮಾರಾಟ ಮಾಡಬೇಕಾಗಿತ್ತು. ಮಾರಾಟವಾದ ಮೇಲೂ ಹಣ ಸಿಗಬೇಕಾದರೆ, ವಾರ, ತಿಂಗಳುಗಟ್ಟಲೇ ಕಾಯಬೇಕಾಗುತ್ತಿತ್ತು. ಈ ಎಲ್ಲ ವ್ಯವಸ್ಥೆಯಿಂದ ನಮಗೆ ಮುಕ್ತಿ ದೊರಕಿದೆ. ಆನ್‌ಲೈನ್ ವ್ಯವಸ್ಥೆ ಫಟಾಪಟ ವ್ಯವಹಾರಕ್ಕೆ ಕಾರಣವಾಗಿದೆ ಎಂದು ಹೇಳುತ್ತಾನೆ.

ಬಾಗೇವಾಡಿ ತಾಲೂಕಿನ ಭೈರೋಡಗಿ ಗ್ರಾಮದ ಭೀಮರಾಯ ಶಿವಪ್ಪ ನಾಗೂರ 6 ಎಕರೆ ಜಮೀನಿನಲ್ಲಿ ಕೃಷಿ ಕಾಯಕವನ್ನು ನಡೆಸುತ್ತಾ ಬಂದಿದ್ದಾನೆ. ಹತ್ತಿ, ಜೋಳ, ಗೋದಿ, ಕಡಲೆ ಬೆಳೆಗಾರರಾದ ಇವನು ವಾರ್ಷಿಕವಾಗಿ 3 ರಿಂದ 4 ಲಕ್ಷ ರೂ. ಮೌಲ್ಯದ ಕೃಷಿ ಉತ್ಪನ್ನಗಳನ್ನ ಬೆಳೆಯುತ್ತಾನೆ. ಕಳೆದ ಮೂರು ವರ್ಷದಲ್ಲಿ ಆನ್ ಲೈನ್ ವಹಿವಾಟಿನ ಮೂಲಕ ತಾನು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಆನ್‌ಲೈನ್ ವ್ಯವಸ್ಥೆ ಕುರಿತಂತೆ ಮಾತಿಗೆಳೆದರೆ, ಛಲೋ ಐತ್ರಿ ಸಾಹೇಬ್ರ, ಅಡತಿ (ದಲ್ಲಾಳಿಗಳು) ಅಂಗಡಿಯಿಂದ ತಮಗೆ ಭಾಳ ಮೋಸ ಅಗ್ತಿತ್ತು. ಬೆಲೆನೆ ಗೊತ್ತಾಗತ್ರಿರಲಿಲ್ಲ. ಈಗ ಹಂಗಿಲ್ಲ ನೋಡ್ರಿ, ನಮ್ಮ ಬೆಳೆ, ನಮ್ಮ ಇಚ್ಛೆ, ನಮ್ಮ ಛಲೋ ಅನಿಸಿದ್ರ, ಮಾರಾಟ ಮಾಡ್ರಿವಿ, ಇಲ್ಲಂದ್ರ, ಕೊಡಾಂಗಿಲ್ಲ. ನಮ್ಮ ಇಷ ದಂತೆ ಛಲೋ ಬೆಲೆ ಸಿಕ್ರೆ ಮಾರಾಟ ಮಾಡ್ತಿವಿ. ಮಾರಾಟ ಮಾಡಿದ ತಕ್ಷಣ ನಮಗೆ ರೊಕ್ಕಾ ಸಿಕತ್ತೈತಿ. ಆದ್ರೂ ಈ ವ್ಯವಸ್ಥೆ ಇನ್ನೂ ಸುಧಾರಿಸಬೇಕ್ರಿ, ಬೇರೆ ಬೇರೆ ಕಡೆಯಿಂದ ಖರೀದಿದಾರರು ಬರಬೇಕು. ಈಗ ಲೋಕಲ್ ಅಡತಿದಾರರೇ ಖರೀದಿ ಮಾಡ್ತಾರ್, ಇದು ತಪ್ಪಸಬೇಕಂದ್ರ ಬೇರೆ ಬೇರೆ ಕಡೆಯಿಂದ ಮಾಲ್ ತಗೋಳೋರು ಬಂದ್ರೆ ಇನ್ನೂ ಛಲೋ ರೇಟ್ ಸಕತ್ತೈತ್ರಿ. ಈ ವ್ಯವಸ್ಥೆ ಸರ್ಕಾರದವ್ರು ಮಾಡಬೇಕ ನೋಡ್ರಿ. ಎಂದು ಹೇಳ್ತಾರೆ ರೈತ ಭೀಮರಾಯ ನಾಗೂರ.

# ನೀರು ನೆಮ್ಮದಿ ಕಂಡ ಕೃಷಿಕರ ಗೆಲುವು...

ಚಿತ್ರಲೇಖನ:

▪ ಶೈಲಜಾ ಬೆಳ್ಳಂಕಿಮಠ



**ಕಾ**ಲುವೆ, ಕೆರೆ, ಕೊಳವೆ ಬಾವಿ ಅನುಕೂಲಗಳು ನಮಗಿಲ್ಲ. 'ಮಳೆ ಬಂದರ ಬೆಳೆ ಇಲ್ಲಂದರ ಹೊಟ್ಟೆಗೆ ತಣ್ಣೀರ ಬಟ್ಟೆ.' ಕರಿ ಎರೆ ಮಣ್ಣಾದರೂ, 1 ರಿಂದ 2 ಬಾರಿ ನೀರು ಸಿಕ್ಕರೆ ಹೊನ್ನು ಬೆಳೆಯೋ ಜಮೀನು ನಮ್ಮವು. ಈ ವರ್ಷ ಮುಂಗಾರಿನಲ್ಲಿ ಮಳೆ ಇಲ್ಲ, ಹಿಂಗಾರಿನಲ್ಲಿ ಅತೀ ಕಡಿಮೆ ಮಳೆ!! ಕಳೆದ ವರ್ಷ ಜಾರಿಯಾದ 'ಕೃಷಿ ಭಾಗ್ಯ' ನಮ್ಮ ಭಾಗ್ಯದ ಬಾಗಿಲು ತಗದೇತಿ. ಅನುಮಾನಿಸುತ್ತ ಮಾಡಿದ ಕೃಷಿ ಹೊಂಡ ಈ ವರ್ಷ ನಮಗ ಅನ್ನದ ದಾರಿ ತೋರಿಸೇತಿ. ಹೊಟ್ಟೆ ಹಿಟ್ಟು ಅರಸಿ ಪಟ್ಟಣಕ್ಕ ಹೋಗದಂಗ ತಡೆದೇತಿ. ಮುಂಗಾರಿಗೆ ಹೆಸರ ತಗೊಂಡ, ಹಿಂಗಾರಿನಲ್ಲಿ ಹಾಕಿದ ಜೋಳ, ಗೋಧಿ, ಕಡಲಿ ಕೃಷಿ ಹೊಂಡದ ನೀರುಂಡು ಕಣ್ತುಂಬಿ ನಿಂತಾವ. ಮನದ ಇಂಗಿತ, ಉಮೇದಿನ ಮಾತು ಹತ್ತಿಕ್ಕದೇ ಕೃತಜ್ಞತೆ ಸೂಸುವ ಕಣ್ಣುಗಳಲ್ಲಿ ಗೆಲುವಿನ ಭಾವ ಹೊಮ್ಮುತ್ತಿತ್ತು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹಿರೆಉಳ್ಳಿಗೇರಿ, ಚಿಕ್ಕುಳ್ಳಿಗೇರಿ ಗ್ರಾಮದ ನೀಲಪ್ಪ ಸುಣಗಾರ, ಸತ್ಯೆಪ್ಪ ತುರಾಯಿ, ಗಂಗಪ್ಪ ಸುಣಗಾರ, ಶಂಭುಲಿಂಗ ಸವಟಗಿ, ಅರವಿಂದ ಪಾಟೀಲ, ಹನಮಂತ ದಳವಾಯಿ ಇವರ ಮಾತುಗಳಲ್ಲಿ.

ಮಳೆ ಆಶ್ರಿತ ರೈತರಿಗೆ ಖುಷ್ಕಿ ಜಮೀನುಗಳಲ್ಲಿ ಮಳೆ ನೀರಿನ ಸಂಗ್ರಹಣೆ ಮಾಡಿ ಸಂರಕ್ಷಿತ ನೀರಾವರಿ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ 'ಕೃಷಿ ಭಾಗ್ಯ' ಯೋಜನೆ ಅನುಷ್ಠಾನಗೊಳಿಸುತ್ತಿದೆ. ಮಣ್ಣು, ನೀರಿನ ಸಂರಕ್ಷಣೆಯೊಂದಿಗೆ ಕೃಷಿ ಉತ್ಪಾದಕತೆ ಹೆಚ್ಚಿಸಿ ರೈತರು, ಕೃಷಿ ಕಾರ್ಮಿಕರ ಆರ್ಥಿಕ ಜೀವನ ಮಟ್ಟ ಹೆಚ್ಚಿಸುವುದು ಯೋಜನೆ ಮುಖ್ಯ ಉದ್ದೇಶ. ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ಇಲಾಖೆಗಳ ಯೋಜನೆಗಳ ಒಟ್ಟುಗೂಡಿಸಿ 'ಕೃಷಿ ಭಾಗ್ಯ'ದಡಿ ರೈತರಿಗೆ ನೆರವು ಒದಗಿಸುತ್ತಿವೆ. ಕ್ಷೇತ್ರ, ಮಳೆ ನೀರಿನ







ಕಳೆದ ಸಾಲಿನಲ್ಲಿ ಹಿರೇಉಳ್ಳಿಗೇರಿ ಗ್ರಾಮಕ್ಕೆ ಭೇಟಿ ನೀಡಿದ್ದ ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ, ಕೃಷಿಹೊಂಡ ನಿರ್ಮಾಣ ಹಾಗೂ ಉಪಯುಕ್ತತೆ ಬಗ್ಗೆ ರೈತರೊಂದಿಗೆ ಮಾತುಕತೆ ನಡೆಸಿ, ಕ್ಷೇತ್ರದಲ್ಲಿ ವೀಕ್ಷಿಸಿದ್ದರು. ಸರ್ಕಾರದ ಕೃಷಿ ಚಿಂತನ ಸಭೆಯಲ್ಲಿ ರೈತರ ಅನಿಸಿಕೆಗಳಿಗೆ ಮಾನ್ಯತೆ ನೀಡುವ ಮೂಲಕ ಕೆಲವು ಪ್ರಮುಖ ಮಾರ್ಗಸೂಚಿ ಬದಲಾವಣೆಗೆ ಅನುಮೋದಿಸಿದರು. ಇಂಥ ಚಿಂತನೆ, ಬದಲಾವಣೆಗೆ ಕಾರಣೀಭೂತವಾದ ಈ ಗ್ರಾಮವನ್ನು ಮಾದರಿ 'ಕೃಷಿಭಾಗ್ಯ ಗ್ರಾಮ' ಮಾಡುವ ಸಂಕಲ್ಪ ನಮ್ಮದು. ಈ ದಿಶೆಯಲ್ಲಿ ಇಲಾಖೆ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದು, ನೀರ ನೆಮ್ಮದಿ ಕಾಣುವಲ್ಲಿ ರೈತರಿಗೆ ನೆರವಾಗಲಿದ್ದೇವೆ ಅನಿಸಿಕೆ ವ್ಯಕ್ತಪಡಿಸುತ್ತಾರೆ ಬೆಳಗಾವಿ ವಿಭಾಗದ ಉಪ ಕೃಷಿ ನಿರ್ದೇಶಕ ಶ್ರೀ ಎಚ್ ಡಿ ಕೊಳೇಕರ.

ಸಂಗ್ರಹಣೆಗನುಗುಣವಾಗಿ ವಿಭಿನ್ನ ಅಳತೆಯ ಕೃಷಿಹೊಂಡ ನಿರ್ಮಿಸಿಕೊಳ್ಳಲು ಇಲ್ಲಿ ಅವಕಾಶವಿದೆ. ಈ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 2014–15ನೇ ಸಾಲಿನಲ್ಲಿ ಅನುಷ್ಠಾನಗೊಂಡು ಈಗಾಗಲೇ ಇದರ ಪ್ರಯೋಜನ ಪಡೆಯುತ್ತಿರುವ ರೈತರ ಯಶಸ್ಸಿನ ಚಿತ್ರಣ ಇದು.

ಚಿಕ್ಕಉಳ್ಳಿಗೇರಿ ಗ್ರಾಮದ ಸತ್ಯೆಪ್ಪ ಫಕ್ಕಿರಪ್ಪ ತುರಾಯಿ ಏಳು ಎಕರೆ ಜಮೀನು ಹೊಂದಿದ್ದು, ಸಂಪೂರ್ಣ ಮಳೆ ಆಶ್ರಿತ. ಕೃಷಿ ಇಲಾಖೆ ನೆರವಿನಿಂದ 15*15*15 ಅಳತೆ ಕೃಷಿ ಹೊಂಡ ನಿರ್ಮಿಸಿಕೊಂಡಿದ್ದು, ಹಿಂಗಾರಿನಲ್ಲಿ ಸುರಿದ ಮಳೆ ನೀರು ಹೊಂಡದಲ್ಲಿ ಸಂಗ್ರಹಿಸಿದ್ದಾರೆ. ಎರಡು ಎಕರೆ ಜೋಳ, ಎರಡು ಎಕರೆ ಗೋಧಿ ಬಿತ್ತನೆ ಮಾಡಿ, 50ರಿಂದ 60ದಿನದ ಅವಧಿಯಲ್ಲಿ 1 ಬಾರಿ ಕೃಷಿಹೊಂಡದಿಂದ ಬೆಳೆಗೆ ತುಂತುರು ನೀರಾವರಿ ಒದಗಿಸಿದ್ದಾರೆ. ಬೆಳೆ ಕೊಯ್ಲಾಗಿದ್ದು ಎಕರೆಗೆ 10 ಚೀಲ ಜೋಳ, 4 ಚೀಲ ಗೋಧಿ ಸಿಕ್ಕಿದೆ.

ಮಳೆ ಆಶ್ರಿತ ಬೇಸಾಯದಲ್ಲಿ ಎಕರೆಗೆ ಒಂದು ಚೀಲ ಗೋಧಿ, 2 ಚೀಲ ಜೋಳ ಸಿಕ್ಕರೆ ಪುಣ್ಯ! ಸಧ್ಯ ಎರಡು ಬಾರಿ ಕೃಷಿಹೊಂಡದ ನೀರುಂಡ ಗೋಧಿ ತೆನೆ ದಳದಲ್ಲಿ 28 ರಿಂದ 30 ಕಾಳುಗಳಿದ್ದು, ನೀರು ಕಾಣದ ಗೋಧಿಯಲ್ಲಿ ಕೇವಲ 6–8 ಕಾಳುಗಳಿವೆ. ಜೋಳ ಸದೃಢವಾಗಿ ಬೆಳೆದಿದ್ದು ಎಕರೆಗೆ 8 ಕ್ವಿಂಟಾಲ್. ಹಾಗೂ 4 ಕ್ವಿಂಟಾಲ್ ಗೋಧಿ ಇಳುವರಿ ಸಿಕ್ಕಿದ್ದು, ಇದು ಸಾಧ್ಯವಾದದ್ದು ಕೃಷಿಹೊಂಡದ ಸಂಗ್ರಹಿತ ನೀರಿನಿಂದ ಎನ್ನುವ ಅಭಿಮಾನದ ಮಾತು ಶಂಭುಲಿಂಗ ಗದಿಗೆಪ್ಪ ಸವಟಗಿ ಇವರದು.

'ಮಳಿ ಬರದೆ, ಬೆಳಿ ಒಣಗಿದರ ಕೂಲಿ, ಕಾಳು ಹುಡಿಕ್ಕೊಂತ ಎಲ್ಲೋ ಹೋಗಿ ದುಡಿದು ಮನಸಾ ಬದಕಬಹುದು. ಆದರ ದನ–ಕರ?? ಮೇವು, ನೀರು ಇಲ್ಲದ್ದಕ್ಕ ಮಾರಾಟ ಮಾಡದೆ ಬೇರೆ ದಾರೀನ ಇಲ್ಲ!' ಬರಗಾಲ ದಿನಗಳನು ನೆನೆಯುತ್ತಾರೆ ನೀಲಪ್ಪ ಸುಣಗಾರ. ಈ ವರ್ಷ ಬಿದ್ದ ಮಳೆ ಅತೀ ಕಡಿಮಿ ಆದರೂ ಅರ್ಧ ಎಕರೆಕ್ಕ ಕೆರೆ ನೀರ (ಕೃಷಿ ಹೊಂಡ) ಬಳಸಿ ರೂ. 19000/ ಉಳ್ಳಾಗಡ್ಡಿ ಲಾಭ ಪಡದೇನಿ. ಈಗ ಜೋಳ, ಗೋಧಿ ಕೊಯ್ಲಿಗೆ ಬಂದಾವ. ದನ ಕರುಗಳಿಗೆ ಕಣಿಕೆ (ಮೇವು) ಆಯಿತು. ಒಣ ಬೇಸಾಯದ ಮೂರು ಪಟ್ಟ ಇಳುವರಿ ಹೆಚ್ಚ ಆಗೇತಿ ಎನ್ನುವ ನಿಲುವು ಇವರದು. ಮಳೆ ನೀರಿನ ಸಮರ್ಪಕ ಬಳಕೆ ಮಾಡಿಕೊಂಡ ಬಗ್ಗೆ ತೃಪ್ತಿ. ಯೋಜನೆ ಬಗ್ಗೆ ಮೆಚ್ಚುಗೆ.





ಕೃಷಿಯಲ್ಲಿ ಮಣ್ಣು, ಬೀಜ, ಗೊಬ್ಬರದಷ್ಟೆ ಮುಖ್ಯವಾದುದು ನೀರು. ಮಳೆ ಆಶ್ರಿತ ಬೇಸಾಯದಲ್ಲಿ ಹಂಗಾಮಿನಲ್ಲಿ ಬೀಳುವ ಮಳೆ ನೀರು ಸಂಗ್ರಹಿಸಿ ಮಳೆ ಹೋದಾಗ ಬೆಳೆ ಸಂದಿಗ್ದ ಹಂತದಲ್ಲಿ ಸಂರಕ್ಷಿತ ನೀರಾವರಿ ಒದಗಿಸಿ, ಉತ್ತಮ ಆಶಾದಾಯಕ ಇಳುವರಿ ಪಡೆಯುವುದು ಕೃಷಿಹೊಂಡ ನಿರ್ಮಾಣದ ಮುಖ್ಯ ಉದ್ದೇಶ. ಬಿತ್ತುವಾಗ ಮಳೆ ಆಗಿ ಬೆಳೆಗೆ ಅವಶ್ಯವಿದ್ದಾಗ ಇಲ್ಲವಾದರೆ ರೈತ ಕೈಚೆಲ್ಲಿ ಹತಾಶನಾಗುವ ಸನ್ನಿವೇಶ ನಿರ್ಮಾಣವಾಗುತ್ತದೆ. ಒಂದು ನೀರಾದರೂ ಕೃಷಿ ಹೊಂಡದಿಂದ ಸಿಕ್ಕರೆ ಬೆಳೆ ಚೇತರಿಸಿ ಉತ್ತಮ ಇಳುವರಿ ನಿರೀಕ್ಷೆ ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ರೈತರು ಅದರ ಪ್ರಯೋಜನ ಪಡೆಯಲು ಮುಂದೆ ಬರುತ್ತಿದ್ದಾರೆ. ಕೃಷಿ ಭಾಗ್ಯ ಯೋಜನೆಯಡಿ ಕೃಷಿಹೊಂಡ ನಿರ್ಮಿಸಿಕೊಂಡ ರೈತರಿಗೆ 5ಎಚ್.ಪಿ.ಡಿಸೆಲ್ ಪಂಪಸೆಟ್, ಪಾಲಿಥಿನ್ ಶೀಟ್ ಹಾಗೂ ಸ್ಪ್ರಿಂಕಲರ್ ಸೆಟ್ ರಿಯಾಯತಿ ದರದಲ್ಲಿ ನೀಡಲಾಗುತ್ತಿದೆ. ಹಸಿರುಮನೆ ನಿರ್ಮಾಣಕ್ಕೂ ಸಹಾಯಧನ ಒದಗಿಸಲಾಗುತ್ತಿದೆ ಎನ್ನುತ್ತಾರೆ ಸವದತ್ತಿ ಸಹಾಯಕ ಕೃಷಿ ನಿರ್ದೇಶಕ ಶ್ರೀ ಎಲ್ ಎಮ್ ಹೊಸಮನಿ.

ಸಾಲಾ ಮಾಡಿ ಬೀಜ–ಗೊಬ್ಬರ ತಂದು ಮಣ್ಣಿಗೆ ಹಾಕಿ ಮಳಕಿ ಬಂದ ಮ್ಯಾಲೆ ಮಳಿ ಹೋದರ ನಮ್ಮದು ಅಸಹಾಯಕ ಪರಿಸ್ಥಿತಿ! ಮಳೆ ದಾರಿ ಕಾಯುತ್ತ ಸೋಲು. ಕಣ್ಮುಂದಿನ ಚಿಗುರು




# ಸಾವಿನಲ್ಲೂ ಸಾರ್ಥಕತೆ ಮೆರೆದ 'ಹರೀಶ್' ಯೋಜನೆಗೆ ಚಾಲನೆ

▪ *ಕೆ. ಚೇತನ್*

ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಜೀವ ಉಳಿಸಲು ಹಣ ಇಲ್ಲ ಎಂಬುವುದು ಅಡ್ಡಿ ಆಗಬಾರದು. ಬಡವ–ಬಲ್ಲಿದ ಯಾರೇ ಇರಲಿ ಅಪಘಾತದಂತಹ ತುರ್ತು, ಅಮೂಲ್ಯ ಘಳಿಗೆಯಲ್ಲಿ ಸೂಕ್ತ ಚಿಕಿತ್ಸೆ ದೊರಕಿಸಿ ಜೀವ ಉಳಿಸಬೇಕು. ಇಂತಹದೊಂದು ಜೀವಪರ ಕಾಳಜಿಯುಳ್ಳ, ದೇಶದಲ್ಲಿಯೇ ಮೊದಲು ಎನ್ನಬಹುದಾದ ಮಹತ್ವಾಕಾಂಕ್ಷೆಯ 'ಹರೀಶ್ ಯೋಜನೆ'ಯನ್ನು ರಾಜ್ಯ ಸರ್ಕಾರ ಲೋಕಾರ್ಪಣೆ ಮಾಡಿದೆ. ರಸ್ತೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿ/ ಗಾಯಾಳುಗಳಿಗೆ ಮೊದಲ 48 ಗಂಟೆಗಳ ಅವಧಿಯಲ್ಲಿ ಗರಿಷ್ಠ 25 ಸಾವಿರ ರೂ.ಗಳ (ನಗದು ರಹಿತ) ಉಚಿತ ಚಿಕಿತ್ಸೆ ದೊರಕಿಸುವ ಯೋಜನೆಗೆ ಚಾಲನೆ ನೀಡುವ ಮೂಲಕ ಸರ್ಕಾರ, ಸಾರ್ವಜನಿಕರ ಬಗೆಗಿನ ಆರೋಗ್ಯ ಕಾಳಜಿಯ ಬದ್ಧತೆಯನ್ನು ಪ್ರದರ್ಶಿಸಿದೆ.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾ. 8ರಂದು ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು 'ಮಾನವೀಯ ಆಶಯ'ವುಳ್ಳ ಮಹತ್ವದ ಈ ಯೋಜನೆಗೆ ವಿಧ್ಯುಕ್ತ ಚಾಲನೆ ನೀಡಿದರು.

2014–15ರ ಆಯವ್ಯಯದಲ್ಲಿ "ವ್ಯಕ್ತಿಯು ರಸ್ತೆ ಅಪಘಾತಕ್ಕೊಳಗಾದಲ್ಲಿ ಅಪಘಾತದ ಅತ್ಯಮೂಲ್ಯ ಘಳಿಗೆಯಲ್ಲಿ ಸರ್ಕಾರದಿಂದ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಾಗಿ ಸೇರಿಸಲಾದ ವ್ಯಕ್ತಿಗೆ ಮುಖ್ಯಮಂತ್ರಿಗಳ 'ಸಾಂತ್ವನ' ಯೋಜನೆಯಡಿಯಲ್ಲಿ 25 ಸಾವಿರ ರೂ.ಗಳ ಪರಿಹಾರ ಧನವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ನೀಡಲಾಗುವುದು" ಎಂದು ಪ್ರಸ್ತಾಪಿಸಲಾಗಿತ್ತಾದರೂ, ತಾಂತ್ರಿಕ ಕಾರಣಗಳಿಂದ ಯೋಜನೆ ಜಾರಿ ವಿಳಂಬವಾಗಿತ್ತು.

ಯೋಜನೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮುಖ್ಯಮಂತ್ರಿ 'ಸಾಂತ್ವನ' ಯೋಜನೆಯನ್ನು 'ಹರೀಶ್ ಸಾಂತ್ವನ' ಯೋಜನೆಯೆಂದು ಮರುನಾಮಕರಣ ಮಾಡಿ, ಸಾಧ್ಯವಾದರೇ ಇನ್ನಷ್ಟು ಒಳ್ಳೆಯ ಶಬ್ದಗಳನ್ನು ಸೇರಿಸಿ ಎಂದು ಸಲಹೆ ನೀಡಿದರು. ಅವಘಡಗಳು ಘಟಿಸಿದ ಮೊದಲ ಒಂದು ತಾಸಿನ ಅವಧಿಯಲ್ಲಿ ಸಂತ್ರಸ್ತರಿಗೆ ಪರಿಣಾಮಕಾರಿ ಹಾಗೂ ಸೂಕ್ತ ಚಿಕಿತ್ಸೆ ದೊರಕಿಸಿದರೆ ಜೀವ ಉಳಿಸಲು ಸಾಧ್ಯವಿದೆ. ರಸ್ತೆ ಅಪಘಾತಗಳಲ್ಲಿ ಯುವಜನರು/ ಉದ್ಯೋಗಸ್ಥರೇ ಹೆಚ್ಚಿನ ಸಂಖ್ಯೆಯಲ್ಲಿ ಸಾವಿಗೀಡಾಗುತ್ತಿದ್ದಾರೆ. ಇದರ ಜೊತೆಗೆ ಅಪಘಾತಗಳಲ್ಲಿ ಗಾಯಗೊಂಡವರಿಗೆ ಸಾರ್ವಜನಿಕರು, ಸಮಾಜ ನೆರವು ನೀಡುವ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಕಳಕಳಿ ವ್ಯಕ್ತಪಡಿಸಿದರು.

ಹರೀಶ್ ತಾಯಿ ಗೀತಾ ಅವರು ಮಾತನಾಡಿ, ರಸ್ತೆ ಅಪಘಾತ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಸಿಗದೇ ಯಾರೂ ಜೀವ ಕಳೆದುಕೊಳ್ಳಬಾರದು. ನನ್ನ ಮಗನಿಗೆ, ತಮಗೆ ಬಂದಂತಹ ಕಷ್ಟ ಬೇರ‍್ಯಾರಿಗೂ ಬೇಡ. ರಸ್ತೆ ಅಪಘಾತದ ಸಂತ್ರಸ್ತರಿಗೆ ತುರ್ತು ಚಿಕಿತ್ಸೆ ದೊರಕಿಸುವ ಮಹತ್ವದ ಯೋಜನೆಗೆ ನನ್ನ ಮಗನ ಹೆಸರನ್ನಿಟ್ಟಿರುವುದಕ್ಕೆ ಸರ್ಕಾರಕ್ಕೆ ಧನ್ಯವಾದ ಎಂದು ಹೇಳಿದರು.

'ಬೈಕ್ ಆಂಬ್ಯುಲೆನ್ಸ್ ಸೇವೆ ನಂತರ ಈ ಯೋಜನೆ ಜಾರಿಗೆ ತರಲಾಗಿದೆ. ಗಾಯಾಳು–ಆಸ್ಪತ್ರೆಗಳ ನೋಂದಣಿ, ವಿಮೆ ಕ್ಲೈಮು ಸಲ್ಲಿಕೆ ಸೇರಿ ಎಲ್ಲಾ ಕಾರ್ಯವೂ ಆನ್‌ಲೈನ್ ಮೂಲಕ ತ್ವರಿತವಾಗಿ ನಡೆಯಲಿವೆ. ಇದಕ್ಕಾಗಿ ಮೂರು ಹಂತದ ಆಸ್ಪತ್ರೆಗಳನ್ನು ಗುರುತಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್ ತಿಳಿಸಿದರು.

ಗೃಹ ಸಚಿವ ಡಾ.ಜಿ. ಪರಮೇಶ್ವರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮೀನಾರಾಯಣ, ಆಯುಕ್ತ ಪಿ.ಎಸ್. ವಸ್ತ್ರದ್, ಖ್ಯಾತ ಹೃದ್ರೋಗ ತಜ್ಞ ಡಾ. ದೇವಿಶೆಟ್ಟಿ ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ತುರ್ತು ನೆರವು:**

ಸಾರ್ವಜನಿಕರು ಗಾಯಾಳುಗಳ ನೆರವಿಗಾಗಿ 104 ಮತ್ತು 108 ಸಹಾಯವಾಣಿ ಬಳಸಬಹುದು. ಸರ್ಕಾರಿ ಆಂಬ್ಯುಲೆನ್ಸ್ 108 ವಾಹನಗಳ ಮೂಲಕ ಸಂತ್ರಸ್ತರಿಗೆ ತುರ್ತು ನೆರವು ಒದಗಿಸಬಹುದು. ಈ ವಾಹನವು ವೈದ್ಯಕೀಯ ಸಹಾಯಕರು, ಪ್ರಥಮ ಚಿಕಿತ್ಸೆ ಉಪಕರಣಗಳು, ಆಕ್ಸಿಜನ್ ಮತ್ತು ಔಷಧಗಳ ಲಭ್ಯತೆ... ಇತ್ಯಾದಿ ವ್ಯವಸ್ಥೆ ಹೊಂದಿರುತ್ತದೆ. ಅಪಘಾತ ಘಟಿಸಿದ ಸ್ಥಳದಲ್ಲೇ ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗೆ ಸಮೀಪದ ಆಸ್ಪತ್ರೆಗೆ ಸಂತ್ರಸ್ತರನ್ನು ಕರೆದೊಯ್ಯಲಾಗುತ್ತದೆ. ಸಂತ್ರಸ್ತರನ್ನು ಆಸ್ಪತ್ರೆಗೆ ಸೇರಿಸಲು ಖಾಸಗಿ ಆಂಬ್ಯುಲೆನ್ಸ್ ಅಥವಾ ಇನ್ನಾವುದೇ ರೀತಿಯ ಸಾರಿಗೆ ವ್ಯವಸ್ಥೆಯನ್ನು ಸಾರ್ವಜನಿಕರು ಪಡೆದುಕೊಂಡಲ್ಲಿ ಅದನ್ನು ಈ ಯೋಜನೆಯಡಿ ಸೇರ್ಪಡೆ ಮಾಡಲು ಸರ್ಕಾರ ನಿರ್ಧರಿಸಿದೆ.

**ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳು ಎಲ್ಲೆಲ್ಲಿ?:**

- ಎಲ್ಲಾ ಸರ್ಕಾರಿ ಆಸ್ಪತ್ರೆಗಳು (ಜಿಲ್ಲಾ/ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ
- ರಾಜ್ಯದಲ್ಲಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳು (ಸರ್ಕಾರಿ ಮತ್ತು ಖಾಸಗಿ)
- ತುರ್ತು ಮತ್ತು ತೀವ್ರ ನಿಗಾ ಘಟಕ ಹೊಂದಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳು
- ಮಾನ್ಯತೆ ಪಡೆದ ಎಲ್ಲಾ ಆಸ್ಪತ್ರೆಗಳನ್ನು ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ (ಜಿಪಿಎಸ್) ಮ್ಯಾಪಿಂಗ್‌ನಲ್ಲಿ ಗುರುತಿಸುವ ವ್ಯವಸ್ಥೆ ಮಾಡಿದ್ದು, ಸಮೀಪ ಆಸ್ಪತ್ರೆಗಳನ್ನು ಸುಲಭವಾಗಿ ಪತ್ತೆ ಮಾಡಲು ನೆರವಾಗಲಿದೆ.

**ದೊರೆಯುವ ವೈದ್ಯಕೀಯ ಸೇವೆಗಳೇನು?:**

- ಐಸಿಯು ಆಧಾರಿತ ಚಿಕಿತ್ಸೆ
- ವಾರ್ಡ್ ಆಧಾರಿತ ಚಿಕಿತ್ಸೆ
- ಸುಟ್ಟಗಾಯ, ತಲೆಗೆ ಪೆಟ್ಟು, ಬೆನ್ನುಹುರಿಗೆ ಗಾಯ, ಫ್ರಾಕ್ಚರ್‌ಗೆ ಚಿಕಿತ್ಸೆ

### ಯೋಜನೆಗೆ ಹರೀಶ್ ಹೆಸರೇಕೆ..?

2016ರ ಫೆ. 16. ಬೆಂಗಳೂರಿನ ಹೊರವಲಯ ನೆಲಮಂಗಲ ಸಮೀಪ ಅತ್ಯಂತ ಭೀಕರ ಅಪಘಾತ ಸಂಭವಿಸಿತ್ತು. ಅತ್ಯಂತ ವೇಗವಾಗಿ ಬರುತ್ತಿದ್ದ ಲಾರಿಯೊಂದು ಬೈಕ್ ಸವಾರನಿಗೆ ಅಪ್ಪಳಿಸಿದ ಪರಿಣಾಮ ಘಟಿಸಿದ್ದ ಅಪಘಾತವದು. ಅಪಘಾತದ ರಭಸಕ್ಕೆ ಬೈಕ್ ಸವಾರ ರಸ್ತೆಗೆ ಉರುಳಿದ್ದ. ಆತನ ದೇಹ ಎರಡು ತುಂಡಾಗಿತ್ತು. ಜೀವನ್ಮರಣದ ಹೋರಾಟ ನಡೆಸುತ್ತಾ ಸಾವಿನ ಕದ ತಟ್ಟುತ್ತಿದ್ದರೂ, ಆ ಯುವಕ ನನ್ನ ಅಂಗಾಂಗಗಳನ್ನು ದಾನ ಮಾಡಲು ಸಹಾಯ ಮಾಡುವಂತೆ ಪದೇಪದೇ ಹೇಳುತ್ತಾ ಕೊನೆಯುಸಿರೆಳೆದ.

ಆತ ಹರೀಶ್. ತುಮಕೂರು ಮೂಲದ ಕಡು ಬಡಕುಟುಂಬವೊಂದರ ಯುವಕ. ಸಾವಿನಲ್ಲೂ ಸಾರ್ಥಕತೆ ಮೆರೆದು, ಮಾದರಿಯಾದ ಹರೀಶ್ ಹೆಸರನ್ನು ಹಸಿರಾಗಿಸಲು, ರಾಜ್ಯ ಸರ್ಕಾರ ಈ ಯೋಜನೆ ಜಾರಿ ತಂದಿದೆ. ರಸ್ತೆ ಅಪಘಾತದಲ್ಲಿನ ಗಾಯಾಳುಗಳಿಗೆ ಸಕಾಲದಲ್ಲಿ ಉಚಿತ ಚಿಕಿತ್ಸೆ ಒದಗಿಸುವುದು ಯೋಜನೆಯ ಗುರಿ.

### ಯೋಜನೆ ವಿಶೇಷತೆಗಳೇನು:

- ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿ
- ರಾಜ್ಯದ ಭೌಗೋಳಿಕ ವ್ಯಾಪ್ತಿಯಲ್ಲಿ ಘಟಿಸಿದ ಅಪಘಾತಗಳಲ್ಲಿನ ಸಂತ್ರಸ್ತರು ಸವಲತ್ತಿಗೆ ಅರ್ಹರು
- ಅಪಘಾತ ಸಂಭವಿಸಿದ ಮೊದಲ 48 ಗಂಟೆಗಳಲ್ಲಿ 25 ಸಾವಿರ ರೂ. ವರೆಗಿನ (ನಗದು ರಹಿತ) ಚಿಕಿತ್ಸೆ
- ಗುರುತಿಸಲ್ಪಟ್ಟ ಆಸ್ಪತ್ರೆಗಳ ಮೂಲಕ ಗುಣಮಟ್ಟದ ತುರ್ತು ಚಿಕಿತ್ಸೆ
- ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ
- ತಜ್ಞ ವೈದ್ಯರ ಸಮಿತಿ ಗುರುತಿಸಿರುವ 25 ಪ್ಯಾಕೇಜ್‌ಗಳಲ್ಲಿನ ಚಿಕಿತ್ಸೆಗಳಿಗೆ ಸೌಲಭ್ಯ ಅನ್ವಯ
- ಸಾರ್ವಜನಿಕರು ಸರ್ಕಾರಿ ಸಹಾಯವಾಣಿ 104 ಮತ್ತು 108 ಮೂಲಕ ಸಂತ್ರಸ್ತರಿಗೆ ತುರ್ತು ನೆರವು ಕಲ್ಪಿಸಬಹುದು
- ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸ್ವಾಯತ್ತ) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಡಿ ಯೋಜನೆ ಅನುಷ್ಠಾನ
- ಅಂತರ್ಜಾಲ ವಿಳಾಸ: www.mss.kar.nic.in

- ರಕ್ತ ನೀಡುವುದು
- ಅಲ್ಲದೆ, ತಜ್ಞ ವೈದ್ಯರ ಸಮಿತಿ ಗುರುತಿಸಿದಂತೆ 25 ಪ್ಯಾಕೇಜುಗಳಲ್ಲಿ ಕನಿಷ್ಠ ರೂ. 1000 ರಿಂದ ಗರಿಷ್ಠ ರೂ. 25 ಸಾವಿರ ವರೆಗಿನ ಚಿಕಿತ್ಸೆಗಳನ್ನು (ನಗದುರಹಿತ) ನೀಡಲಾಗುತ್ತದೆ.

**ಆಸ್ಪತ್ರೆಗಳ ವರ್ಗೀಕರಣ:**

ಆಸ್ಪತ್ರೆಗಳಲ್ಲಿನ ಮೂಲಸೌಕರ್ಯ, ಸಿಬ್ಬಂದಿ ಹಾಗೂ ಆಸ್ಪತ್ರೆಯಲ್ಲಿ ದೊರೆಯಬಹುದಾದ ವೈದ್ಯಕೀಯ ಚಿಕಿತ್ಸಾ ಸೌಲಭ್ಯವನ್ನು ಮಾನದಂಡವಾಗಿಟ್ಟುಕೊಂಡು 'ಗ್ರೇಡ್' ನೀಡುವ ಮೂಲಕ ಆಸ್ಪತ್ರೆಗಳನ್ನು ವರ್ಗೀಕರಿಸಲಾಗಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು (ಗ್ರೇಡ್ 1), ಪ್ರೈಮರಿ ಕೇರ್ ಹಾಸ್ಪಿಟಲ್‌ಗಳನ್ನು ಗೇಡ್ 2 ಮತ್ತು ಗ್ರೇಡ್ 3 ಎಂದು ಗುರುತಿಸಲಾಗಿದೆ.

**ಅನುಷ್ಠಾನ ನೆರವು ಸಂಸ್ಥೆಯೊಂದಿಗೆ ಒಪ್ಪಂದ:**

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ, ಯೋಜನೆಯ ಸಮರ್ಪಕ ಜಾರಿಗಾಗಿ ಸಂಸ್ಥೆಯೊಂದರ ಸೇವೆ ಪಡೆದುಕೊಳ್ಳಲು ಒಪ್ಪಂದ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆಸ್ಪತ್ರೆಗಳೊಂದಿಗೆ ತತ್‌ಕ್ಷಣ ಪ್ರತಿಕ್ರಿಯಿಸಲು ಹಾಗೂ ಕ್ಲೇಮು ಪ್ರಕರಣಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ನಿರ್ದಿಷ್ಟವಾದ ಅಂಕಿ–ಸಂಖ್ಯೆಗಳ ಮೂಲಕ ಆಸ್ಪತ್ರೆಗಳಿಗೆ ಎಸ್‌ಎಂಎಸ್ ಸಂದೇಶ ರವಾನಿಸಲು ಹಾಗೂ ಅಗತ್ಯ ಮಾನವ ಸಂಪನ್ಮೂಲದೊಂದಿಗೆ ಯೋಜನೆ ಅನುಷ್ಠಾನ ಮಾಡಲು ಅವಕಾಶ ನೀಡಲಾಗಿದೆ. ಗುರುತಿಸಲ್ಪಟ್ಟ ಆಸ್ಪತ್ರೆಗಳು ಅಪಘಾತಕ್ಕೀಡಾದ ವ್ಯಕ್ತಿಯ ವಿವರಗಳನ್ನು ಕಾಲ್ ಸೆಂಟರ್‌ಗೆ ಒದಗಿಸಲಿದೆ. ನಂತರ, ಕಾಲ್ ಸೆಂಟರ್‌ನಿಂದ ನಿರ್ದಿಷ್ಟ ಎಸ್‌ಎಂಎಸ್ ಸಂಖ್ಯೆಯನ್ನು ಪಡೆದು ಆ ಮೂಲಕ ಸಂತ್ರಸ್ತ ವ್ಯಕ್ತಿಗೆ ಸಂಬಂಧಿಸಿದ ಮುಂದಿನ ಎಲ್ಲಾ ಪ್ರಸ್ತಾವನೆಗಳನ್ನು ನಿರ್ವಹಿಸಲಾಗುತ್ತದೆ.

**ಕ್ಲೈಂಗಳ ಇತ್ಯರ್ಥ ಹೇಗೆ..?**

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಎಲ್ಲಾ ಕ್ಲೇಮುಗಳನ್ನು ಆರ್‌ಟಿಜಿಎಸ್ ಮೂಲಕವೇ ಪಾವತಿಸಲಾಗುತ್ತದೆ. ಸಂತ್ರಸ್ತ ವ್ಯಕ್ತಿಗೆ ಸಂಬಂಧಿಸಿದಂತೆ ಕಾಲ್‌ಸೆಂಟರ್‌ನಿಂದ ನೀಡಲಾಗುವ ನಿಗದಿತ ಸಂಖ್ಯೆಯನ್ನು ಆಸ್ಪತ್ರೆಗಳು ಅವಶ್ಯಕ ದಾಖಲಾತಿಗಳೊಂದಿಗೆ ಕ್ಲೈಂ ಪ್ರಕರಣಗಳ ಇತ್ಯರ್ಥಕ್ಕಾಗಿ ನಮೂದಿಸಬೇಕಿದೆ. ಕ್ಲೈಂ ಪ್ರಕರಣಗಳ ಇತ್ಯರ್ಥದ ವಿಧಾನವನ್ನು ಪ್ರತಿ 6 ತಿಂಗಳಿಗೆ ಪರಿಶೀಲನೆ ಮಾಡಬೇಕಿದೆ. ಕಾಲಕಾಲಕ್ಕೆ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡು ಕ್ಲೈಂ ಪ್ರಕರಣಗಳನ್ನು ನಿಖರ ಹಾಗೂ ತ್ವರಿತವಾಗಿ ಇತ್ಯರ್ಥ ಪಡಿಸಲಾಗುತ್ತದೆ. ರೂ. 5 ಸಾವಿರ ವರೆಗಿನ ಕ್ಲೇಮುಗಳನ್ನು ಟ್ರಸ್ಟ್ ಸ್ವಯಂ ಅನುಮೋದಿಸಲಿದೆ. ರೂ. 5,001 ರಿಂದ ರೂ. 15,000 ವರೆಗಿನ ಕ್ಲೈಂ ಪ್ರಸ್ತಾವನೆಗಳನ್ನು ಐಎಸ್‌ಎ ಸಂಸ್ಥೆಯು ಪರಿಶೀಲಿಸಿ ಅನುಮೋದಿಸಲಿದೆ. ರೂ. 15,000 ಮೀರಿದ ಕ್ಲೈಂ ಪ್ರಸ್ತಾವನೆಗಳನ್ನು ಐಎಸ್‌ಎ ಸಂಸ್ಥೆ ಪರಿಶೀಲಿಸಿ ಅನುಮೋದನೆಗೆ ಟ್ರಸ್ಟ್‌ಗೆ ಕಳುಹಿಸಿಕೊಡಲಿದೆ. ನಂತರ, ಟ್ರಸ್ಟ್ ಪರಿಶೀಲಿಸಿ ಹಣ ಬಿಡುಗಡೆ ಮಾಡಲಿದೆ.

**ಯೋಜನೆ ಉಸ್ತುವಾರಿ:**

ಈ ಯೋಜನೆ ಅನುಷ್ಠಾನದ ಉಸ್ತುವಾರಿಗಾಗಿ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಹಾಗೂ 6 ಸದಸ್ಯರು ಸೇರಿದಂತೆ ಒಟ್ಟು 8 ಮಂದಿಯನ್ನು ಒಳಗೊಂಡ ಸಮಿತಿ ರಚಿಸಲಾಗುತ್ತದೆ. ಸಮಿತಿ ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕಾರಕ್ಕೆ ಮಾಹಿತಿ ನೀಡಲಿದೆ.

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ಅಧ್ಯಕ್ಷರು), ಆಯುಕ್ತರು (ಸಾರಿಗೆ ಇಲಾಖೆ), ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಸಂಚಾರಿ ವಿಭಾಗ), ಕೆಆರ್‌ಡಿಸಿಎಲ್ (ವ್ಯವಸ್ಥಾಪಕ ನಿರ್ದೇಶಕರು), ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರತಿನಿಧಿ, 104 ಮತ್ತು 108 ಸಹಾಯವಾಣಿ ಪ್ರತಿನಿಧಿಗಳು, ಲೋಕೋಪಯೋಗಿ ಇಲಾಖೆ ಪ್ರತಿನಿಧಿಯನ್ನು ಒಳಗೊಂಡ 6 ಸದಸ್ಯರು ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ (ಕಾರ್ಯಕಾರಿ ನಿರ್ದೇಶಕರು) ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**ತಾಂತ್ರಿಕ ನೆರವು:**

ಆಸ್ಪತ್ರೆಗಳ ನೋಂದಣಿ ಪ್ರಕ್ರಿಯೆ ನಿರಂತರವಾಗಿದ್ದು, ನೋಂದಣಿ ಮತ್ತು ಕ್ಲೇಮುಗಳಿಗೆ ಅಂತರ್ಜಾಲ ತಾಣ www.mss.kar.nic.in ಕ್ಕೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 080–22536234/13, 09900060125, 07259073430, mail: sastitconsultant@gmail.com, itexsast@gmail.com ಸಂಪರ್ಕಿಸಬಹುದು.

**ರಸ್ತೆ ಅಪಘಾತ: ಪ್ರಮುಖ ಕಾರಣಗಳು**

- ಚಾಲಕರ ಉದಾಸೀನತೆ
- ಅಕ್ರಮಣಕಾರಿ ಚಾಲನೆ
- ರಸ್ತೆ ನಿಯಮಗಳು ಮತ್ತು ನಿಬಂಧನೆಗಳ ಉಲ್ಲಂಘನೆ
- ವಾಹನದ ತಾಂತ್ರಿಕ ದೋಷ
- ಅತಿವೇಗ, ತಪ್ಪು ರೀತಿಯಲ್ಲಿ ಚಾಲನೆ
- ಮದ್ಯ ಸೇವಿಸಿ ಚಾಲನೆ
- ಸೈಕ್ಲಿಸ್ಟ್ / ಪಾದಚಾರಿಗಳ ತಪ್ಪು
- ಹವಾಮಾನ ಪರಿಸ್ಥಿತಿ..... **ಇತ್ಯಾದಿ**

**ಯೋಜನೆ ಉದ್ದೇಶ:** ರಸ್ತೆ ಅಪಘಡಕ್ಕೆ ತುತ್ತಾದ ಗಾಯಾಳು/ಗಳಿಗೆ ತತ್‌ಕ್ಷಣ ವೈದ್ಯಕೀಯ ನೆರವು ಕಲ್ಪಿಸುವ ಮೂಲಕ ಗಾಯಾಳುವನ್ನು ಆಘಾತದಿಂದ ಹೊರತರುವುದು ಮತ್ತು ಜೀವ ರಕ್ಷಿಸುವುದು ಯೋಜನೆಯ ಪ್ರಮುಖ ಉದ್ದೇಶ. ಗಾಯಾಳು/ಗಳು ಬಡವ–ಬಲ್ಲಿದ ಅಥವಾ ಬೇರೆ ರಾಜ್ಯ/ ಬೇರೆ ದೇಶ ಎಂಬ ಬೇಧ/ನಿಯಮವಿಲ್ಲ. ಬದಲಾಗಿ ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಘಟಿಸಿದ ಅಪಘಡದಲ್ಲಿ ಸಂತ್ರಸ್ತರಾದವರಿಗೆ, ತಕ್ಷಣ ಸಮೀಪದ ಗುರುತಿಸಲ್ಪಟ್ಟ ಆಸ್ಪತ್ರೆಗೆ ಒಯ್ದು ತುರ್ತು ಚಿಕಿತ್ಸೆ ಮೂಲಕ ಜೀವ ರಕ್ಷಣೆ ಮಾಡುವುದು ಯೋಜನೆಯ ಜೀವಪರ ಕಾಳಜಿ.






## ಮೂರು ವರುಷ.. ನೂರಾರು ಹರುಷ...

ನುಡಿದರೇ...
ಮುತ್ತಿನ ಹಾರದಂತಿರಬೇಕು
ಮಾಣಿಕ್ಯದ ದೀಪ್ತಿಯಂತಿರಬೇಕು
ಸ್ಫಟಿಕದ ಸಲಾಕೆಯಂತಿರಬೇಕು
ಜನರೇ... ಮೆಚ್ಚಿ ಅಹುದಹುದೆನಬೇಕು
ಜಯಹೇ ಜಯಹೇ
ಜಯಹೇ ಜಯಹೇ

ಹರುಷ ಹರುಷ ಹರುಷ
ಜನರ ನಗುವೆ ಹರುಷ
ಸಿದ್ಧಹಸ್ತಕೀಗ
ಜಯದ ಮೂರು ವರುಷ
ಜಯಹೇ ಜಯಹೇ
ಜಯಹೇ ಜಯಹೇ

ನುಡಿದಂತೆ ನಡೆಯೋದೇ ಸಭ್ಯನಡೆ
ಅದೇ ಸಿದ್ಧ ನಡೆ
ಅದೇ ನಾಡ ನಡೇ...

## ಕರ್ನಾಟಕಕ್ಕೆ ಜೈನಧರ್ಮದ ವಾಸ್ತುಶಿಲ್ಪದ ಕೊಡುಗೆ

# ಸುಂದರ ಪ್ರಾಚೀನ ಬಸದಿಗಳು

ಚಿತ್ರಲೇಖನ:

▪ ಡಾ॥ ಎಸ್. ನಂಜುಂಡಸ್ವಾಮಿ

ಪಂಚಕೂಟ ಬಸದಿಯಲ್ಲಿರುವ ನೇಮಿನಾಥ ತೀರ್ಥಂಕರ ಮೂರ್ತಿ







ಚಂದ್ರಗುಪ್ತನ ಆಗಮನವನ್ನು ತಿಳಿಸುವ ಚಿಕಣಿಶಿಲ್ಪದ ಜಾಲಂಧ್ರ – ಚಂದ್ರಗುಪ್ತ ಬಸದಿ

ಜೈನಧರ್ಮವು ಕ್ರಿಸ್ತಪೂರ್ವ 300 ರ ಹೊತ್ತಿಗೆ ಕರ್ನಾಟಕಕ್ಕೆ ಕಾಲಿರಿಸಿತು. ಭದ್ರಬಾಹು ಮುನಿಗಳು ಉತ್ತರದೇಶದಲ್ಲಿ 12 ವರ್ಷ ಭೀಕರ ಕ್ಷಾಮ ಬರುವುದನ್ನು ಅರಿತು, ತಮ್ಮ ಶಿಷ್ಯರೊಡನೆ ದಕ್ಷಿಣದ ಕಡೆಗೆ ಹೊರಡುತ್ತಾರೆ. ಆಗ ಆಳ್ವಿಕೆ ನಡೆಸುತ್ತಿದ್ದ ಮೌರ್ಯವಂಶದ ಚಕ್ರವರ್ತಿ ಚಂದ್ರಗುಪ್ತ ಮೌರ್ಯನು(ಕ್ರಿ.ಪೂ.323–298) ಕೂಡಾ ಅವರಿಂದ ಜಿನದೀಕ್ಷೆಯನ್ನು ಪಡೆದು, ಅವರ ಜೊತೆಗೆ ಬರುತ್ತಾನೆ. ಭದ್ರಬಾಹುಭಟಾರರು, ಚಂದ್ರಗುಪ್ತ ಮತ್ತು ಋಷಿಸಮೂಹದೊಡನೆ, ದಕ್ಷಿಣದ ಕಳ್ಬಪ್ಪು (ಕಟವಪ್ರ ಶೈಲ) ಅಂದರೆ ಇಂದಿನ ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಬಂದು ನೆಲೆಸುತ್ತಾರೆ. ಕ್ರಿ.ಶ.600ರ ಶ್ರವಣಬೆಳಗೊಳದ ಶಾಸನದಲ್ಲಿ ಇದರ ಉಲ್ಲೇಖವಿದೆ. ಭದ್ರಬಾಹು ಮತ್ತು ಚಂದ್ರಗುಪ್ತರು ಇಲ್ಲಿ ಸಮಾಧಿಮರಣವನ್ನು ಹೊಂದಿದ ನಂತರ ಅನೇಕ ಜೈನಯತಿಗಳು ಇಲ್ಲಿಗೆ ಬಂದು ನೆಲೆಸಿ ಸಮಾಧಿಮರಣವನ್ನು ಹೊಂದಿದರು. ಈ ಯತಿಗಳ ಗುಣಾತಿಶಯಗಳನ್ನು ವರ್ಣಿಸುವ ಕ್ರಿ.ಶ .6–7ನೇ ಶತಮಾನಕ್ಕೆ ಸೇರಿದ ಅನೇಕ ಪ್ರಾಚೀನ ಕನ್ನಡ ಶಾಸನಗಳು ಚಿಕ್ಕಬೆಟ್ಟದ ಬಂಡೆಯ ಮೇಲಿವೆ. ಶ್ರವಣಬೆಳಗೊಳದಲ್ಲಿರುವ ಚಿಕ್ಕಬೆಟ್ಟಕ್ಕೆ ಚಂದ್ರಗಿರಿ ಎಂಬ ಹೆಸರಿದೆ. ಈ ಬಸದಿಗಳನ್ನೆಲ್ಲಾ ಸು. ಕ್ರಿ.ಶ.750–800ರ ಅವಧಿಯಲ್ಲಿ ರಚಿಸಲಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿರುವ ಹಳೆಯ ಬಸದಿಗಳು ಕ್ರಿ.ಶ.750–800ರ ಹೊತ್ತಿಗೆ ನಿರ್ಮಿತವಾದವು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಕರ್ನಾಟಕಕ್ಕೆ ಜೈನಧರ್ಮದ ಕೊಡುಗೆಗಳಲ್ಲಿ ಸುಂದರವಾದ ಬಸದಿಗಳು ಮತ್ತು ಅಷ್ಟೇ ಸುಂದರವಾದ ಶಾಂತಮುಖಮುದ್ರೆಯ ತೀರ್ಥಂಕರರ ವಿಗ್ರಹಗಳ ನಿರ್ಮಾಣವೂ ಪ್ರಮುಖವಾದುದು. ಇದರಿಂದ ನಮ್ಮ ಕರ್ನಾಟಕದ ವಾಸ್ತುರಚನೆಗಳಿಗೆ ಹೊಸರೂಪವು ಪ್ರಾಪ್ತವಾಯಿತು. ತೀರ್ಥಂಕರರ ವಿಗ್ರಹಗಳಿದ್ದ ಜೈನ ದೇವಾಲಯಗಳಲ್ಲಿ ಜಿನಮುನಿಗಳು ವಾಸಿಸುತ್ತಿದ್ದ ಕಾರಣ ಇವುಗಳಿಗೆ ಬಸದಿ(ವಸತಿ) ಎಂಬ ಹೆಸರು ಬಂದಿತು. ಕದಂಬರ ದೊರೆ ಮೃಗೇಶವರ್ಮನು ಪಲಾಶಿಕಾ ನಗರದಲ್ಲಿ



ಶಾಂತಿನಾಥನ ಬಸದಿಯಲ್ಲಿರುವ ನೇಮಿನಾಥ ತೀರ್ಥಂಕರ ಮೂರ್ತಿ



ಭದ್ರಬಾಹು ಭಟಾರರ ಗುಹೆ_ ಚಿಕ್ಕಬೆಟ್ಟ



ಪಂಚಕೂಟ ಬಸದಿಯ ಮಧ್ಯದ ಗರ್ಭಗೃಹದಲ್ಲಿರುವ ಆದಿನಾಥನ ಮೂರ್ತಿ ದ್ವಾರದಲ್ಲಿ ಎರಡೂ ಕಡೆ ಖಡ್ಗಾಸನದಲ್ಲಿ ನಿಂತಿರುವ ಪಾರ್ಶ್ವನಾಥನ ಮೂರ್ತಿಗಳು

(ಇಂದಿನ ಬೆಳಗಾವಿ ಜಿಲ್ಲೆಯ ಹಲಸಿ) ಜೈನಬಸದಿಯನ್ನು ಕಟ್ಟಿಸಿದ ವಿಚಾರ ಕ್ರಿ.ಶ.538ರ ಶಾಸನದಿಂದ ತಿಳಿದುಬರುತ್ತದೆ. ಇದೇ ಕರ್ನಾಟಕದ ಪ್ರಾಚೀನ ಬಸದಿಯ ಉಲ್ಲೇಖ. ಕರ್ನಾಟಕದಲ್ಲಿ ಏಕಕೂಟ, ತ್ರಿಕೂಟ, ಪಂಚಕೂಟ ಬಸದಿಗಳಿರುವುದು ಕಂಡು ಬರುತ್ತದೆ. ಬಸದಿಯ ಮುಂದೆ ಎತ್ತರವಾದ ಮಾನಸ್ಥಂಭವೂ ಇರುತ್ತಿತ್ತು. ಬಸದಿಗಳಲ್ಲಿ ಜೈನ ತೀರ್ಥಂಕರರ ವಿಗ್ರಹದ ಜೊತೆಗೆ, ಅವರ ಪರಿವಾರ ದೇವೆಗಳಾದ ಯಕ್ಷ ಯಕ್ಷಿಯರ ವಿಗ್ರಹಗಳೂ ಇರುತ್ತವೆ.

ಗಂಗರ ಕಾಲದಲ್ಲಿ ಶ್ರವಣಬೆಳಗೊಳದ ಚಂದ್ರಗಿರಿಯ(ಚಿಕ್ಕಬೆಟ್ಟದ) ಮೇಲೆ ಅನೇಕ ಸುಂದರ ಬಸದಿಗಳು ನಿರ್ಮಾಣವಾದವು. ದೊಡ್ಡಬೆಟ್ಟ ಅಥವಾ ಇಂದ್ರಗಿರಿಯ ಮೇಲೆ ಕ್ರಿ.ಶ.980ರಲ್ಲಿ ಗಂಗರ ಮಾರಸಿಂಹನ ಮಂತ್ರಿ ಚಾವುಂಡರಾಯನು 58 ಅಡಿ ಎತ್ತರದ ಬಾಹುಬಲಿಯ ವಿಗ್ರಹವನ್ನು ನಿರ್ಮಿಸಿದನು. ಈ ಬಾಹುಬಲಿಯ ಸುತ್ತಲೂ



ಕಂಬದಹಳ್ಳಿಯ ಪಂಚಕೂಟ ಬಸದಿ



ಹೊಯ್ಸಳರ ಸೇನಾಧಿಪತಿ ಗಂಗರಾಜನು ಸುತ್ತಾಲಯವನ್ನು (24 ತೀರ್ಥಂಕರರ ವಿಗ್ರಹಗಳಿಂದ ಕೂಡಿದ ಬಸದಿ) ನಿರ್ಮಿಸಿದನು. ಕರ್ನಾಟಕದಲ್ಲಿ ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಸುಂದರವೂ ಮಹತ್ವಪೂರ್ಣವೂ ಆದ ಒಂದೆರಡು ಬಸದಿಗಳ ಪರಿಚಯವನ್ನು ಮಾಡಿಕೊಡಲಾಗಿದೆ.

**ಚಂದ್ರಗುಪ್ತ ಬಸದಿ:** ಶ್ರವಣಬೆಳಗೊಳದ ಚಿಕ್ಕಬೆಟ್ಟದ (ಚಂದ್ರಗಿರಿ) ಮೇಲಿರುವ ಚಂದ್ರಗುಪ್ತ ಬಸದಿಯು ಕ್ರಿ.ಶ.8–9ನೇ ಶತಮಾನದಲ್ಲಿ, ಚಂದ್ರಗುಪ್ತನು ಸಮಾಧಿಮರಣವನ್ನು ಹೊಂದಿದ ಸ್ಥಳದಲ್ಲಿಯೇ ಇದು ನಿರ್ಮಾಣವಾಗಿದೆ ಎಂದು ಹೇಳುತ್ತಾರೆ. ಈ ಬಸದಿಯ ವಿಶೇಷವೆಂದರೆ ಅದರ ಕೈಸಾಲೆಯ ಜಾಲಂಧ್ರದಲ್ಲಿ ಭದ್ರಬಾಹು ಮತ್ತು ಚಂದ್ರಗುಪ್ತರು ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದ ಕಥೆಯನ್ನು ಹಾಗೂ ಇತರ ಜೈನಕಥೆಗಳನ್ನು ಹೇಳುವ ಕಪ್ಪುಶಿಲೆಯ ಚಿಕಣಿಶಿಲ್ಪಗಳಿವೆ. ಈ ಬಸದಿಯ ಬಾಗಿಲುವಾಡವು ವಿಶೇಷವಾದ ಸೂಕ್ಷ್ಮ ಕುಸುರಿಕೆಲಸದ ಕೆತ್ತನೆಗಳಿಂದ ಕೂಡಿದೆ. ಈ ಬಸದಿಯ ಸಮೀಪದಲ್ಲೇ ಚಂದ್ರಗುಪ್ತನ ಆಗಮವನ್ನು ಹೇಳುವ ಬಂಡೆ ಶಾಸನ ಇದೆ. ಈ ಬೆಟ್ಟದ ಮೇಲೆ ಭದ್ರಬಾಹು ಭಟಾರರ ಗುಹೆಯೂ, ಅವರ ಪಾದಗಳೂ ಇವೆ.



ಶಾಂತಿನಾಥನ ಬಸದಿ– ಕಂಬದಹಳಿ

**ಕಂಬದಹಳ್ಳಿಯ ಪಂಚಕೂಟ ಬಸದಿ:** ನಾಗಮಂಗಲದಿಂದ ಶ್ರವಣಬೆಳಗೊಳಕ್ಕೆ ಹೋಗುವ ದಾರಿಯಲ್ಲಿ ಈ ಎರಡೂ ಸ್ಥಳಗಳಿಗೂ 17ಕಿ.ಮೀ. ದೂರದಲ್ಲಿದೆ. ಇದು ಗಂಗರ ಕಾಲದಲ್ಲಿ ಬಿಂಡಿಗನವಿಲೆ ತೀರ್ಥವೆಂಬ ಹೆಸರುಗಳಿಸಿತ್ತು. ಈ ಊರಿನಲ್ಲಿ ಪಂಚಕೂಟ ಬಸದಿಯ ಎದುರಿಗೆ ಉತ್ತರದಿಕ್ಕಿನಲ್ಲಿ ಸುಮಾರು 6 ಅಡಿ ಎತ್ತರವಾದ ಜಗತಿಯ ಮೇಲೆ ನಿರ್ಮಿಸಿದ 50 ಅಡಿ ಎತ್ತರದ ಮಾನಸ್ಥಂಭವಿದ್ದು, ಅದರಿಂದ ಈ ಊರಿಗೆ ಕಂಬದಹಳ್ಳಿ ಎಂಬ ಹೆಸರು ಬಂದಿದೆ. ಈ ಮಾನಸ್ಥಂಭದ ಅಡಿಭಾಗ ಚಚ್ಚೌಕವಾಗಿದ್ದು ನಾಲ್ಕೂಕಡೆ ಸುಮಾರು 9 ನೇ ಶತಮಾನದ ಸುಂದರ ಲಿಪಿಯಿಂದ ಕೂಡಿರುವ ಶಾಸನವಿದೆ. ಮಾನಸ್ಥಂಭದ ಮೇಲೆ ಸುಂದರವಾದ ಬ್ರಹ್ಮನಮೂರ್ತಿ ಇದ್ದು, ಪೂರ್ವಾಭಿಮುಖವಾಗಿದೆ. ಈ ಶಾಸನದಲ್ಲಿ ಸೂರಸ್ತಗಣದ ಪಲ್ಲಪಂಡಿತ ಅಥವಾ ಪಾಲ್ಯಕೀರ್ತಿದೇವನ ಮತ್ತು ಅವನ ಗುರುಪರಂಪರೆಯ ಸ್ತುತಿ ಇದೆ. ಈ ಶಾಸನದ ಒಂದು ಭಾಗದ ಕೆಳಗೆ ಕ್ರಿ.ಶ.1117ರ ವಿಷ್ಣುವರ್ಧನನ ಸೇನಾನಿ ಗಂಗರಾಜನ ಶಾಸನ ಇದೆ. ಗಂಗರಾಜನು ಬಿಂಡಿಗನವಿಲೆ ತೀರ್ಥಕ್ಕೆ ಮತ್ತು ತನ್ನ ಗುರುಗಳಾದ ಶುಭಚಂದ್ರಸಿದ್ಧಾಂತದೇವರಿಗೆ ದತ್ತಿ ಬಿಟ್ಟನೆಂದು ಹೇಳಿದೆ.

ಪಂಚಕೂಟ ಬಸದಿಯು ಗಂಗರ ಕಾಲದ ಕಣಶಿಲೆಯ (ಗ್ರಾನೈಟ್) ರಚನೆ. ಉತ್ತರದಿಕ್ಕಿನಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ಮಹಾದ್ವಾರವಿದೆ. ಈ ಮಹಾದ್ವಾರಕ್ಕೆ ಹೊಂದಿಕೊಂಡ ಹಾಗೆ ಪೂರ್ವಪಶ್ಚಿಮ ದಿಕ್ಕಿಗೆ ಎದುರುಬದರಾಗಿ ಏಕಕೂಟದ (ಒಂದೊಂದು ಗೋಪುರದ) ಎರಡು ಪ್ರತ್ಯೇಕ ಬಸದಿಗಳಿವೆ. ಇವೆರಡರ ಮಧ್ಯೆ ಸಭಾಮಂಟಪವಿದೆ. ಎರಡು ಬಸದಿಗಳಲ್ಲೂ ಅಂತರಾಳ ಮತ್ತು ಗರ್ಭಗೃಹವಿದೆ. ಇವುಗಳಲ್ಲೂ ಜಿನಬಿಂಬಗಳಿವೆ. ಈ ಜೋಡಿ ಬಸದಿಯಿಂದ 15 ಅಡಿಗಳ ದೂರ ಮುಂದೆ ಹೋದರೆ ಉತ್ತರಾಭಿಮುಖವಾದ ತ್ರಿಕೂಟ (ಮೂರು ಗೋಪುರಗಳ) ಬಸದಿ ಇದೆ. ತ್ರಿಕೂಟ ಬಸದಿಯು ಮೂರು ಪ್ರತ್ಯೇಕ ಗರ್ಭಗೃಹ ಮತ್ತು ಶಿಖರಗಳನ್ನು ಹೊಂದಿದೆ. ಈ ಮೂರು ಬಸದಿಗಳಿಗೂ ಮೂರು ಅಂತರಾಳ(ಸುಖನಾಸಿ) ಇದ್ದು, ಮೂರಕ್ಕೂ ಒಂದೇ ನವರಂಗ ಇದೆ. ಮುಂದೆ ಮುಖಮಂಟಪವಿದೆ. ಮಧ್ಯದ ಗರ್ಭಗೃಹದಲ್ಲಿ ಉತ್ತರಾಭಿಮುಖವಾಗಿರುವ ಸಿಂಹಪೀಠದ ಮೇಲೆ ಕುಳಿತಿರುವ ಬಳಪದಕಲ್ಲಿನಿಂದ ಮಾಡಿದ ಆದಿನಾಥ ತೀರ್ಥಂಕರನ ವಿಗ್ರಹವಿದೆ. ಈ ಗರ್ಭಗೃಹದ ಎರಡೂ ಕಡೆ ಖಡ್ಗಾಸನ ಭಂಗಿ(ನಿಂತಿರುವ) ತಲೆಯಮೇಲೆ ಏಳು ಹೆಡೆ ಸರ್ಪವಿರುವ ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳಿವೆ. ಪೂರ್ವದ ಕಡೆಗಿನ ಬಸದಿಯಲ್ಲಿ ಚಾಮರಧಾರಿಗಳಿಂದ ಕೂಡಿದ ನೇಮಿನಾಥನ ವಿಗ್ರಹವೂ, ಪಶ್ಚಿಮ ಬಸದಿಯ ಗರ್ಭಗೃಹದಲ್ಲಿ ಶಾಂತಿನಾಥನ ವಿಗ್ರಹವೂ ಇದೆ. ಇವೆರಡೂ ಗ್ರಾನೈಟ್‌ಶಿಲೆಗಳಿಂದ ನಿರ್ಮಿತವಾಗಿವೆ.

ತ್ರಿಕೂಟಾಚಲ ಬಸದಿಯ ಗೋಪುರಗಳು ಅಥವಾ ಶಿಖರಗಳು ಅತ್ಯಂತ ಸುಂದರವಾದ ರಚನೆಗಳಾಗಿದ್ದು, ನರಸಮಂಗಲದ ರಾಮೇಶ್ವರ, ನಂದಿಯ ಭೋಗನಂದೀಶ್ವರ ದೇವಾಲಯ, ಮತ್ತು ಮಹಾಬಲಿಪುರಂ ದೇವಾಲಯಗಳ ವಾಸ್ತುವನ್ನು ಹೋಲುತ್ತದೆ. ಇದನ್ನು ಪಲ್ಲವದ್ರಾವಿಡ ಶೈಲಿ ಎಂದು ಹೇಳಬಹುದು. ಈ ಬಸದಿಗಳನ್ನೆಲ್ಲಾ ಸು. ಕ್ರಿ.ಶ.750–800ರ ಅವಧಿಯಲ್ಲಿ ರಚಿಸಲಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.



ಚಿಕ್ಕಬೆಟ್ಟದ ಒಂದು ನೋಟ– ಕೊನೆಯಲ್ಲಿರುವುದು ಚಾಮುಂಡರಾಯ ಬಸದಿ, ಅದರ ಪಕ್ಕದಲ್ಲಿ ಕಾಣವುದು ಶಾಸನ ಬಸದಿ, ಅದರ ಪಕ್ಕದಲ್ಲಿ ಕಾಣುವುದು ಪಾರ್ಶ್ವನಾಥ ಬಸದಿ,



ಕಂಬದಹಳ್ಳಿಯ 50 ಅಡಿ ಎತ್ತರದ ಭವ್ಯ ಮಾನಸ್ಥಂಭ– ಈ ಸ್ಥಂಭದ ಕೆಳಭಾಗವು ಚಚ್ಚೌಕಾರವಾಗಿದ್ದು ನಾಲ್ಕೂಕಡೆ ಶಾಸನ ಇದೆ. ಮೇಲೆ ಬ್ರಹ್ಮನ ಮೂರ್ತಿ ಇದೆ.


**ಶಾಂತಿನಾಥ ಬಸದಿ:** ಕಂಬದಹಳ್ಳಿಯ ಪಂಚಕೂಟ ಬಸದಿಯ ಪಕ್ಕದಲ್ಲಿ ಪೂರ್ವಾಭಿಮುಖವಾಗಿ ಇರುವ ಭವ್ಯವಾದ ಬಸದಿಯೇ ಶಾಂತಿನಾಥ ಬಸದಿ. ಇದನ್ನು ವಿಷ್ಣುವರ್ಧನನ ಮಹಾಪ್ರಧಾನ ದಂಡನಾಯಕ ದ್ರೋಹಘರಟ್ಟ ಗಂಗರಾಜನ ಮಗ ಬೊಪ್ಪನು ಕ್ರಿ.ಶ. 1171ರಲ್ಲಿ ನಿರ್ಮಿಸಿದನು. ಇದರ ಶಿಲ್ಪಿ ದ್ರೋಹ ಘರಟ್ಟಾಚಾರಿ ಎಂಬ ಬಿರುದುಳ್ಳವನು. ಎತ್ತರವಾದ ಅಧಿಷ್ಠಾನವು ಪಟ್ಟಿಕೆಗಳಿಂದ ಕೂಡಿದ್ದು, ಈ ಪಟ್ಟಿಕೆಗಳು ಆನೆಗಳು, ಯಾಳಿಗಳು, ಸಿಂಹಗಳು, ಕುದುರೆಗಳು, ಕುದುರೆಸವಾರರುಗಳ ಸಾಲಿನಿಂದ ಕೂಡಿದ್ದು ಜೀವಂತಿಕೆಯಿಂದ ಕೂಡಿವೆ. ಶಾಂತಿನಾಥ ಬಸದಿಯು ಗರ್ಭಗೃಹ, ಅಂತರಾಳ ಮತ್ತು ವಿಶಾಲವಾದ ನವರಂಗದಿಂದ ಕೂಡಿದೆ. ಗರ್ಭಗೃಹದಲ್ಲಿ ಹತ್ತು ಅಡಿ ಎತ್ತರದ ಖಡ್ಗಾಸನ ಭಂಗಿಯ ಸುಂದರವಾದ ಶಾಂತಿನಾಥನ ಮೂರ್ತಿ ಇದ್ದು, ಇದರ ಕೈಗಳು ಮುರಿದಿವೆ. ಇಲ್ಲಿರುವ ನವರಂಗದ ಛಾವಣಿಯಲ್ಲಿ ಅತ್ಯಂತ ಸುಂದರವಾದ ಸಾಟಿಯಿಲ್ಲದ ಕೆತ್ತನೆಯಿಂದ ಕೂಡಿದೆ. ಅಷ್ಟದಿಕ್ಪಾಲಕರ ಮಧ್ಯೆ ಶಾಂತಿನಾಥನ ಮೂರ್ತಿ ನಯನಮನೋಹರವಾಗಿದೆ. ಇದು ವರ್ಣನೆಗೆ ನಿಲುಕದ್ದು, ನೋಡಿಯೇ ತಣಿಯಬೇಕು. ನವರಂಗದ ದ್ವಾರಬಂಧವು ಅತಯಂತ ಸೂಕ್ಷ್ಮವಾದ ಕುಸುರಿ ಕೆಸಲದಿಂದ ಕೂಡಿದೆ. ಈ ಬಸದಿಗೆ ಲಾಕುಳಪಂಥದ ಶೈವರು ರಕ್ಷಣೆ ನೀಡಿ ಎಕ್ಕೋಟಿ ಜಿನಾಲಯವೆಂದು ಘೋಷಿಸಿದರು. ಆದರೂ ಕೂಡಾ ಇದು ಜೀರ್ಣಸ್ಥಿತಿಗೆ ತಲುಪಿದ್ದು, ಈಚೆಗೆ ಪುರಾತತ್ವ ಇಲಾಖೆಯವರಿಂದ ಪುನರುಜ್ಜೀವನಗೊಂಡಿದೆ.

**ಚಾಮುಂಡರಾಯನ ಬಸದಿ:** ಚಿಕ್ಕಬೆಟ್ಟದ ಮೇಲೆ ಪೂರ್ವಾಭಿಮುಖವಾಗಿ ಅತ್ಯಂತ ಔನ್ನತ್ಯದಿಂದ, ಸರಳ ಅಲಂಕರಣೆಯಿಂದ ಕೂಡಿದ್ದರೂ ಭವ್ಯವಾಗಿ ಸುಂದರವಾಗಿ ಕಾಣುವ ಬಸದಿ ಎಂದರೆ ಚಾಮುಂಡರಾಯನ ಬಸದಿ. ಇದೂ ಪಲ್ಲವ ದ್ರಾವಿಡ ಶೈಲಿಯಲ್ಲಿರುವ ವಾಸ್ತುರಚನೆ. ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಲ್ಪಟ್ಟಿದ್ದು, ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪದಿಂದ ಕೂಡಿದೆ. ಗರ್ಭಗೃಹದಲ್ಲಿ ನೇಮಿನಾಥನ ವಿಗ್ರಹವಿದೆ. ಇದು ಮೊದಲನೇ ಅಂತಸ್ತನ್ನು ಹೊಂದಿದ್ದು, ಇಲ್ಲಿಗೆ ಹೋಗಲು ನವರಂಗದ ಮೂಲೆಯಲ್ಲಿ ಶಿಲೆಯಿಂದ ನಿರ್ಮಿಸಿದ ಮೆಟ್ಟಿಲುಗಳಿವೆ. ಮೊದಲನೇ ಅಂತಸ್ತಿನಲ್ಲಿ ಎರಡು ಹಂತಗಳಿದೆ. ಮೊದಲಹಂತದಲ್ಲಿ ಗರ್ಭಗೃಹವಿದ್ದು ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯಿದೆ. ಎರಡನೇ ಹಂತವು ಅಂತರಾಳವಾಗಿದೆ. ಇದನ್ನು ಚಾಮುಂಡರಾಯನು ನಿರ್ಮಿಸಿದನು. ಮೇಲಿನ ಅಂತಸ್ತನ್ನು ಅವನ ಮಗ ಜಿನದೇವಣ್ಣನು ನಿರ್ಮಿಸಿರುವಂತೆ ಕಂಡುಬರುತ್ತದೆ. ■



# ಪರಿಸರ ಸ್ನೇಹಿ ಅಂಗನವಾಡಿಗಳು:

## ಮೈಸೂರು ಮಾದರಿ



**ಈ ಪರಿಸರ ಸ್ನೇಹಿ ಅಂಗನವಾಡಿ ಕೇಂದ್ರಗಳನ್ನು ಬಿದಿರು, ಮಣ್ಣು ಮೊದಲಾದ ಪರಿಸರ ಸ್ನೇಹಿ ಸಾಮಗ್ರಿಗಳನ್ನು ಬಳಸಿ ನಿರ್ಮಿಸಲಾಗುತ್ತಿದೆ. ಸಿಮೆಂಟ್ ಹಾಗೂ ಕಬ್ಬಿಣದ ಬಳಕೆ ಇಲ್ಲವೇ ಇಲ್ಲ. ಅಡುಗೆ ಮನೆ, ಶೌಚಾಲಯ, ದಾಸ್ತಾನು ಕೊಠಡಿಗಳನ್ನು ಒಳಗೊಂಡ ಈ ಅಂಗನವಾಡಿಗಳು ಸುಸಜ್ಜಿತ ಕುಟೀರಗಳು ಮಳೆ ನೀರು ಸಂಗ್ರಹದ ವ್ಯವಸ್ಥೆಯೂ ಇದೆ. ಜತೆಗೆ ಸೋಲಾರ್ ದೀಪಗಳು.**


▪ ಪ್ರಕಾಶ ಅಬ್ಬೂರು


**ಜಿ**ಲ್ಲಾ ಮಟ್ಟದಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ಕೆಡಿಪಿ ಸಭೆಯೆಂದೇ ಪರಿಚಿತ. ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು, ಅವುಗಳ ಅನುಷ್ಠಾನದಲ್ಲಿ ಆಗಿರುವ ಪ್ರಗತಿಯನ್ನು ಈ ಸಭೆಯಲ್ಲಿ ಪರಿಶೀಲಿಸಲಾಗುತ್ತದೆ. ಪ್ರತಿ ತಿಂಗಳು ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಸಭೆ ನಡೆದರೆ, ಸಾಮಾನ್ಯವಾಗಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯೆಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದು ವಾಡಿಕೆ.

ಇಂತಹ ಸಭೆಯಲ್ಲಿ ಅರಣ್ಯ ಇಲಾಖಾ ಅಧಿಕಾರಿಗಳ ಮೇಲೆ ಇತರೆ ಇಲಾಖಾ ಅಧಿಕಾರಿಗಳದು ಒಂದೇ ಆಕ್ಷೇಪ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಡೆಯೊಡ್ಡುತ್ತಾರೆ ಎಂಬುದು. ಸುಪ್ರೀಂ ಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಅರಣ್ಯ ಸಂಬಂಧಿ ಕಾನೂನುಗಳು ತುಂಬಾ ಬಿಗಿಯಾಗಿವೆ. ರಕ್ಷಿತಾರಾಣ್ಯಗಳು, ಕಾಯ್ದಿಟ್ಟ ಅರಣ್ಯ ಪ್ರದೇಶಗಳು, ಡೀಮ್ಡ್ ಅರಣ್ಯಗಳು ಹೀಗೆ ವಿವಿಧ ಬಗೆಯ ಕಾಡುಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ನಿಬಂಧನೆಗಳು ಹಲವಾರು. ಕುಡಿಯುವ ನೀರಿನ ಯೋಜನೆಗಳಿಗೂ ತಡೆಯೊಡ್ಡುತ್ತೀರಿ, ಅಂಗನವಾಡಿ, ಶಾಲಾ



ಕಟ್ಟಡಗಳನ್ನು ನಿರ್ಮಿಸಲು ಅವಕಾಶ ಕೊಡುವುದಿಲ್ಲ ಹೀಗೆ ಆಕ್ಷೇಪಣೆಗಳ ನಡುವೆಯೂ ಸಭಾಧ್ಯಕ್ಷರಿಂದಲೇ ಹಲವು ಬಾರಿ ಸಮರ್ಥನೆಯ ಸಮಾಧಾನದ ಮಾತುಗಳೂ ಕೇಳಿ ಬರುತ್ತವೆ. ಈ ರೀತಿಯ ಬಿಗಿ ನಿಯಮಗಳು ಇರದಿದ್ದರೇ ಇಷ್ಟರಲ್ಲಾಗಲೇ ಕಾಡುಗಳು ಇನ್ನಷ್ಟು ಲೂಟಿಯಾಗುತ್ತಿದ್ದವು. ಕಾನೂನಿನ ವ್ಯಾಪ್ತಿಯಲ್ಲೇ ಏನಾದರೂ ಪರಿಹಾರ ಕಂಡುಕೊಳ್ಳಬೇಕು ಎಂಬ ಸಲಹೆ ಮೂಡಿ ಬರುತ್ತದೆ.

ಅರಣ್ಯ ಪ್ರದೇಶದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆ ಕೈಗೊಳ್ಳಲು ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಅನ್ವಯ ಕೇಂದ್ರ ಸರಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಅನುಮತಿ ಅತ್ಯಗತ್ಯ. ಜತೆಗೆ ಅರಣ್ಯ ಪ್ರದೇಶದಲ್ಲಿ ಎಷ್ಟು ಪ್ರಮಾಣದ ಭೂಮಿಯನ್ನು ವರ್ಗಾಯಿಸಲಾಗುತ್ತದೋ ಅಷ್ಟೇ ಪ್ರಮಾಣದ ಭೂಮಿಯನ್ನು ಸಂದರ್ಭನುಸಾರ ಕೆಲವೊಮ್ಮೆ ದುಪ್ಪಟ್ಟು ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗುತ್ತದೆ ಹಾಗೂ ಆ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ ಪಡಿಸಲು ಅಗತ್ಯವಾದ ಅನುದಾನವನ್ನು ನೀಡಬೇಕಾಗುತ್ತದೆ. ಹುಲಿ ಯೋಜನೆಯಂತಹ ವಿಶೇಷ ಯೋಜನೆಗಳು ಜಾರಿಯಲ್ಲಿರುವ ಜೈವಿಕ ವೈವಿಧ್ಯದ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲ್ಪಟ್ಟ ಅರಣ್ಯ ಪ್ರದೇಶಗಳಲ್ಲಿಯಂತೂ ಯಾವುದೇ ಸಂದರ್ಭದಲ್ಲಿಯೂ ಅರಣ್ಯೇತರ ಚಟುವಟಿಕೆಗಳಿಗೆ ಅವಕಾಶವನ್ನೇ ನೀಡುವುದಿಲ್ಲ.

ಇಷ್ಟೆಲ್ಲಾ ಕಟ್ಟುನಿಟ್ಟಿನ ನಿಯಮಗಳ ನಡುವೆ ತಲೆತಲಾಂತರದಿಂದ ಅರಣ್ಯಪ್ರದೇಶದಲ್ಲಿಯೇ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ನಾಗರಿಕ ಸೌಲಭ್ಯವನ್ನು ಒದಗಿಸುವುದು ಕಷ್ಟಕರ. ಹಲವಾರು ಪುನರ್ವಸತಿ ಯೋಜನೆಗಳ ನಡುವೆಯೂ ಇನ್ನೂ ಕೆಲವೆಡೆ ಪೂರ್ಣವಾಗಿ ಬುಡಕಟ್ಟು ಜನರು ಅರಣ್ಯವ್ಯಾಪ್ತಿಯಿಂದ ಸ್ಥಳಾಂತರಗೊಂಡಿಲ್ಲ. ಇಂತಹ ಜನಾಂಗದ ಮಕ್ಕಳಿಗೆ ಶಾಲೆ–ಅಂಗನವಾಡಿ, ನೀರು, ವಿದ್ಯುತ್‌ನಂತಹ ಮೂಲಭೂತ ಸೌಲಭ್ಯಗಳನ್ನು ಪರಿಸರ ಸ್ನೇಹಿ ನೆಲೆಯಲ್ಲಿಯೇ ಒದಗಿಸಬೇಕಾಗುತ್ತದೆ. ಹಲವಾರು ಬುಡಕಟ್ಟು ಹಾಡಿಗಳಿಗೆ ಸೋಲಾರ್ ವಿದ್ಯುತ್ ದೀಪ ಅಳವಡಿಸಲಾಗಿದೆ.

ಮಕ್ಕಳ ಅಪೌಷ್ಠಿಕತೆ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಂಗನವಾಡಿಗಳಂತೂ ಬುಡಕಟ್ಟು ಜನರ ಮಕ್ಕಳಿಗೆ ಅತೀ ಅವಶ್ಯಕ. ಇಂತಹ ಅಂಗನವಾಡಿಗಳನ್ನು ಪರಿಸರ ಸ್ನೇಹಿಯಾಗಿ ಅರಣ್ಯ ಕಾನೂನುಗಳ ವ್ಯಾಪ್ತಿಯಲ್ಲಿಯೇ ನಿರ್ಮಿಸುವ ವಿನೂತನ ಪ್ರಯತ್ನಕ್ಕೆ ಮೈಸೂರು ಜಿಲ್ಲಾಡಳಿತ ಚಾಲನೆ ನೀಡಿದ್ದು, ಪಿರಿಯಾಪಟ್ಟಣ ತಾಲ್ಲೂಕು ಮಲಗನಕೆರೆ ಹಾಡಿಯಲ್ಲಿ ಈಗಾಗಲೇ ಒಂದು ಅಂಗನವಾಡಿಯನ್ನು ಬಿದಿರಿನ ಸಾಮಗ್ರಿಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ನಿರ್ಮಿತಿ ಕೇಂದ್ರವು ಇಂತಹ ಅಂಗನವಾಡಿಗಳ ವಿನ್ಯಾಸ ರೂಪಿಸಿದ್ದು, ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಒಟ್ಟು ಹತ್ತು ಅಂಗನವಾಡಿ ಕೇಂದ್ರಗಳನ್ನು ಈ ಮಾದರಿಯಲ್ಲಿ ನಿರ್ಮಿಸಲು ಯೋಜಿಸಲಾಗಿದೆ. ಎನ್‌ಐಇ ಕಾಲೇಜಿನ ಸಹಯೋಗದಲ್ಲಿ ನಿರ್ಮಿತಿ ಕೇಂದ್ರವು ಈ ಅಂಗನವಾಡಿಗಳ ವಿನ್ಯಾಸ ರೂಪಿಸಿದ್ದು, ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

ತಲಾ 8.26 ಲಕ್ಷ ರೂ ವೆಚ್ಚದಲ್ಲಿ ರೂಪುಗೊಳ್ಳಲಿರುವ ಈ ಅಂಗನವಾಡಿ ಕೇಂದ್ರಗಳನ್ನು ಬಿದಿರು, ಮಣ್ಣು ಮೊದಲಾದ ಪರಿಸರ ಸ್ನೇಹಿ ಸಾಮಗ್ರಿಗಳನ್ನು ಬಳಸಿ ನಿರ್ಮಿಸಲಾಗುತ್ತಿದೆ. ಸಿಮೆಂಟ್ ಹಾಗೂ ಕಬ್ಬಿಣದ ಬಳಕೆ ಇಲ್ಲವೇ ಇಲ್ಲ. ಅಡುಗೆ ಮನೆ, ಶೌಚಾಲಯ, ದಾಸ್ತಾನು ಕೊಠಡಿಗಳನ್ನು ಒಳಗೊಂಡ ಈ ಅಂಗನವಾಡಿಗಳು ಸುಸಜ್ಜಿತ ಕುಟೀರಗಳು ಮಳೆ ನೀರು ಸಂಗ್ರಹದ ವ್ಯವಸ್ಥೆಯೂ ಇದೆ. ಜತೆಗೆ ಸೋಲಾರ್ ದೀಪಗಳು.

ಪಿರಿಯಾಪಟ್ಟಣ ತಾಲ್ಲೂಕಿನ ಮಲಗನಕೆರೆ ಹಾಡಿ ಅಂಗನವಾಡಿ ಉದ್ಘಾಟನೆಗೆ ಸಜ್ಜುಗೊಂಡಿದೆ. ವರ್ತಿಹಾಡಿ ಮತ್ತು ಹಳೆಕೆರೆಹಾಡಿಗಳಲ್ಲಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಹೆಚ್.ಡಿ. ಕೋಟೆ ತಾಲ್ಲೂಕಿನ ಬಳ್ಳೆ ಹಾಡಿ, ಗೂಳೂರು ಹಾಡಿ, ಮಾನಿಮೂಲೆ ಹಾಡಿ ಸೇರಿದಂತೆ 8 ಕಡೆ ಇಂತಹ ಅಂಗನವಾಡಿಗಳ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗುತ್ತಿದೆ. ಈಗ ಇರುವ ಅಂಗನವಾಡಿಗಳ ಸ್ಥಳದಲ್ಲಿಯೇ ಪರಿಸರ ಸ್ನೇಹಿ ಅಂಗನವಾಡಿಗಳ ನಿರ್ಮಾಣಕ್ಕೆ ಯೋಜಿಸಲಾಗುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳು, ಬುಡಕಟ್ಟು ಅಭಿವೃದ್ಧಿ ಅಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಸಿ.ಶಿಖಾ ಅವರ ಮಾರ್ಗದರ್ಶನದಲ್ಲಿ ಅಧಿಕಕಾರಿಗಳ ತಂಡ ಈ ಪರಿಸರ ಸ್ನೇಹಿ ಅಂಗನವಾಡಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ರಾಜ್ಯದಲ್ಲಿಯೇ ಅಷ್ಟೇಕೆ ದೇಶದಲ್ಲಿಯೇ ಮಾದರಿ ಎನ್ನಬಹುದಾದ ಈ ಕಾರ್ಯ, ಅರಣ್ಯ ಪ್ರದೇಶ ಇರುವ ಇತರೆ ಜಿಲ್ಲೆಗಳಲ್ಲಿಯೂ ಇಂತಹ ಅಂಗನವಾಡಿಗಳ ನಿರ್ಮಾಣಕ್ಕೆ ಸ್ಫೂರ್ತಿ ನೀಡಬಹುದು. ನೆಲದ ಕಾನೂನನ್ನು ಗೌರವಿಸುತ್ತಲೇ ಸಾಮಾಜಿಕ ಹೊಣೆಗಾರಿಕೆ ನಿರ್ವಹಿಸುವ ವಿಶಿಷ್ಟ ಪ್ರಯತ್ನ ಈ ಪರಿಸರ ಸ್ನೇಹಿ ಅಂಗನವಾಡಿಗಳ ನಿರ್ಮಾಣ. ■





# ಅಡಿಕೆಯೊಂದಿಗೆ ಪಪ್ಪಾಯಿ

## ಸಾರ್ಥಕ ಕೃಷಿ

▪ ಪ. ರಾಮಕೃಷ್ಣ ಶಾಸ್ತ್ರಿ

ಜಾಣ ರೈತರಾದ ಹೆಗ್ಡೆ ಒಂದೇ ಸಲ ಹಣ ಕೊಟ್ಟು ಪಪಾಯಿ ಗಿಡಗಳನ್ನು ತಂದಿಲ್ಲ. ಬ್ರಹ್ಮಾವರದ ಕೃಷಿ ಸಂಶೋಧನಾ ಕೇಂದ್ರದಿಂದ ಬೀಜಗಳನ್ನು ತಂದಿದ್ದಾರೆ. 'ಇದು ಕಂಗಿಲ ಮತ್ತು ರೆಡ್‌ಲೇಡಿ ತಳಿಯ ಸುಧಾರಿತ ಗಿಡಗಳ ಬೀಜಗಳು. ಇವು ಮಧುಮೇಹ ರೋಗಿಗಳ ಬಳಕೆಗಾಗಿ ವಿಶೇಷವಾಗಿ ನಾಲ್ಕು ವರ್ಷಗಳ ಹಿಂದೆ ಕಂಡು ಹಿಡಿದಿರುವ ತಳಿಗಳು. ಇದನ್ನು ಮಧುಮೇಹವುಳ್ಳವರು ಧಾರಾಳವಾಗಿ ಸೇವಿಸಬಹುದು.

ಇವರಲ್ಲಿ ಹತ್ತಾರು ಎಕರೆಗಳ ವೈವಿಧ್ಯಮಯ ಕೃಷಿಯಿದೆ. ಜಾಯಿಕಾಯಿ, ಲವಂಗ, ರಬ್ಬರ್, ಅಡಿಕೆ, ತೆಂಗು, ಮಿಶ್ರ ತಳಿಯ ಬಾಳೆ ಇದೆಲ್ಲದರ ಜೊತೆಗೆ ಸಮ್ಮಿಶ್ರ ಕೃಷಿಗಳ ಪ್ರಯೋಗವೂ ಮಾಡಿದ್ದಾರೆ. ಹೊಸದಾಗಿ ಮೂವತ್ತು ಸೆಂಟ್ಸ್ ಜಾಗದಲ್ಲಿ ನೆಟ್ಟ ನೂರಾ ಐವತ್ತು ಇಂಟರ್‌ಸಿ ತಳಿಯ ಅಡಕೆ ಗಿಡಗಳಿಗೆ ಎರಡೂವರೆ ವರ್ಷ ದಾಟುತ್ತಿದೆ. ಇವರ ಶ್ರದ್ಧೆಯ ಕೃಷಿಯಿಂದಾಗಿ ಎಲ್ಲವೂ ಹಿಂಗಾರು ಫಲ ಬಿಡಲಾರಂಭಿಸಿವೆ. ಇಲ್ಲಿ ಮುನ್ನೂರು ಪಪಾಯಿ ಗಿಡಗಳನ್ನು ನೆಟ್ಟು ತುಂಬಿದ ಫಸಲಿನ ಮಾರಾಟದಿಂದ ಅಡಕೆ ಕೃಷಿಗೆ ಹಾಕಿದ ಬಂಡವಾಳವನ್ನು ಪೂರ್ಣವಾಗಿ ಬಾಚಿಕೊಳ್ಳುವುದರಲ್ಲಿದ್ದಾರೆ ಅವರು.

ಈ ಕೃಷಿಕರು ಶಿವಾನಂದ ಹೆಗ್ಡೆ. ಬೆಳ್ತಂಗಡಿ ತಾಲೂಕಿನ ಕರಂಬಾರು ಗ್ರಾಮದ ಪೆರ್ಲಂಡದಲ್ಲಿ ಅವರ ಮನೆಯಿದೆ. ಒಂಭತ್ತು ತಿಂಗಳು ವಯಸ್ಸಾಗಿರುವ ಪಪಾಯಿ ಗಿಡಗಳಲ್ಲಿ ಭರ್ತಿ ಫಸಲಿದ್ದು ಈಗಾಗಲೇ ಸನಿಹದ ಮಾರುಕಟ್ಟೆಗಳಲ್ಲಿ ಅವರ ಶ್ರಮದ ಫಲ ಮಾರಾಟಕ್ಕೆ ಲಗ್ಗೆಯಿಟ್ಟಿದೆ. ಜಾಣ





ರೈತರಾದ ಹೆಗ್ಡೆ ಒಂದೇ ಸಲ ಹಣ ಕೊಟ್ಟು ಪಪಾಯಿ ಗಿಡಗಳನ್ನು ತಂದಿಲ್ಲ. ಬ್ರಹ್ಮಾವರದ ಕೃಷಿ ಸಂಶೋಧನಾ ಕೇಂದ್ರದಿಂದ ಬೀಜಗಳನ್ನು ತಂದಿದ್ದಾರೆ. 'ಇದು ಕಂಗಿಲ ಮತ್ತು ರೆಡ್‌ಲೇಡಿ ತಳಿಯ ಸುಧಾರಿತ ಗಿಡಗಳ ಬೀಜಗಳು. ಇವು ಮಧುಮೇಹ ರೋಗಿಗಳ ಬಳಕೆಗಾಗಿ ವಿಶೇಷವಾಗಿ ನಾಲ್ಕು ವರ್ಷಗಳ ಹಿಂದೆ ಕಂಡು ಹಿಡಿದಿರುವ ತಳಿಗಳು. ಇದನ್ನು ಮಧುಮೇಹವುಳ್ಳವರು ಧಾರಾಳವಾಗಿ ಸೇವಿಸಬಹುದು. ಇದರಲ್ಲಿ ಮೂರು ಪಟ್ಟು ಇನ್ಸುಲಿನ್ ಉತ್ಪನ್ನವಾಗುತ್ತದೆ' ಎಂದು ಕೇಂದ್ರದ ಅಧಿಕಾರಿಗಳು ಅವರಿಗೆ ಹೇಳಿದ್ದಾರೆ. ಈ ಬೀಜಗಳಿಂದ ಹುಟ್ಟಿದ ಎರಡು ಗಿಡಗಳನ್ನು ನಾಟಿ ಮಾಡಿ ಹಣ್ಣುಗಳಾಗಿವೆ. ಅದರ ಬೀಜಗಳಿಂದ ಪಾಲಿಥಿನ್ ತೊಟ್ಟೆಗಳಲ್ಲಿ ಮುನ್ನೂರು ಗಿಡ ಸಿದ್ಧಗೊಳಿಸಿದ್ದಾರೆ. ನೂರೈವತ್ತು ಅಡಿಕೆ ಗಿಡಗಳ ತೋಟದಲ್ಲಿ ಒಂದು ಗಿಡದ ಮಧ್ಯೆ ಎರಡರಂತೆ ಐದು ಅಡಿಗೆ ಒಂದರ ಹಾಗೆ ಪಪಾಯಿ ಗಿಡಗಳನ್ನು ನೆಟ್ಟಿದ್ದಾರೆ. ಒಂದಡಿ ಆಳ, ಅಗಲವಿರುವ ಗುಂಡಿಯೊಳಗೆ ಕಾಂಪೋಸ್ಟ್ ಗೊಬ್ಬರ ತುಂಬಿದ್ದಾರೆ. ನಾಟಿ ಮಾಡುವಾಗ ಗಿಡಗಳ ವಯಸ್ಸು ಎರಡು ತಿಂಗಳಾಗಿದೆ.

ಪ್ರತಿ ಗಿಡಕ್ಕೂ ಅರ್ಧ ಕಿಲೋ ಎಲುಬಿನ ಹುಡಿ(ಬೋನ್ ಮೀಲ್), ನೂರು ಗ್ರಾಮ್ ಸಂಯುಕ್ತ ರಸಗೊಬ್ಬರ, ಕೊಂಚ ಝಿಂಕ್ ಬೊರಾನ್ ಮಾತ್ರ ಹಾಕಿ, ಕಾಲಕಾಲಕ್ಕೆ ಮಣ್ಣಿನ ಏರು ಹಾಕಿಸಿ ಬುಡದಲ್ಲಿ ನೀರು ನಿಲ್ಲದಂತೆ ಮಾಡಿದ್ದಾರೆ. ಅಡಕೆ ಗಿಡಕ್ಕೆ ಸಿಂಪಡಿಸುವ ತುಂತುರು ನೀರಾವರಿ ಪಪ್ಪಾಯಿ ಗಿಡಗಳಿಗೂ ಲಭಿಸಿದೆ. ಇಷ್ಟು ಗಿಡಗಳಿಗೆ ಆದ ವೆಚ್ಚ ಹದಿನೈದು ಸಾವಿರ ರೂಪಾಯಿ. ಆರೇ ತಿಂಗಳಲ್ಲಿ ಹೂ ಬಿಟ್ಟು ಒಂಭತ್ತನೆಯ ತಿಂಗಳಿಗೆ ಕೊಯ್ಲು ಆರಂಭಗೊಂಡಿದೆ. ಒಂದು ಪಪಾಯಿ ಸರಾಸರಿ ಮೂರು ಕಿಲೋ ತೂಗುತ್ತದೆ. ಕಿಲೋಗೆ ಹದಿನೈದು ರೂಪಾಯಿ ಬೆಲೆಗೆ ಎಷ್ಟು ಸರಕಿದ್ದರೂ ಕ್ಷಣದಲ್ಲಿ ಖಾಲಿಯಾಗುತ್ತದೆ. ವಾರದಲ್ಲಿ ಎರಡು ಸಲ ಮಾಗಿ ಬಣ್ಣ ಬದಲಾಗುತ್ತಿರುವ ಕಾಯಿ ಗಿಡಕ್ಕೊಂದರಂತೆ ದೊರಕುತ್ತದೆ. ಸದ್ಯಕ್ಕೆ ವಾರಕ್ಕೆ ನಾಲ್ಕು ಕ್ವಿಂಟಾಲು ಸಿಗುತ್ತಿದ್ದು ಬೇಸಗೆಯ ದಿನಗಳಲ್ಲಿ ಇದು ಹತ್ತು ಪಟ್ಟು ಹೆಚ್ಚಾಗುವಷ್ಟು ಫಸಲು ಮಾಗಲು ಸಿದ್ಧವಾಗುತ್ತಿದೆ. ಬೇಸಗೆಯಷ್ಟು ಶೀಘ್ರವಾಗಿ ಕಾಯಿಗಳು ಮಳೆಗಾಲದಲ್ಲಿ ಬಲಿಯುವುದಿಲ್ಲ. ಹೀಗಾಗಿ ಆಗ ಹದಿನೈದು ದಿನಕ್ಕೊಮ್ಮೆ ಕೊಯ್ಲಿಗೆ ಬರುತ್ತವೆ. ಗಾಳಿಯ ಹೊಡೆತದಿಂದ ಮರಗಳನ್ನು ರಕ್ಷಿಸಿಕೊಂಡರೆ ಮೂರು ವರ್ಷ ಫಸಲು ಕೊಯ್ಯಬಹುದು, ಇಷ್ಟೇ ಮರಗಳಲ್ಲಿ ವರ್ಷಕ್ಕೆ ಒಂದರಿಂದ ಒಂದೂವರೆ ಲಕ್ಷ ರೂಪಾಯಿ ನಿವ್ವಳ ಲಾಭ ಖಚಿತವೆನ್ನುತ್ತಾರೆ ಶಿವಾನಂದ ಹೆಗ್ಡೆ.

ಹಣ್ಣಿನೊಳಗಿನ ವರ್ಣ ಚಿತ್ತಾಕರ್ಷಕವಾಗಿದೆ. ತುಂಬ ಸಿಹಿ, ಎಷ್ಟಿದ್ದರೂ ತಿನ್ನುವಷ್ಟು ರುಚಿಕರವಾಗಿದೆ. ಸಿಪ್ಪೆಯನ್ನೂ ತಿನ್ನಬಹುದು. ಕಾಯಿಯಿಂದ ಪಲ್ಯ, ಸಾಂಬಾರು ತಯಾರಿಸಬಹುದು. ಹೂ ಉದುರುವ ಸಣ್ಣ ಸಮಸ್ಯೆಯೂ ಇದೆ. ಏನಿದ್ದರೂ ಬಂಡವಾಳ ಮತ್ತು ವೆಚ್ಚ ಕಡಮೆ. ಸಮ್ಮಿಶ್ರವಾಗಿ ಬೆಳೆದರೆ ಕೋಕೋ, ಬಾಳೆಗಳಿಗಿಂತಲೂ ಪಪಾಯಿ ಲಾಭಕರವೆಂಬುದು ಖಚಿತವಾಗಿ ಹೇಳಬಹುದು ಎಂದು ಗೆಲುವಿನ ನಗೆ ಬೀರುತ್ತಾರೆ ಹೆಗ್ಡೆ.(9483906949)





# ಎರಡೆರಡು ಮರಿ ಹಾಕುವ ನಾರಿ ಸುವರ್ಣ ಕುರಿ



ಡಾ. ಎಂ. ನಾರಾಯಣಸ್ವಾಮಿ

**ನಾರಿ ಸುವರ್ಣ ಕುರಿ ಒಮ್ಮೆಗೆ ಎರಡು ಮರಿ ಹಾಕುತ್ತದೆ. ಒಮ್ಮೊಮ್ಮೆ ಮೂರು ಮರಿಗಳನ್ನೂ ಹಾಕುತ್ತದೆ. ಇದು ರೈತರ ಪಾಲಿಗೆ ಬಂಪರ್ ಲಾಟರಿ. ಗ್ರಾಮೀಣ ಜನತೆಯ ಆರ್ಥಿಕಾಭಿವೃದ್ಧಿಗೆ ಪೂರಕ.**

ನಾರಿ ಸುವರ್ಣ ಕುರಿತಳಿಯನ್ನು ಮಹಾರಾಷ್ಟ್ರದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ತಳಿಯ ಅಭಿವೃದ್ಧಿಗೆ ತೆಗೆದುಕೊಂಡ ಒಟ್ಟು ಸಮಯ ಎಂಟು ವರ್ಷಗಳು. ನಿಂಬ್ಕರ್ ಅಗ್ರಿಕಲ್ಚರಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ (NARI) ಎಂಬ ಖಾಸಗಿ ಸಂಶೋಧನಾ ಸಂಸ್ಥೆಯ ಹೆಸರಿನ ಪ್ರತಿ ಪದದ ಮೊದಲ ಇಂಗ್ಲಿಷ್ ಅಕ್ಷರಗಳನ್ನು ತೆಗೆದುಕೊಂಡು 'ನಾರಿ' ಎಂಬ ಪದವನ್ನು ಸೃಷ್ಟಿಸಲಾಗಿದೆ. ರೈತರಿಗೆ ಈ ತಳಿಯು ಚಿನ್ನದಂತಹ ವರದಾನವಾಗಬಹುದಾದ್ದರಿಂದ 'ಸುವರ್ಣ' ಎಂಬ ಪದವನ್ನು 'ನಾರಿ' ಪದದ ಜೊತೆಗೆ ಜೋಡಿಸಲಾಗಿದೆ.

ಸಾಮಾನ್ಯವಾಗಿ ಕುರಿಗಳು ಒಂದೇ ಮರಿಯನ್ನು ಕೊಡುತ್ತವೆ. ಆದರೆ, ನಾರಿ ಸುವರ್ಣ ತಳಿಯು ಎರಡು ಅಥವಾ ಮೂರು ಮರಿಗಳನ್ನು ಹಾಕುತ್ತದೆ. ಹೀಗೆ ಮರಿ ಹಾಕುವ ಗ್ಯಾರಂಟಿ ಶೇ. 60 ರಷ್ಟು ಮಾತ್ರ.



ಹೀಗೆ ಎರಡು ಅಥವಾ ಮೂರು ಮರಿ ಹಾಕುವ ಗುಣಕ್ಕೆ ಪಶ್ಚಿಮ ಬಂಗಾಳದ ಸುಂದರಬನದ ಗೆರೋಲ್ ಎಂಬ ಕುರಿತಳಿಯ ಫೆಕ್ ಬಿ (ಫೆಕ್ = ಫೀಕಂಡಿಟಿ, Fecundity, ಬಿ= ಬೋರೂಲಾ, Booroola) ಎಂಬ ವಂಶವಾಹಿಯು ಕಾರಣವಾಗಿದೆ. ಇದು ಎರಡೆರಡು ಮರಿಗಳನ್ನು ಹಾಕಲು ಪೂರಕವಾದ ಫಲವತ್ತತೆಯ ವಂಶವಾಹಿ. ಬೋರೂಲಾ ವಂಶವಾಹಿಯನ್ನು ಮೊದಲ ಬಾರಿಗೆ ಆಸ್ಟ್ರೇಲಿಯಾದಲ್ಲಿ ನಡೆದ ಸಂಶೋಧನೆಗಳಿಂದ 1974 ರಲ್ಲಿ ಕಂಡುಕೊಳ್ಳಲಾಯಿತು.

ಬಾನ್ ನಿಂಬ್ಕರ್ ಎಂಬ ವಿಜ್ಞಾನಿ ಈ ತಳಿಯ ಜನಕ. ನಾರಿ ಸುವರ್ಣ ತಳಿಯನ್ನು ಎರಡು ರೀತಿಯಲ್ಲಿ ಸಂಕರಣ ಮಾಡಲಾಗಿದೆ. ಮೊದಲನೆಯದಾಗಿ ಶೇ. 90 ಡೆಕ್ಕನಿ ಹಾಗೂ ಶೇ. 10 ಗೆರೋಲ್ ತಳಿಯಿಂದ ಪಡೆದದ್ದು ಒಂದು ರೀತಿಯ ಸಂಕರಣವಾದರೆ, ಇನ್ನೊಂದು ರೀತಿಯ ಸಂಕರಣವನ್ನು ಶೇ. 60 ಡೆಕ್ಕನಿ, ಶೇ. 30 ಮಡ್‌ಗ್ಯಾಲ್ ಹಾಗೂ ಶೇ. 10 ಗೆರೋಲ್‌ನಿಂದ ಪಡೆಯಲಾಗಿದೆ. ಪುಣೆಯಲ್ಲಿರುವ ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯದ ಜೀವರಾಸಾಯನಿಕ ವಿಜ್ಞಾನ ವಿಭಾಗವು ಡಿಎನ್‌ಎ ಹಂತದ ಪರೀಕ್ಷೆ ನಡೆಸಿ 'ನಾರಿ ಸುವರ್ಣ' ತಳಿಯು ಒಂದು ಹೊಸ ಕುರಿ ತಳಿಯೆಂದು ದೃಢಪಡಿಸಿದೆ. ಇದಕ್ಕಾಗಿ ಪುಣೆಯ ಪ್ರಯೋಗಾಲಯ ಹಾಗೂ ನಾರಿ ಸಂಸ್ಥೆಯು ಸಿಎಸ್‌ಐಆರ್ ನಿಂದ 2007ರಲ್ಲಿ ಪ್ರಶಸ್ತಿ ಪಡೆದಿವೆ. 2005ರಿಂದ ಈ ಕುರಿಗಳನ್ನು ರೈತರ ಸಾಕಣೆಗಾಗಿ ಪೂರೈಸಲಾಗುತ್ತಿದೆ. ನಾರಿ ಸಂಸ್ಥೆಯು ಪ್ರತಿ ಕುರಿಯನ್ನು ಸುಮಾರು 30 ರಿಂದ 60 ಸಾವಿರ ಬೆಲೆಗೆ ಮಾರುತ್ತಿದೆ ಎಂದು ತಿಳಿದುಬಂದಿರುತ್ತದೆ.

ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನ ಪ್ರಾಣಿ ಪ್ರಸೂತಿ ವಿಜ್ಞಾನ ವಿಭಾಗದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ನಾರಿ ಸುವರ್ಣ ಕುರಿಯ ಉತ್ಪಾದನೆ ಮತ್ತು ವಿತರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಯ ಮೂಲಕ ತುಮಕೂರು ಜಿಲ್ಲೆಯ ರೈತರಿಗೆ ನಾರಿ ಸುವರ್ಣ ಕುರಿಗಳನ್ನು ಹಂಚಲಾಗಿದೆ.

ಈ ಯೋಜನೆಯ ಮುಖ್ಯಸ್ಥರಾದ ಪ್ರೊ. ಎ. ಕೃಷ್ಣಸ್ವಾಮಿಯವರ ಸಂಶೋಧನಾ ಅನುಭವದಂತೆ, ನಾರಿ ಸುವರ್ಣ ಕುರಿಯು ಎರಡು ಮರಿಗಳನ್ನು ಹಾಕಬೇಕೆಂದರೆ ಹೆಣ್ಣು ಮತ್ತು ಗಂಡು ಕುರಿ 'ನಾರಿ ಸುವರ್ಣ' ತಳಿಯೇ ಆಗಿರಬೇಕು. ಇದಕ್ಕೆ ಕಾರಣ ಅನುರೂಪಿ (ಹೋಮೋಜೈಗಸ್) ವಂಶವಾಹಿ ಎಂದು ಹೇಳಲಾಗಿದೆ. ಕೇವಲ ನಾರಿ ಸುವರ್ಣ ಟಗರನ್ನು ಮಾತ್ರ ಬಳಸಿ ಎರಡು ಮರಿಗಳನ್ನು ಪಡೆಯುವುದೆಂದರೆ ಅದು ಆರು ಪೀಳಿಗೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹುಟ್ಟುವ ಮರಿಗಳು ಕನಿಷ್ಟ 1.5 ಕಿಲೋಗ್ರಾಂ ತೂಕವಿದ್ದರೆ ಮಾತ್ರ ಬದುಕುಳಿಯಲು ಸಾಧ್ಯ. ಇದಕ್ಕಾಗಿ, ತಾಯಿ ಕುರಿಯು ಗರ್ಭ ಧರಿಸಿದಾಗ ಎರಡು ತಿಂಗಳಿಂದ ಆರಂಭಿಸಿ ಈಯುವವರೆಗೆ ದಿನಕ್ಕೆ ಕನಿಷ್ಟ 100 ಗ್ರಾಂನಷ್ಟಾದರೂ ಹಿಂಡಿ ಮಿಶ್ರಣ ಕೊಡಬೇಕು. ಇದರಿಂದ ತಾಯಿ ಕುರಿಗೆ ತಾಕತ್ತು ಸಿಗುತ್ತದೆ. ಭ್ರೂಣ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಉತ್ತಮ ಕೆಚ್ಚಲು ಬೆಳವಣಿಗೆಯಾಗಿ ಮರಿಗಳಿಗೆ ಸಾಕಷ್ಟು ಹಾಲುಣಿಸುವುದು ಸಾಧ್ಯವಾಗುತ್ತದೆ.

ರೈತರ ಹಟ್ಟಿ-ಕೊಟ್ಟಿಗೆಗಳಲ್ಲಿ ನಾರಿ ಸುವರ್ಣ ಜನಪ್ರಿಯವಾಗಬೇಕೆಂದರೆ ಇನ್ನೊಂದಿಷ್ಟು ಸಮಯ ತೆಗೆದುಕೊಳ್ಳುತ್ತದೆ. ವೈಜ್ಞಾನಿಕ ಲಾಲನೆ ಪಾಲನೆಯಂತೂ ಬೇಕೇಬೇಕು.

ನಾರಿ ಸಂಸ್ಥೆಯ ವಿಳಾಸ: ತಂಬ್‌ಮಲ್, ಫಲ್ತಾನ್ ತಾಲೂಕು, ಸತಾರ ಜಿಲ್ಲೆ, ಮಹಾರಾಷ್ಟ್ರ – 415523, ದೂರವಾಣಿ ಸಂಖ್ಯೆ: 02166220945 (ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 7.00 ರವರೆಗೆ).



# ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರು

▪ ಡಾ. ಸಂಗಮೇಶ ತಮ್ಮನಗೌಡ್ರ



ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರದು ಕನ್ನಡ ನಾಡು ಮರೆಯಲಾಗದ ಮೇರು ವ್ಯಕ್ತಿತ್ವ. ಕನ್ನಡಭಾಷೆಯ ಅಳಿವು-ಉಳಿವಿನ ಪ್ರಶ್ನೆಬಂದಾಗ, ಕರ್ನಾಟಕ ಪೀಠೋಪಕರಣದ ಸವಿನೆನಪಿನ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಬಂದಾಗ ಥಟ್ಟನೆ ನೆನಪಾಗುವ ಪ್ರಥಮ ಹೆಸರೆಂದರೆ ಆಲೂರ ವೆಂಕಟರಾಯರದು. ಕನ್ನಡನಾಡು ಮತ್ತು ಕನ್ನಡನುಡಿಯ ಅಭಿಮಾನವನ್ನು ಅವರು ತಮ್ಮ 'ಹೃದಯದ ನಿಧಿ'ಯಂತೆ ಜತನವಾಗಿಟ್ಟು ಕೊಂಡು ಬಂದಿದ್ದರು. ಕನ್ನಡ, ಕನ್ನಡತ್ವ, ಕರ್ನಾಟಕದ ವೈಭವೀಕರಣದ ಬಗ್ಗೆ ಅವರು ಬಹುದೊಡ್ಡ ಕನಸು ಕಂಡಿದ್ದರು. ಇಂತಹ ನಾಡಪುರಂಗವರ ಸ್ಮರಣೆ ನಾಡಗೌರವದ ಸಂಕೇತವಾಗಿದೆ.

**ಮನೆತನದ ಹಿನ್ನೆಲೆ, ಶಿಕ್ಷಣ : ವೃತ್ತಿ ಜೀವನ :** ಧಾರವಾಡದ ನಿವಾಸಿ ಆಲೂರ ವೆಂಕಟರಾಯರ ಮೊಮ್ಮಗ ಡಾ. ದೀಪಕ ಆಲೂರ ಅವರು ಹೇಳುವಂತೆ ವೆಂಕಟರಾಯರ ಪೂರ್ವಜರು ಈಗಿನ ಆಂಧ್ರಪ್ರದೇಶದ ಆದೋನಿಯವರು. ಗದಗ ಜಿಲ್ಲೆಯ ಹೊಳೆಆಲೂರು ವೆಂಕಟರಾಯರಿಗೆ ದೊರೆತ ಜಹಗೀರ ಪ್ರದೇಶವಾಗಿತ್ತು. ಹೊಳೆಆಲೂರು ಮತ್ತು ಅದರ ಸುತ್ತಲಿನ ಗ್ರಾಮಗಳ ಜಮೀನಿನ ಒಡೆಯರೆನಿಸಿದ್ದರು.

1880 ರ ಜುಲೈ 12ರಂದು ಭೀಮರಾಯ ಭಾಗೀರಥಿಬಾಯಿ ದಂಪತಿಗಳ ಮಗನಾಗಿ ಬಿಜಾಪುರದಲ್ಲಿ ಆಲೂರು ವೆಂಕಟರಾಯರು ಜನಿಸಿದರು. ತಂದೆ ಭೀಮರಾಯರು ಸರಕಾರಿ ವೃತ್ತಿಯಲ್ಲಿದ್ದುದರಿಂದ ವೆಂಕಟರಾಯರ ಶಿಕ್ಷಣವು ನವಲಗುಂದ, ಧಾರವಾಡ, ಗದಗ, ಹಾನಗಲ್ ಹೀಗೆ ಬೇರೆ ಬೇರೆ ಊರುಗಳಲ್ಲಿ ನಡೆಯಿತು. ಭೀಮರಾಯರು ಆಲೂರಿನ ಜಹಗೀರಿ ಹಿಡಿದಿದ್ದರಿಂದ ಶ್ರೀಮಂತಿಕೆಯ ಮೆರಗು ಒದಗಿಬಂದಿತ್ತು. ಓದಿನ ವಿಷಯವಾಗಿ ಆತ್ಮಪ್ರತ್ಯಯ. ಇದರ ಪರಿಣಾಮವಾಗಿ ಆಲೂರರು ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಲೇ, ಸಂಸ್ಕೃತ 'ವೇಣೀ ಸಂಹಾರ' ನಾಟಕವನ್ನು ರಂಗದ ಮೇಲೆ ಸ್ನೇಹಿತರ ನೆರವಿನಿಂದ ತಂದರು. ಗಣಪತಿ ಉತ್ಸವ, ಕನ್ನಡ ಮೇಳಗಳನ್ನು ಕೂಡಿಸಿದರು. ಲಕ್ಷ್ಮಣ ಘಟಿಕಾರ ಎಂಬ ವಿದ್ಯಾರ್ಥಿ ಕವಿ ರಚಿಸಿದ 15-20 ಪದ್ಯಗಳಿರುವ, 'ಗಜಾನನ ಸ್ತವನ' ಎಂಬ ಮೇಳಾಪದ ಸಂಗ್ರಹವನ್ನು ಆಲೂರರು ಪ್ರಕಟಿಸಿದರು. ಇಡೀ ಭಾರತದಾದ್ಯಂತ ಅಂದು ನಡೆಯುತ್ತಿದ್ದ ಘಟನೆಗಳು ಆಲೂರರನ್ನು ದೇಶದ ಹಿತಚಿಂತನೆಯ ಕಡೆ ಮನಮಾಡುವಂತೆ ಪ್ರೇರೇಪಣೆ ನೀಡಿದವು. ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವು ಆಲೂರರಿಗೆ ಪ್ರೇರಣೆ ಒದಗಿಸಿತು.

1897ರಲ್ಲಿ ಆಲೂರರು ಮೆಟ್ರಿಕ್ಯುಲೇಶನ್ ಪರೀಕೆಯಲ್ಲಿ ಇಡೀ ಶಾಲೆಗೆ ಎರಡನೇಯವರಾಗಿ ಉತ್ತೀರ್ಣರಾದರು. ಆ ವರ್ಷ ಎಲ್ಲೆಂದರಲ್ಲಿ ಪ್ಲೇಗ್ ಮಾರಿ ಹಬ್ಬಿದ್ದರಿಂದ ಆಲೂರರಿಗೆ ಕಾಲೇಜು ಸೇರಲು ಆಗಲಿಲ್ಲ. ಆದರೆ ಆಲೂರರು ಮನೆಯಲ್ಲಿ ತಂದೆ ಸಂಗ್ರಹಿಸಿಟ್ಟಿದ್ದ ಗ್ರಂಥರಾಶಿಯನ್ನು ತಮ್ಮ ಸುಪರ್ದಿಗೆ

ತೆಗೆದುಕೊಂಡರು. ಮಹಾಭಾರತ ಮತ್ತು ಕೆಲವು ಮರಾಠಿ ಧಾರ್ಮಿಕ ಗ್ರಂಥಗಳ ಅಧ್ಯಯನ ಆಲೂರರ ಮನಸ್ಸನ್ನು ಜಾಗೃತಗೊಳಿಸಿದವು. ಗ್ರಂಥ ರಚನೆ ಮಾಡಬೇಕೆಂಬ ಹುಮ್ಮಸ್ಸು ಆಲೂರರನ್ನು ಬಿಡಲಿಲ್ಲ. ಅವರು ಪ್ರೊ. ಭಾನು ಅವರ 'ನೀತಿ ಮೀಮಾಂಸೆ'ಯನ್ನು ಅನುವಾದಿಸಲು ಆ ಕೂಡಲೇ ಪ್ರಾರಂಭಿಸಿದರು.

1899ರಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜನ್ನು ಆಲೂರರು ಸೇರಿದರು. ಆಲೂರರು ಕಾಲೇಜು ವಿದ್ಯಾರ್ಥಿಯಾಗಿಯೂ ಆಡಂಬರವಿಲ್ಲದ ಮೋಜು ಮಸ್ತಿಯಿಲ್ಲದ ಸಾದಾಜೀವನವನ್ನು ಮುಂದುವರಿಸಿದರು. ಕಾಲೇಜಿನ ಅಂದಿನ ವಾತಾವರಣ ದೇಶ ಸೇವೆಗೆ ಬೇಕಾದ ಒಲವನ್ನು ಮೂಡಿಸಿತು. ಆಲೂರರು ತಮ್ಮ ಭವಿಷ್ಯ ಜೀವನವನ್ನು ರೂಪಿಸಲು, ಕಾಲೇಜು ಚಟುವಟಿಕೆಗಳು, ಪುಣೆಯಲ್ಲಿನ ಬೆಳವಣಿಗೆಗಳು ಸಹಕಾರಿಯಾದವು. ವಕೀಲಿ ಪರೀಕ್ಷೆ ಮಾಡಿಕೊಂಡು ದೇಶಸೇವೆಗೆ ತೊಡಗುವುದು. 'ಕೇಸರಿ'ಯಂತಹ ಪ್ರಭಾವಿ ಪತ್ರಿಕೆಯೊಂದನ್ನು ಕನ್ನಡದಲ್ಲಿ ನಡೆಸುವುದು. ಫರ್ಗ್ಯುಸನ್ ಕಾಲೇಜಿನ ಪ್ರೊಫೆಸರ್‌ಗಳಾದ ಭಾಟೆ, ಕರ್ವೆ, ರಾಜವಾಡೆ ಹಾಗೂ ಗೋಖಲೆ ಇವರುಗಳು ವೆಂಕಟರಾಯರಿಗೆ ಸ್ಫೂರ್ತಿಯ ಸೆಲೆಗಳಾದರು. ಅವರ ಉಪನ್ಯಾಸಗಳು ಆಲೂರರ ಮೇಲೆ ಗಾಢ ಪರಿಣಾಮ ಬೀರಿದವು. ವೀರಸಾವರ್‌ಕರ್, ಸೇನಾಪತಿ ಬಾಪಟ್, ಆಲೂರರ ಸಹಪಾಠಿಗಳಾಗಿದ್ದು, ಆಲೂರರಿಗೆ ರಾಷ್ಟ್ರಪ್ರೇಮದಲ್ಲಿ ವೀರನಿಷ್ಠೆ ಉಂಟಾಗಲು ಸಹಕಾರಿಯಾಯಿತು. ಟಿಳಕರು ವೆಂಕಟರಾಯರ ತಾರುಣ್ಯದ ದಿನಗಳ ಧೀರೋದಾತ್ತ ನಾಯಕರಾದರು. ಫರ್ಗ್ಯುಸನ್ ಕಾಲೇಜಿನ ಆವರಣದಲ್ಲಿ ಕನ್ನಡದ ಕಾಯಕವನ್ನು ಕೈಗೊಳ್ಳುವಲ್ಲಿ ಆಲೂರರು ಮುಂದಾದರು. ಉತ್ತರ ಕರ್ನಾಟಕದಿಂದ ಅಲ್ಲಿ ಬಂದು ಸೇರಿದ್ದ ವಿದ್ಯಾರ್ಥಿಗಳೆಲ್ಲ ಒಗ್ಗೂಡಿ ಕನ್ನಡ ಚಟುವಟಿಕೆಗಳಿಗೆ ತೊಡಗಿದರು.

1903ರಲ್ಲಿ ಬಿ. ಎ. ಪದವಿ ಪಡೆದುಕೊಂಡ ವೆಂಕಟರಾಯರು ಮುಂಬಯಿಯಲ್ಲಿ ಕಾನೂನಿನ ಅಭ್ಯಾಸಕ್ಕೆ ತೊಡಗಿ 1905ರಲ್ಲಿ ವಕೀಲರಾದರು. ವಕೀಲಿ ವೃತ್ತಿಯನ್ನು ಅದೇ ತಾನೆ ಆರಂಭಿಸಿದ್ದ ವೆಂಕಟರಾಯರಿಗೆ ಕಾಲವನ್ನು ದಂಡ ಮಾಡುವ ಹವ್ಯಾಸ ಹಿಡಿಸುತ್ತಿರಲಿಲ್ಲ. ಆದ್ದರಿಂದ ಅವರು ಕರ್ನಾಟಕ ಇತಿಹಾಸ, ಸಾಹಿತ್ಯಗಳ ವ್ಯಾಸಂಗಕ್ಕೆ ತೊಡಗಿದರು. ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಪ್ರವೇಶಿಸಿದರು. ಅದರ ಕಾರ್ಯಭಾರವನ್ನು ಹೊತ್ತುಕೊಂಡರು. 'ವಾಗ್‌ಭೂಷಣ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡರು. ತಮ್ಮ ಸಾಮರ್ಥ್ಯದಿಂದ ಆ ಪತ್ರಿಕೆಗೆ ಹೊಸ ರೂಪ ಕೊಟ್ಟರು. ವಿದ್ಯಾವರ್ಧಕ ಸಂಘದ ಗ್ರಂಥ ಭಂಡಾರ ಆಲೂರ ಆಸಕ್ತಿಯನ್ನು ತಣಿಸುವಷ್ಟು ಸಮೃದ್ಧವಾಗಿರಲಿಲ್ಲ.

**ಆಲೂರರ ಸಂಘಟನೆಯ ಸಮಾಜಮುಖಿ ಕೆಲಸ :** ವಿದ್ಯಾವರ್ಧಕ ಸಂಘದಲ್ಲಿ ಕನ್ನಡ ಗ್ರಂಥಗಳ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಕನ್ನಡದಲ್ಲಿ ಉತ್ತಮ ಗ್ರಂಥ ರಚನೆಗೆ ಮರಾಠಿ ಪ್ರಭಾವ ಅಡ್ಡ ಬಂದಂತೆ ಅವರಿಗೆ ತೋಚಿತು. ಮೈಸೂರು, ಮಂಗಳೂರು ಕಡೆಗಳಲ್ಲಿ ಪ್ರಕಟವಾಗುತ್ತಿದ್ದ ಗ್ರಂಥಗಳ ಭಾಷಾ ರೂಪ ಏಕರೂಪವಾಗಿರಲಿಲ್ಲ. ಈ ಭಾಷಾಬೇಧವನ್ನು ತೊಡೆಯಲು ಕನ್ನಡ ಗ್ರಂಥಕರ್ತರ ಸಮ್ಮೇಳವನ್ನು ಕರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ವಿದ್ಯಾವರ್ಧಕ ಸಂಘದ ವಾರ್ಷಿಕ ಅಧಿವೇಶನದ ಅಂಗವಾಗಿ 1907ರ ಜೂನ್ ತಿಂಗಳಲ್ಲಿ ಕರೆಯಲಾಯಿತು. ಈ ಸಮ್ಮೇಳನಕ್ಕೆ ಕರ್ನಾಟಕದ ನಾನಾ ಮೂಲೆಗಳಿಂದ ಗ್ರಂಥಕರ್ತರೂ, ಶಿಕ್ಷಕರೂ ಆಗಮಿಸಿದ್ದರು. ಈ ಸಮ್ಮೇಳನದಲ್ಲಿ ಕರ್ನಾಟಕದ ಎಲ್ಲಾ ಭಾಗದ ಜನರಿಗೂ ಸಮ್ಮತವಾಗುವ ರೀತಿಯಲ್ಲಿ ಗ್ರಂಥಗಳನ್ನು ಬರೆದು ಪ್ರಕಟಿಸಬೇಕೆಂದು ನಿರ್ಣಯಿಸಲಾಯಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಎಸ್.ಜಿ. ನರಸಿಂಹಾಚಾರ್ಯರು ವಹಿಸಿದ್ದರು. ಮೂರನೇಯ ವರ್ಷವೇ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಗ್ರಂಥಕರ್ತರ 2ನೇ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿಯೂ ಭಾಷೆಯ ಏಕರೂಪತೆಯ ಬಗ್ಗೆ ನಿರ್ಣಯವಾಯಿತು.

**ಆಲೂರ ವೆಂಕಟರಾಯರ ಸಾಹಿತ್ಯ ಕೃಷಿ :** ಶಿಕ್ಷಣ ಅಥವಾ 'ಶಿಕ್ಷಣ ಮೀಮಾಂಸೆ' ಎಂಬ ಹರ್ಬರ್ಟ್ ಸ್ಪೆನ್ಸರ್‌ನ ಅನುವಾದಿತ ಕೃತಿಯೇ ಆಲೂರರ ಮೊಟ್ಟ ಮೊದಲ ಗ್ರಂಥವಲ್ಲ. ಅದಕ್ಕೂ ಮೊದಲೇ ಅವರು 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ವಿದ್ಯಾರಣ್ಯರು' ಎಂಬ ಸ್ವಂತ ಕೃತಿಯನ್ನು ರಚಿಸಿದ್ದರು. ಈ ಕೃತಿಯ ರಚನೆಗೆ ಸ್ಫೂರ್ತಿ ಕೊಟ್ಟಿದ್ದು ಅವರ ಆನೆಗೊಂದಿಯ ಪ್ರವಾಸದ ಫಲ. "ಕರ್ನಾಟಕತ್ವದ ಅಭಿಮಾನ ಹುಟ್ಟಿಸುವುದಕ್ಕೆ ನಾನು ಬರೆದ ಮೊಟ್ಟಮೊದಲನೆ ಪುಸ್ತಕ ಈ "ಶ್ರೀ ವಿದ್ಯಾರಣ್ಯರ ಚರಿತ್ರೆ" ಎಂದು ಅವರು ಈ ಕೃತಿಯ ಬಗ್ಗೆ ಹೇಳಿಕೊಂಡಿರುವುದು ಅವರ ನಾಡ ಅಭಿಮಾನದ ಸಂಕೇತವಾಗಿದೆ.

**ಕರ್ನಾಟಕ ಗತವೈಭವ :** 1912 ರಲ್ಲಿ ಆಲೂರ ವೆಂಕಟರಾಯರು ತಮ್ಮ ಆಚಾರ್ಯ ಕೃತಿ 'ಕರ್ನಾಟಕ ಗತವೈಭವ' ವನ್ನು ಪ್ರಕಟಿಸಿದರು. 1905ರಲ್ಲಿ ನವಬೃಂದಾವನ, ಆನೆಗೊಂದಿ, ಹಂಪಿಗಳ ಪ್ರವಾಸದ ಕಾಲದಲ್ಲಿ ಕನಸಾಗಿ ಮೂಡಿಬಂದ ಅರಿವೇ 'ಗತವೈಭವ' ಕೃತಿ. ಇದು ಆಲೂರರ ತಪಸ್ಸಿನ ಫಲ. ಈ ಕೃತಿ ಭಾರತ ಮತ್ತು ಕರ್ನಾಟಕ ಇವುಗಳ ಸಮ್ಯಗ್ದರ್ಶನವನ್ನು ಒದಗಿಸಿತು.

ಗತವೈಭವದಲ್ಲಿ ಆಲೂರರ ಅಭಿಮಾನದ್ಯೋತಕ ಮಾತುಗಳು ಹೀಗೆ ವ್ಯಕ್ತಗೊಂಡಿವೆ. "ನಾನು ಕನ್ನಡಿಗನು, ಕರ್ನಾಟಕವು ನನ್ನದು ಎಂಬ ಸದ್ವಿಚಾರಗಳಿಂದ ಯಾವನ ಹೃದಯವು ಆತ್ಮಾನಂದದಿಂದ ಪುಳಕಿತಗೊಳ್ಳುವುದಿಲ್ಲವೋ ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾವಾತನ ಹೃದಯವು ತಲ್ಲಣಿಸುವುದಿಲ್ಲವೋ ಅದು ಹೃದಯವಲ್ಲ, ಕಲ್ಲಿನಬಂಡೆ; ದೇಹವಲ್ಲ, ಮೋಟು ಮರ' ಎಂದಿದ್ದಾರೆ.

**ಇವರ ಕೃತಿಗಳು :** 'ಕರ್ನಾಟಕದ ವೀರರತ್ನಗಳು (1930), ಕರ್ನಾಟಕತ್ವದ ಸೂತ್ರಗಳು (1950) ಮತ್ತು ಕರ್ನಾಟಕತ್ವ ವಿಕಾಸ (1952) ಗ್ರಂಥಗಳ ಮೂಲಕ ಆಲೂರ ವೆಂಕಟರಾಯರು ಕರ್ನಾಟಕ ದರ್ಶನವನ್ನು ಸಮಗ್ರಗೊಳಿಸಿದರು. ಗತವೈಭವದಿಂದ ಹಿಡಿದು ಹೊಸ ಕರ್ನಾಟಕ ಕಟ್ಟುವುದಕ್ಕೆ ಬೇಕಾದ ಚೌಕಟ್ಟನ್ನು ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದರು.

'ಕರ್ನಾಟಕತ್ವದ ಸೂತ್ರಗಳು' ಗತವೈಭವದ ಮುಂದಿನ ಹೆಜ್ಜೆಯಾಗಿದೆ. "ಕರ್ನಾಟಕ ಅವಶ್ಯವೇ"? "ರಾಷ್ಟ್ರೀಯ ಐಕ್ಯಕ್ಕೆ ಪ್ರಾಂತೀಯತೆ ಘಾತಕವಾಗದೇ ?" ಎಂಬ ಸಂಶಯಾತ್ಮಕ ಪ್ರಶ್ನೆಗಳಿಂದಲೇ 'ಕರ್ನಾಟಕತ್ವದ ಸೂತ್ರಗಳು' ಕೃತಿಯ ರಚನೆಗೆ ಕಾರಣವಾಗಿದೆ. ಅಲ್ಲದೇ ಕೃತಿಯಲ್ಲಿ "ವಿಶ್ವ, ಭಾರತ, ಕರ್ನಾಟಕಗಳ ಪರಸ್ಪರ ಸಂಬಂಧವನ್ನು ವ್ಯವಹಾರಿಕವಾಗಿ, ತಾತ್ವಿಕವಾಗಿ, ಆಧ್ಯಾತ್ಮಿಕವಾಗಿ ವಿವರಿಸಿ ಬರೆದ ಕಿರುಕೃತಿ" ಇದಾಗಿದೆ. ಡಾ.ಸೂರ್ಯನಾಥ ಕಾಮತ್ ಅವರು ಈ ಕೃತಿಯ






ಬಗ್ಗೆ ಸಂಗ್ರಹವಾಗಿ ಹೇಳಿದ್ದಾರೆ. ಕರ್ನಾಟಕತ್ವವನ್ನು ಪ್ರತಿಪಾದಿಸುವ ಒಂದುನೂರು ಸೂತ್ರಗಳನ್ನು ಆಲೂರರು ಇದರಲ್ಲಿ ಕೊಟ್ಟಿದ್ದಾರೆ. "ಕರ್ನಾಟಕವೆಂದರೆ, ಕೇವಲ ದೇಶಾಭಿಮಾನವಲ್ಲ ಕೇವಲ ಇತಿಹಾಸವಲ್ಲ ; ಇವೆಲ್ಲವುಗಳನ್ನು ಮೀರಿದ ಭಾವನೆ" ಇಂತಹ ಸೂತ್ರೀಕರಣ ಆಲೂರರ ಹೃದಯ ವೈಶಾಲ್ಯವನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕತ್ವದ ವಿಕಾಸದಲ್ಲಿ ತಮ್ಮ ಕಿರಿದಾದ ಪಾತ್ರವನ್ನು, ಉದ್ದೇಶ ಕುರಿತು ಹೀಗೆನ್ನುತ್ತಾರೆ. "ಕರ್ನಾಟಕ ಗತವೈಭವವ ಅಖಂಡ ಕರ್ನಾಟಕಕ್ಕೆ ತಳಹದಿಯಾದಂತೆ, ಇದು ಭಾವೀ ವೈಭವಕ್ಕೆ ತಳಹದಿಯಾಗಬಹುದೆಂದು ಆಸೆ. ಭಾವೀ ವೈಭವವನ್ನು ಪಡೆಯುವುದೆಂದರೆ ಹಂಪೀ ವಿರೂಪಾಕ್ಷ ದೇವಾಲಯದ ಗೋಪುರ ಕಟ್ಟಿದಂತೆ ! ಆ ಗೋಪುರ ಅನೇಕ ಸಲ ಬಿದ್ದು ಬಿದ್ದು ಹೋಗುತ್ತಿತ್ತಂತೆ ! ಕೊನೆಗೆ ಒಬ್ಬ ಹೆಣ್ಣುಮಗಳು, ತನ್ನನ್ನು ಬಲಿಕೊಟ್ಟುಕೊಂಡಾಗ ಮಾತ್ರ ನಿಂತಿತಂತೆ ! ಅದರ ಮರ್ಮವೆಂದರೆ, ಜನತೆಯ ಸಂಪೂರ್ಣ ತ್ಯಾಗಕ್ಕೆ ಸಿದ್ಧವಾದಾಗಲೇ ಅದು ಸಾಧ್ಯ. ಹಾಗೆ ಕರ್ನಾಟಕದ ಭಾವೀ ವೈಭವದ ಗೋಪುರವು ಕಟ್ಟಲ್ಪಟ್ಟು, ಅದು ಮಿಕ್ಕವರೆಲ್ಲರಿಗೂ ನಮ್ಮ ಸಂಸ್ಕೃತಿಯ ದಿವ್ಯದೀಪಸ್ತಂಭವಾಗಲಿ" ಇದೇ ಪುಸ್ತಕದಲ್ಲಿ 'ಕರ್ನಾಟಕತ್ವ'ವನ್ನು ಹೀಗೆ ವಿವರಿಸಿದ್ದಾರೆ.

1) "ಕರ್ನಾಟಕತ್ವವೆಂಬುದು ನನ್ನ ವಿಶಿಷ್ಟ ವಿಚಾರ. ಆ ಶಬ್ದವೂ ಕೂಡಾ ನನ್ನ ಟಂಕಸಾಲೆಯಲ್ಲಿ ಹುಟ್ಟಿದ್ದು. ಅದೊಂದು ಶಬ್ದದಲ್ಲಿ ರಾಜಕಾರಣ ಧರ್ಮ, ವಾಙ್ಮಯ, ಇತಿಹಾಸ, ಕಲೆ ಮುಂತಾದ ಯಾವತ್ತು



# ಕರ್ನಾಟಕದ ಗಾಂಧಿ : ಹರ್ಡೇಕರ ಮಂಜಪ್ಪ

▪ ಬಸವರಾಜ ಆಕಳವಾಡಿ

ಹರ್ಡೇಕರ ಮಂಜಪ್ಪನವರು ವಿಶ್ವವಿಭೂತಿ ಪುರುಷರ ಸಾಲಿನಲ್ಲಿ ನಿಲ್ಲಬಲ್ಲ, ರಾಷ್ಟ್ರ ಉದ್ಧಾರಕ್ಕಾಗಿ ಪ್ರಾಣವನ್ನೇ ಪಣಕ್ಕಿಟ್ಟು ತನ್ನ ದೇಹವನ್ನೇ ಉಜ್ಜುಗೊರಡಾಗಿಸಿ ಕಂಪನ್ನು ಸೂಸಿದ ವೀರಪುರುಷ. ಬಾಯಿಯಲ್ಲಿ ಬೆಳ್ಳಿ-ಚಮಚೆಯನ್ನಿಟ್ಟುಕೊಂಡು ಜನ್ಮತಳೆಯಲಿಲ್ಲ. ಪ್ರಸಿದ್ಧ ಮುಂದಾಳುಗಳೆನಿಸಿದ ತಂದೆಯ ಉದರದಲ್ಲಿ ಉದಯಿಸಿ ಬರಲಿಲ್ಲ. ಅರವಿಂದ, ಸುಭಾಷರಂತೆ ವಿದೇಶದ ಉಚ್ಚ ಶಿಕ್ಷಣ ಪಡೆವ ಭಾಗ್ಯ ಅವರಿಗಿರಲಿಲ್ಲ. ಶ್ರೀಮಂತಿಕೆ ಹಾಗೂ ಉಚ್ಚ ಶಿಕ್ಷಣದ ಸೌಲಭ್ಯವಿಲ್ಲದೇ ಸತತ ಪರಿಶ್ರಮ ಮತ್ತು ದೇಶ ಸೇವೆಗಳ ಮೂಲಕ ಸಫಲದ ಗುರಿಯನ್ನು ಮುಟ್ಟಿದ ಶೇಯಸ್ಸು ಮಂಜಪ್ಪನವರಿಗೆ ಸಲ್ಲಬೇಕು.

"ಆರಂಕುಶಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ" ಎಂದು ಹೆಮ್ಮೆಯಿಂದ ಬಣ್ಣಿಸಿದ ಪಂಪ ಕವಿಯ ನಾಡಾದ ಬನವಾಸಿಯಲ್ಲಿ ಫೆಬ್ರವರಿ 18, 1886 ರಲ್ಲಿ ಬಡಕುಟುಂಬವೊಂದರಲ್ಲಿ ಜನಿಸಿದರು. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಹಾಗು ಅಣ್ಣನ ಆಶ್ರಯದಲ್ಲಿ ಬೆಳೆದರು. ಸಿರ್ಸಿ ತಾಲೂಕು ಕಚೇರಿಯಲ್ಲಿ ಕಾರಕೂರನರಾಗಿದ್ದ ಅವರ ಅಣ್ಣ ಮಧುಲಿಂಗಪ್ಪನವರಲ್ಲಿ ವಿದ್ಯಾಭ್ಯಾಸ ಮಾಡಿ, 1903 ರಲ್ಲಿ ಮುಲ್ಕಿ ಪರೀಕ್ಷೆ ಪಾಸಾದರು. ಇಡೀ ಕಾರವಾರ ಜಿಲ್ಲೆಯಲ್ಲಿಯೇ ಮುಲ್ಕಿ ಪರೀಕ್ಷೆ ಪಾಸಾದ ಕನ್ನಡಿಗರಲ್ಲಿ ಇವರೇ ಮೊದಲಿಗರು. ಪ್ರತಿಭಾವಂತರಾದ ಇವರಿಗೆ ಕೊಡಲೇ ಸಿರ್ಸಿಯ ಕನ್ನಡ ಶಾಲೆಯಲ್ಲಿಯೇ ಶಿಕ್ಷಕ ವೃತ್ತಿಯು ದೊರೆಯಿತು. ಬಾಲ್ಯದಿಂದಲೇ ಚೆನ್ನಾಗಿ ಮಾತನಾಡಬಲ್ಲವರಾಗಿದ್ದ ಇವರಲ್ಲಿ ಸಂಸ್ಕೃತವನ್ನು ಕಲಿಯಬೇಕೆಂಬ ಇಚ್ಛೆ ಬಲವಾಗಿತ್ತು. ಲಿಂಗವಂತರಿಗೆ ಸಂಸ್ಕೃತ ಕಲಿಸುವದು ಅನುಚಿತವೆಂಬ ಕರ್ಮಠ ಧೋರಣೆಯಿಂದಾಗಿ ಇವರ ಸಂಸ್ಕೃತ ಅಧ್ಯಯನ ಮುಂದುವರಿಯಲಿಲ್ಲ. ವಕೀಲರೊಬ್ಬರ ಸ್ವಸಹಾಯದಿಂದ ಮುಂಬೈಗೆ ಹೋಗಿ ಸಂಸ್ಕೃತ ಕಲಿಯುವ ಸದವಕಾಶ ಒದಗಿ ಬಂದರೂ ಅವರ ಅಣ್ಣ ಒಪ್ಪಿಗೆ ನೀಡಲಿಲ್ಲ. ಬಡತನದ ಬವಣೆಯ ಮೂಲಕ ಹೆಚ್ಚಿನ ಶಿಕ್ಷಣಾಭ್ಯಾಸವೂ ಸಾಧ್ಯವಾಗಲಿಲ್ಲ. ಮಂಜಪ್ಪನವರ 'ಶಾಸ್ತ್ರಿ' ಆಗಬೇಕೆಂಬ ಕನಸು ಕನಸಾಗಿಯೇ ಉಳಿಯಿತು.

ಭಾರತ ಮಾತೆಯನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಬೇಕಿತ್ತು. ಹರಿದು ಹಂಚಿ, ಬಿಳಿಯ ರಕ್ಕಸರ ಕಾಲ್ತುಳಿತಕ್ಕೆ ಸಿಕ್ಕ ನಾಡವರ ನರಳಾಟವನ್ನು ಒಗ್ಗಟ್ಟಿನ ಬಲದಿಂದ ದೂರ ಮಾಡಬೇಕಿತ್ತು. ಅದರ ಸಲುವಾಗಿ ಒಂದು ಪ್ರಸಾರ ಮಾಧ್ಯಮ ಆವಶ್ಯವಾಗಿತ್ತು. ಜ್ಞಾನಪ್ರಸಾರ ಮತ್ತು ಜನತೆಯ ಮನವನ್ನು ಎಚ್ಚರಗೊಳಿಸಲು ಅಂದು ಪತ್ರಿಕೆಗಳು ಅವಶ್ಯವಾಗಿದ್ದವು. ಇಂದಿನಂತೆ ವಿಶ್ವವಿದ್ಯಾಲಯಗಳ ಪ್ರಕಟಣೆಗಳಿರಲಿಲ್ಲ. ವಿದ್ವಾಂಸರು ಬರೆದ ಗ್ರಂಥಗಳಂತೂ ಜನಸಾಮಾನ್ಯರ ಕೈ ಸೇರುತ್ತಿರಲಿಲ್ಲ. ದೇಶದ ಸ್ವಾತಂತ್ರ್ಯದ ಸಲುವಾಗಿ ಅವಿರತ ಹೋರಾಡುವುದೇ ಅಂದಿನ ಪತ್ರಿಕೋದ್ಯೋಗಿಗಳ ಮುಖ್ಯ ಗುರಿಯಾಗಿತ್ತು.

ಸ್ವಾತಂತ್ರ್ಯ ಚಳವಳಿಯ ಕಾಲವಾದ ಆಗ ವಂಗಭಂಗ ಚಟುವಟಿಕೆಗಳು ಇವರ ಮೇಲೆ ಬಹಳಷ್ಟು ಪರಿಣಾಮವನ್ನು ಬೀರಿದವು. ಮಂಜಪ್ಪನವರು 1906 ರಲ್ಲಿ ತಮ್ಮ ಶಿಕ್ಷಕ ವೃತ್ತಿಗೆ ರಾಜೀನಾಮೆಯನ್ನಿತ್ತು, ದಾವಣಗೆರೆಯಲ್ಲಿ 'ಧನುರ್ಧಾರಿ' ಎಂಬ ವಾರ ಪತ್ರಿಕೆಯನ್ನು ಪ್ರಕಟಿಸತೊಡಗಿದರು. ಮಂಜ್ಜನವರಿಗೆ ಮರಾಠಿ ಜ್ಞಾನ ಅಷ್ಟಿಲ್ಲದಿದ್ದರೂ ಭಾಷಾಂತರ ಮಾಡುವಷ್ಟು ಮತ್ತು ವಿಷಯ ಸಂಗತಿಗಳನ್ನು ಗ್ರಹಿಸುವಷ್ಟು ಇತ್ತು.

ಆಗ ಪುಣೆಯಲ್ಲಿ ಲೋಕಮಾನ್ಯ ತಿಲಕರ ಸಂಪಾದಕತ್ವದಲ್ಲಿ ನಡೆಯುತ್ತಿದ್ದ ಮರಾಠಿ 'ಕೇಸರಿ' ಪತ್ರಿಕೆಯ ಭಾಷಾಂತರವೇ ಧರ್ನುರ್ಧಾರಿಯ ಮುಖ್ಯ ಗುರಿಯಾಗಿತ್ತು. ತಿಲಕರ ವಿಚಾರಗಳೇ ದೇಶಕ್ಕೆ ತಾರಕವೆಂದು ಅವರ ಪತ್ರಿಕೆಯು ಪ್ರತಿಪಾದಿಸುತ್ತಿತ್ತು. ಅಲ್ಪ ಸಮಯದಲ್ಲಿಯೇ ಪತ್ರಿಕಾ ವ್ಯವಸಾಯದಲ್ಲಿ ಮಂಜಪ್ಪನವರು ಹೆಸರುವಾಸಿಗಳಾದರು. ಜನಜಾಗೃತಿಯನ್ನುಂಟುಮಾಡುವ ಕಟುವಾದ ಲೇಖನಗಳಿಂದ ಒಡಗೂಡಿದ ಈ ಪತ್ರಿಕೆಯು ಕನ್ನಡ ನಾಡಿನಲ್ಲಿ ಬಹಳ ಪ್ರಸಿದ್ಧಿಗೆ ಬಂದಿತಾದರೂ, ಒಂದು ವರ್ಷದಲ್ಲಿ ಹೆಚ್ಚಿನ ಆದಾಯವೇನೂ ಆಗದೇ ಬಾಡಿಗೆ ಹಾಗೂ ಪತ್ರಿಕೆ ವೆಚ್ಚಕ್ಕೆ ಸರಿಹೋಯಿತು. ಪತ್ರಿಕೆಯ ಧೋರಣೆ ಉಗ್ರವಾಗಿ ಕಂಡಿದ್ದರಿಂದ ಮಾಲೀಕರು ಪ್ರೆಸ್ಸನ್ನು ಮರುವರುಷ ಬಾಡಿಗೆಗೆ ಕೊಡಲು ಒಪ್ಪದೇ ಇದ್ದುದರಿಂದ ಪತ್ರಿಕೆ ನಿಂತು ಹೋಯಿತು.

ರಾಜಕೀಯ ಚಟುವಟಿಕೆಗಳು ಹೆಚ್ಚುತ್ತಿದ್ದ ಆ ಕಾಲದಲ್ಲಿ ಪತ್ರಿಕೆ ನಿಂತುದಕ್ಕೆ ಮಂಜಪ್ಪನವರಿಗೆ ಅತ್ಯಂತ ವಿಷಾದವೆನಿಸಿತು. ಆದರೂ ತಮ್ಮ ಕರ್ತವ್ಯವನ್ನು ಮರೆಯದೆ ವಿಶ್ವಪ್ರಯತ್ನ ಮಾಡಿ ಧನಿಕರೊಬ್ಬರಿಂದ ಸಾಲ ಪಡೆದು ಸ್ವತಃ ಒಂದು ಹಳೆಯ ಪ್ರೆಸ್ಸನ್ನೇ ಕೊಂಡುಕೊಂಡು 1908 ರಲ್ಲಿ ಮತ್ತೆ 'ಧನುರ್ಧಾರಿ' ಪತ್ರಿಕೆಯನ್ನು ಪ್ರಕಟಿಸತೊಡಗಿದರು. ಆದರೆ ಮುಂದೆ ಹಣದ ಕೊರತೆ, ಅತ್ಯಧಿಕ ಪತ್ರಿಕೆಗಳ ಪ್ರಸಾರ, ಮುದ್ರಣ ಯಂತ್ರದ ದೋಷ, ಮುಂತಾದ ಕಾರಣಗಳಿಂದಾಗಿ 1914 ರಲ್ಲಿ ಪತ್ರಿಕೆ ನಿಂತು ಹೋಯಿತು. ಪತ್ರಿಕೆಯಿಂದ ಮಾಡಬೇಕಾದ ಕಾರ್ಯವನ್ನು ಪ್ರತಿವರ್ಷ ಒಂದೊಂದರಂತೆ ಪುಸ್ತಕ ಬರೆಯುವ ಯೋಚನೆ ಮಾಡಿದರು. 1915 ರಲ್ಲಿ ಬರೆದ 'ಸ್ವಕರ್ತವ್ಯ ಸಿದ್ಧಾಂತ'ವೆಂಬುದು ಅವರ ಮೊದಲ ಪುಸ್ತಕ.



ಹರಿಹರ ರೈಲು ನಿಲ್ದಾಣದಿಂದ ಮೂರು ಮೈಲು ದೂರದಲ್ಲಿ ತುಂಗಭದ್ರಾ ನದೀ ತೀರದಲ್ಲಿ 'ಸತ್ಯಾಗ್ರಹ ಆಶ್ರಮ'ವನ್ನು ಸ್ಥಾಪಿದರು. ಗಾಂಧೀಜಿಯವರ ಸತ್ಯಾಗ್ರಹ ತತ್ವಗಳನ್ನು ತತ್ವಶಃ ಪಾಲಿಸಬೇಕೆಂದು ಕಟ್ಟಪ್ಪಣೆಯನ್ನು ವಿಧಿಸಲಾಗಿತ್ತು. 1923ರ ಜುಲೈ ತಿಂಗಳಲ್ಲಿ ಅತೀವ ಮಳೆಯಿಂದಾಗಿ ತುಂಗಭದ್ರೆಗೆ ಮಹಾಪೂರ ಬಂದು ಆಶ್ರಮ ಕೊಚ್ಚಿ ಹೋಗುವ ಸ್ಥಿತಿಯಲ್ಲಿತ್ತು. ಆಶ್ರಮವನ್ನು ಅನಿವಾರ್ಯವಾಗಿ ಸ್ಥಳಾಂತರಿಸಬೇಕಾಗಿ ಬಂತು.

ಕರ್ನಾಟಕದ ಇತಿಹಾಸದಲ್ಲಿ 1924 ಮಹತ್ವದ ವರ್ಷ. ಗಾಂಧೀಜಿಯವರ ನೇತೃತ್ವದಲ್ಲಿ ಆ ವರ್ಷ ಬೆಳಗಾವಿಯಲ್ಲಿ ಕಾಂಗ್ರೆಸ್ ಆಧಿವೇಶನ ಸೇರಿತ್ತು. ಆಗ ಮಂಜಪ್ಪನವರು ಹರಿಹರದ ಸುತ್ತಮುತ್ತಲಿನ ಯುವಕರನ್ನು ಕಲೆ ಹಾಕಿ ಅವರಿಗೆ ತರಬೇತಿ ಕೊಟ್ಟು, ಅವರೊಂದಿಗೆ ಅಧಿವೇಶನದಲ್ಲಿ ಪಾಲ್ಗೊಂಡರು. ಮಂಜಪ್ಪನವರು ಗಾಂಧೀಜಿಯವರ ಮತ್ತು ಅಧಿವೇಶನದ ಸದಸ್ಯರೆಲ್ಲರ ಪ್ರೀತಿಗೆ ಪಾತ್ರರಾದರು. ಇದರಿಂದ ಸ್ಫೂರ್ತಿಗೊಂಡ ಅವರು ಹಳ್ಳಿಗಳ ಸಂಚಾರ ಕೈಕೊಂಡು, ಹಳ್ಳಿಗರಲ್ಲಿ ಬೇರೂರಿರುವ ದುಶ್ಚಟಗಳನ್ನು ನಿರ್ಮೂಲ ಮಾಡಿ ಜನಜಾಗೃತಿ ಮಾಡಲು ಹವಣಿಸಿದರು. ಹೋದಕಡೆಯೆಲ್ಲ ಚಹಾ-ಕಾಫಿ ಕುಡಿಯುವುದು, ಬೀಡಿ-ತಂಬಾಕು ಸೇದುವುದನ್ನು ಬಿಟ್ಟುಕೊಡುವಂತೆ ಜನರ ಮನ ಒಲಿಸುತ್ತಿದ್ದರು. ಅವರ ಭಾಷಣಗಳ ಪ್ರಭಾವಕ್ಕೊಳಗಾದ ಸಾವಿರಾರು ಜನರು ಅವರು ಹೋದೆಡೆಯಲ್ಲೆಲ್ಲ ತಂಬಾಕು ಸೇದುವುದನ್ನು ಮತ್ತು ಚಹಾ ಕುಡಿಯುವುದನ್ನು ಬಿಟ್ಟುಕೊಟ್ಟ ಹಲವಾರು ನಿದರ್ಶನಗಳಿವೆ.



**ಫಲಾಪೇಕ್ಷೆಯಿಲ್ಲದ ಕಾರ್ಯ ತತ್ಪರತೆ, ಸಕಲರ ಸೇವೆ ಮಾಡುವ ಆಕಾಂಕ್ಷೆ, ಉನ್ನತ ಮಟ್ಟದ ನೈತಿಕ ಬಲ, ಸಮಾನತ್ವ, ಸೌಜನ್ಯ ಇವುಗಳಿಂದ ಶೋಭಿಸುತ್ತಿದ್ದ ಮಂಜಪ್ಪನವರ ಕಟ್ಟುನಿಟ್ಟಾದ ಆಹಾರ, ಸಾಧಾರಣ ಉಡುಗೆ, ಮಿತವ್ಯಯ, ಹೀಗೆ ಶಿಸ್ತಿನ ಜೀವನ ನಡೆಸುತ್ತಿದ್ದ ಈ ವ್ಯಕ್ತಿಯನ್ನು ಜನ ಆತ್ಮೀಯತೆ ಮತ್ತು ಗೌರವದಿಂದ "ಕರ್ನಾಟಕದ ಗಾಂಧಿ" ಎಂದು ಕರೆಯುತ್ತಿದ್ದರು.**

ಮುಂದೆ 1925 ರಲ್ಲಿ ವಿಜಾಪುರ ಜಿಲ್ಲೆಯಲ್ಲಿ ಸಂಚರಿಸುವಾಗ, ಕೃಷ್ಣಾನದಿಯ ದಂಡೆಯ ಮೇಲೆ ಪ್ರಶಾಂತವಾಗಿರುವ ಆಲಮಟ್ಟಿಯ ನಿಸರ್ಗ ಸೌಂದರ್ಯಕ್ಕೆ ಮಾರು ಹೋದರು. ತತ್ ಕ್ಷಣ ತುಂಗಭದ್ರೆಯ ತಟದಲ್ಲಿರುವ ತಮ್ಮ ಆಶ್ರಮವನ್ನು ಆಲಮಟ್ಟಿಗೆ ಸ್ಥಳಾಂತರಿಸುವ ಯೋಚನೆ ಮಾಡಿದರು. ನಂತರ ಆಲಮಟ್ಟಿಯು ಮಂಜಪ್ಪನವರ ಆರೋಗ್ಯಧಾಮವಾಯ್ತು. ಯುವಕರಿಗೆ ರಾಷ್ಟ್ರೀಯ ಶಿಕ್ಷಣ ನೀಡುವ ವಿದ್ಯಾಲಯವನ್ನು 1927 ರಲ್ಲಿ ಆಲಮಟ್ಟಿಯ ನಿರ್ಜನ ಪ್ರದೇಶದಲ್ಲಿ ಸ್ಥಾಪಿಸಿದರು. ವಿದ್ಯಾಲಯವನ್ನು ಸೇರಿದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸತ್ಯಾಗ್ರಹ ತತ್ವಗಳನ್ನು ಪರಿಪಾಲಿಸುವುದಲ್ಲದೇ ಸದಾ ಖಾದಿಧಾರಿಗಳಾಗಬೇಕಾಗಿತ್ತು.

ಮಂಜಪ್ಪನವರ ಅತ್ಯಂತ ಪರಿಶ್ರಮದ ಫಲವಾಗಿ ಅಂದು ಜನ್ಮ ತಳೆದ ಈ ವಿದ್ಯಾಲಯವು ಇಂದಿನವರೆಗೂ ಅತ್ಯುಚ್ಚಮಟ್ಟದಲ್ಲಿ ನಡೆದುಕೊಂಡು ಬಂದಿರುವುದು ತುಂಬಾ ಹೆಮ್ಮೆ ಪಡಬೇಕಾದ ಸಂಗತಿ. ಮಂಜಪ್ಪನವರ ಮೂಲಕ ಸ್ಥಾಪಿತವಾದ ವಿದ್ಯಾಲಯದಲ್ಲಿ ಇಂದು ಎಂಟನೆಯ ತರಗತಿಯಿಂದ ಎಸ್. ಎಸ್.ಎಲ್.ಸಿ ವರೆಗೆ ಕಲಿಸಲಾಗುತ್ತಿದ್ದು, ಈ ವಿದ್ಯಾಲಯಕ್ಕೆ ಈಗ 'ವಚನ ಪಿತಾಮಹ' ಡಾ. ಫ.ಗು ಹಳಕಟ್ಟಿಯವರ ಹೆಸರನ್ನಿಡಲಾಗಿದೆ.

ಮಂಜಪ್ಪನವರು ಆಲಮಟ್ಟಿಯ ಪ್ರಶಾಂತ ವಾತಾವರಣದಲ್ಲಿ ತಮ್ಮ ಸಾಹಿತ್ಯಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಿರಾಂತಕವಾಗಿ ಮುಂದುವರಿಸಿದರು. 1928 ರಲ್ಲಿ ಹಿರಿಯ ಗಾಂಧೀವಾದಿ ರಂಗನಾಥ ದಿವಾಕರ ಅವರೊಂದಿಗೆ 'ಖಾದಿವಿಜಯ' ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಖಾದಿ ಚಟುವಟಿಕೆಗಳನ್ನು ಪರಿಚಯಿಸುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. 1930 ರಲ್ಲಿ ಈ ಪತ್ರಿಕೆಯು 'ಉದ್ಯೋಗ' ಎಂಬ ಹೆಸರಿನಲ್ಲಿ ನಡೆಯತೊಡಗಿತು. ಉದ್ಯೋಗ ಪ್ರವೃತ್ತಿಯನ್ನು ಬೆಳೆಸಿ, ಸ್ವಾವಲಂಬನೆ ಹೆಚ್ಚಿಸುವ ಏಕೈಕ ಮಾಸಪತ್ರಿಕೆ ಇದಾಗಿತ್ತು. ಈ ಪತ್ರಿಕೆಯ ಮೂಲಕ ಮಂಜಪ್ಪನವರು ಜನತೆಯಲ್ಲಿ ಔದ್ಯೋಗಿಕ ಮನೋವೃತ್ತಿಯನ್ನು ಬೆಳೆಸಿದರು.

ಸಾತ್ವಿಕರೂ, ನಿರಾಡಂಬರ ಸ್ವಭಾವದವರೂ ಆದ ಮಂಜಪ್ಪನವರು ವೈಯಕ್ತಿಕವಾಗಿ ಮಹತ್ವಾಕಾಂಕ್ಷೆಯಿಂದ ಕೂಡಿರಲಿಲ್ಲ. ಗಾಂಧೀಜಿ ಮಾರ್ಗದ ಆಚರಣೆಯಲ್ಲಿ ಆಗ ಕರ್ನಾಟಕದಲ್ಲಿ ಇವರ ಸರಿಸಮಾನರಾದವರು ಯಾರೂ ಇರಲಿಲ್ಲ. ಫಲಾಪೇಕ್ಷೆಯಿಲ್ಲದ ಕಾರ್ಯ ತತ್ಪರತೆ, ಸಕಲರ ಸೇವೆ ಮಾಡುವ ಆಕಾಂಕ್ಷೆ, ಉನ್ನತ ಮಟ್ಟದ ನೈತಿಕ ಬಲ, ಸಮಾನತ್ವ, ಸೌಜನ್ಯ ಇವುಗಳಿಂದ ಶೋಭಿಸುತ್ತಿದ್ದ ಮಂಜಪ್ಪನವರ ಕಟ್ಟುನಿಟ್ಟಾದ ಆಹಾರ, ಸಾಧಾರಣ ಉಡುಗೆ, ಮಿತವ್ಯಯ, ಹೀಗೆ ಶಿಸ್ತಿನ ಜೀವನ ನಡೆಸುತ್ತಿದ್ದ ಈ ವ್ಯಕ್ತಿಯನ್ನು ಜನ ಆತ್ಮೀಯತೆ ಮತ್ತು ಗೌರವದಿಂದ "ಕರ್ನಾಟಕದ ಗಾಂಧಿ" ಎಂದು ಕರೆಯುತ್ತಿದ್ದರು.

ಸ್ವತಂತ್ರ ಭಾರತದ ಕನಸು ಕಾಣುತ್ತಿದ್ದ ಮಂಜಪ್ಪನವರ ಕನಸು, ಕನಸಾಗಿಯೇ ಉಳಿಯಿತು. ಆವಿಶ್ರಾಂತ ದುಡಿಮೆಯಿಂದ 60ನೇ ವಯಸ್ಸಿನಲ್ಲಿ ಅವರ ಆರೋಗ್ಯ ಹದಗೆಟ್ಟಿತು. 1947 ರ ಜನವರಿ 3 ರಂದು ಮಂಜಪ್ಪನವರು ನಮ್ಮಿಂದ ದೂರವಾದರು. "ವೀರರಾಗಿರಿ, ಧೀರರಾಗಿರಿ, ಪವಿತ್ರರಾಗಿರಿ, ಸ್ವತಂತ್ರರಾಷ್ಟ್ರದ ವೀರರಾಗಿರಿ" ಇದು ಅವರ ಅಂತಿಮ ಸಂದೇಶ.

ಮಂಜಪ್ಪನವರ ನಿಧನ ನಂತರ ಅವರ ಸಮಾಧಿಯನ್ನು ಹಳೇ ಆಲಮಟ್ಟಿಯ ಶಾಲಾ ಆವರಣದಲ್ಲಿ ಮಾಡಲಾಯಿತು. ಆಲಮಟ್ಟಿ ಆಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾದ ಸಮಾಧಿ ಮತ್ತು ಶಿಕ್ಷಣ ಸಂಸ್ಥೆಯನ್ನು ಆಲಮಟ್ಟಿ ಆಣೆಕಟ್ಟು ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು. 1996ರಲ್ಲಿ ಮಂಜಪ್ಪನವರ ಸಮಾಧಿಯನ್ನು ಗದಗಿನ ತೋಂಟದ ಸಿದ್ಧಲಿಂಗಮಹಾಸ್ವಾಮೀಜಿಯವರ ನೇತೃತ್ವದಲ್ಲಿ ವಿಧಿವತ್ತಾಗಿ ತೆಗೆದು ಕೊಂಡು ಹೋಗಿ ಆಲಮಟ್ಟಿ ರೈಲು ನಿಲ್ದಾಣದಿಂದ ನಿಡಗುಂದಿಗೆ ಹೋಗುವ ದಾರಿ ಪಕ್ಕದಲ್ಲಿರುವ ಎಂ.ಎಚ್.ಎಂ ಕಾಲೇಜಿನ ಹಿಂಭಾಗದ ಶಾಲಾ ಆವರಣದಲ್ಲಿ ಸ್ಥಾಪಿಸಿಲಾಗಿದೆ. ಅದೇ ಸ್ಥಳದಲ್ಲಿ ಸದ್ಯ 1.50 ಕೋಟಿ ರೂ.ಗಳ ವೆಚ್ಚದಲ್ಲಿ ಮಂಜಪ್ಪನವರ ಸ್ಮಾರಕ ಭವನ ನಿರ್ಮಾಣವಾಗಿದ್ದು, ಅನಾವರಣಕ್ಕೆ ಸಿದ್ಧಗೊಂಡಿದೆ. ಮಂಜಪ್ಪನವರ ಜಯಂತಿ ದಿನವಾದ ಇದೇ ಫೆ.18 ರಂದು ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಲೋಕಾರ್ಪಣೆ ಮಾಡಲಿದ್ದಾರೆ. ಪ್ರಶಾಂತವಾದ ಸ್ಥಳದಲ್ಲಿ ನಿರ್ಮಾಣಗೊಂಡ ಈ ಭವನವು ಮಂಜಪ್ಪನವರ ಸ್ಮಾರಕ ಧ್ಯಾನ ಮಂದಿರವಾಗಲಿ ಎಂಬುದು ಜನರ ಅಭಿಲಾಷೆಯಾಗಿದೆ.





# ತಂಬಾಕು ರಹಿತ ಜೀವನ ಸುಖ-ಸಂತೋಷಗಳ ಆಗರ

▪ ಡಾ॥ ಗುರುಲಿಂಗಪ್ಪ ಅಂಕದ



**ಧೂ**ಮಪಾನ ನಿಷೇಧಿಸಿದೆ..., ತಂಬಾಕು ಕೊಲ್ಲುತ್ತದೆ... ಎಂಬ ಸೂಚನಾ ಫಲಕಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ. 'ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ' ಎಂದು ಸಿಗರೇಟು, ಗುಟಕಾ ಮುಂತಾದ ತಂಬಾಕುಯುಕ್ತ ಪದಾರ್ಥಗಳ ಪಾಕೀಟಿನ ಮೇಲೆ ಓದುತ್ತೇವೆ ಜೊತೆಗೆ ಶ್ವಾಸಕೋಶಗಳ ಹಾಳಾದ ಚಿತ್ರ, ಚೇಳಿನ- ಅಸ್ಥಿಪಂಜರದ ಚಿತ್ರ ಹೀಗೆ ಹಲವಾರು ಭಯಾನಕ ಚಿತ್ರಗಳನ್ನೂ ಕಾಣುತ್ತೇವೆ. ಇದರ ಅರ್ಥ ತಂಬಾಕು ಸೇವನೆ ಚೇಳಿನ ವಿಷಕ್ಕಿಂತಲೂ ಹೆಚ್ಚು ವಿಷಕಾರಿ ಎಂದು ತಿಳಿದೂ ಜನರು ಇದಕ್ಕೆ ದಾಸರಾಗಿರುವುದು ನಿಜಕ್ಕೂ ವಿಷಾದನೀಯ.

ಇನ್ನು ತಂಬಾಕು ಸಂಬಂಧಿ ಅಂಕಿಅಂಶಗಳನ್ನು ನೋಡಿದರೆ ನಿಜಕ್ಕೂ ಆಘಾತವಾಗುವುದು- ವಿಶ್ವದಾದ್ಯಂತ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣಗಳ ಕಾರಣಗಳಲ್ಲಿ ತಂಬಾಕು ಸೇವನೆಯು ಏಕೈಕ ಪ್ರಮುಖ ಕಾರಣವಾಗಿದೆ.

- ಪ್ರತೀ ವರ್ಷ ವಿಶ್ವದಾದ್ಯಂತ 55 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಪ್ರತೀ ವರ್ಷ ಭಾರತದಲ್ಲಿ 10 ಲಕ್ಷ ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಇದು ಏಡ್ಸ್, ಕ್ಷಯ ಹಾಗೂ ಮಲೇರಿಯಾ ಈ ಮೂರು ರೋಗಗಳಿಂದ ಒಟ್ಟಾರೆಯಾಗಿ ಸಾಯುವ ಜನರಿಗಿಂತ ಹೆಚ್ಚಿನ ಸಂಖ್ಯೆಯಾಗಿದೆ.
- ತಂಬಾಕಿನಿಂದ ಸಾವನ್ನಪ್ಪುವವರ ಪೈಕಿ ಶೇ.80 ರಷ್ಟು ಜನ ಗ್ರಾಮೀಣ ಭಾಗದವರು ಎಂಬುದು ಆಘಾತಕಾರಿ ಸಂಗತಿ.
- ಭಾರತದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ತಂಬಾಕಿನಿಂದ ಬರುವ ಕ್ಯಾನ್ಸರ್‌ನ ಪ್ರಮಾಣ ಕ್ರಮವಾಗಿ ಶೇ. 56.4 ಮತ್ತು ಶೇ.44.6 ಆಗಿದೆ.
- ಭಾರತದ ಪ್ರತೀ 100 ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದ್ದಾಗಿವೆ. ಸುಮಾರು ಶೇ. 95 ರಷ್ಟು ಬಾಯಿ ಕ್ಯಾನ್ಸರ್‌ಗೆ ಕಾರಣ ತಂಬಾಕು ಸೇವನೆಯಾಗಿದೆ. ತಂಬಾಕು ಸೇವಿಸುವವರು ತಂಬಾಕು ಸೇವಿಸದವರಿಗಿಂತ 10 ವರ್ಷ ಹೆಚ್ಚು ವಯಸ್ಸಾದಂತೆ ಕಾಣುತ್ತಾರೆ. ಭಾರತದಲ್ಲಿ ತಂಬಾಕಿನ ಅನೇಕ ಉತ್ಪನ್ನಗಳು ಮಾರುಕಟ್ಟೆಯಲ್ಲಿವೆ.

1) ಬೀಡಿ, ಸಿಗರೇಟ್, ಗುಟ್ಕಾ ಇವು ಧೂಮಪಾನ ರೂಪದಲ್ಲಿ ತಂಬಾಕು ಸೇವನೆಯ ವಿಧಗಳು. ಇವುಗಳಲ್ಲಿ 4 ಸಾವಿರಕ್ಕೂ ಹೆಚ್ಚು ರಾಸಾಯನಿಕಗಳು ಮತ್ತು 60 ಕ್ಯಾನ್ಸರ್ ಕಾರಕ ವಸ್ತುಗಳಿವೆ. ಉದಾಹರಣೆಗೆ- ಅಮೋನಿಯಾ, ಆರ್ಸೆನಿಕ್, ಕಾರ್ಬನ್‌ಮೊನಾಕ್ಸೈಡ್, ಹೈಡ್ರೋಜನ್, ನ್ಯಾಪ್ತಲಿನ್, ನಿಕೋಟಿನ್, ಟಾರ್ ಮುಂತಾದವು.

2) ಇನ್ನು ಧೂಮರಹಿತ ಉತ್ಪನ್ನಗಳಾದ ಅಗಿಯುವಂತಹ ಜರ್ದಾ, ಖೈನೀ, ಗುಟ್ಕಾ, ತಂಬಾಕುಯುಕ್ತ ಪಾನ್‌ಮಸಾಲಾ, ಮಾವಾ ಇತ್ಯಾದಿಗಳಲ್ಲಿ ನಿಕೋಟಿನ್, ಫಾರ್ಮಾಲ್ಡಿಹೈಡ್, ಮೆಂಥಾಲ್, ಕ್ಯಾಡ್ಮಿಯಮ್ ಮತ್ತು ಸತು ಗಳಿರುತ್ತವೆ.

ಮೊದಮೊದಲು ಕೇವಲ ಶೋಕಿಗಾಗಿ ಸಿಗರೇಟ್, ಗುಟ್ಕಾ, ತಂಬಾಕು ಸೇವನೆ ಪ್ರಾರಂಭವಾಗಿ ನಂತರ ಅವು ಚಟವಾಗಿ ಪರಿಣಮಿಸಿ ಬಿಡಲು ಸಾಧ್ಯವೇ ಇಲ್ಲ ಎಂಬ ಹಂತಕ್ಕೆ ತಲುಪುವರು. ಅತಿಯಾಗಿ ತಂಬಾಕು ಸೇವಿಸುವವರು ಇತರರಿಗಿಂತ ಹೆಚ್ಚು ಚಹಾ, ಕಾಫಿ ಮದ್ಯ ಸೇವಿಸುತ್ತಾರೆ. ಇಂಥವರಿಗೆ ವ್ಯಾಯಾಮ ಮಾಡಲಾಗುವುದಿಲ್ಲ, ಮಾಡಿದರೂ ಬೇಗ ಸುಸ್ತಾಗುತ್ತಾರೆ, ಉಸಿರಾಟದ ತೊಂದರೆ, ಓಡುವಾಗ ಆಟವಾಡುವಾಗ ಬಳಲುತ್ತಾರೆ.

ಯುವಕರು ಮತ್ತು ಮಧ್ಯವಯಸ್ಕರು ಖಿನ್ನತೆಗೆ ತುತ್ತಾಗಿ ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಿದ್ದಾರೆ. 'ಒಬ್ಬ ತಾಯಿ ಮಗುವಿಗೆ ಹಾಲುಣಿಸುವುದನ್ನು ನಿಲ್ಲಿಸಿದರೆ ಮಗು ಕೂಡಲೇ ಹೇಗೆ ಚಡಪಡಿಸುತ್ತದೋ ಹಾಗೆ ತಂಬಾಕು ಸೇವನೆ ನಿಲ್ಲಿಸಿದ ಮನುಷ್ಯ ಚಡಪಡಿಸುತ್ತಾನೆ'. ಸಿಗರೇಟ್ ಸೇದುವುದರಿಂದ ಮತ್ತು ತಂಬಾಕು ಅಗಿಯುವದರಿಂದ ಒಂದು ತರದ ಖುಷಿ ಉಂಟಾಗಿ ಮೆದುಳುಚುರುಕುಗೊಂಡಂತೆ ಭಾಸವಾಗುವುದು. ವಿಚಾರಶಕ್ತಿ ತುಂಬಾರಚನಾತ್ಮಕವಾಗಿ ಸಾಗುವುದು. ಇದರಿಂದ ಇನ್ನಷ್ಟು ಸೇವಿಸುವಂತೆ ಪ್ರಚೋದನೆಯಾಗುತ್ತದೆ. ಸಿಗರೇಟ್-ತಂಬಾಕು ಸೇವನೆಯ ನಂತರ ವ್ಯಕ್ತಿಯ ರಕ್ತದೊತ್ತಡ ಹಠಾತ್ತಾಗಿ ಸ್ವಲ್ಪ ಹೆಚ್ಚಾಗುವದು ಆದರೆ ದೇಹದ ಎಲ್ಲ ರಕ್ತನಾಳಗಳಲ್ಲಿರುವ ರಕ್ತಣಾ ಪೂರೆಗೆ ಧಕ್ಕೆ ಬಂದಿರುತ್ತದೆ. ಇದರಿಂದ ವಿಶೇಷವಾಗಿ ಪಾದಗಳಿಗೆ ರಕ್ತದ ಹರಿವನ್ನು ಕಡಿಮೆ ಮಾಡಿ ಕಾಲಿನಲ್ಲಿ ಗ್ಯಾಂಗ್ರೀನ್ (ಸ್ಮೋಕರ್ಸ್ ಗ್ಯಾಂಗ್ರೀನ್) ಆಗುವ ಸಾಧ್ಯತೆ ಹೆಚ್ಚಾಗುವದು. ರಕ್ತದಲ್ಲಿರುವ ಒಳ್ಳೆಯ ಕೊಬ್ಬಿನಾಂಶವನ್ನು ತಂಬಾಕು ಕಡಿಮೆ ಮಾಡುತ್ತದೆ.

ಸಿಗರೇಟ್-ತಂಬಾಕು ಸೇವನೆ ಹೆಚ್ಚಾದಂತೆ ಹೃದಯದ ಕಾಯಿಲೆಗಳು, ಕೆಮ್ಮು, ಅಸ್ತಮಾ, ಕ್ಷಯ, ಲಕ್ವ ಮತ್ತು ಮುಖ್ಯವಾಗಿ ಕ್ಯಾನ್ಸರ್ ರೋಗಗಳ ಸಾಧ್ಯತೆ ಹೆಚ್ಚಾಗುವದು. ಸಾವು ಇತರರಿಗಿಂತ 2-4 ಪಟ್ಟು ಬೇಗನೆ ಸಂಭವಿಸುವದು. ಇನ್ನು ಮಹಿಳೆಯರಲ್ಲಿ ಅಂಡಗಳ ಫಲವತ್ತತೆಯಲ್ಲಿ ಕ್ಷೀಣತೆ,

ಗರ್ಭಪಾತ, ಕಡಿಮೆ ತೂಕದ ಶಿಶು ಜನನ, ಗರ್ಭಕಂಠದ ಕ್ಯಾನ್ಸರ್ ಕಂಡುಬರುತ್ತವೆ. ತಂಬಾಕಿನಿಂದ ಮುಖ್ಯವಾಗಿ ಬಾಯಿ, ಗಂಟಲು, ಶ್ವಾಸಕೋಶ, ಅನ್ನನಾಳ, ಕರುಳು, ಮೂತ್ರಪಿಂಡ ಇವೇ ಮೊದಲಾದ ಅಂಗಗಳು ಕ್ಯಾನ್ಸರ್‌ಗೆ ತುತ್ತಾಗುತ್ತವೆ. ಸಾಮಾನ್ಯವಾಗಿ ಧೂಮಪಾನ ಮಾಡುವವರು ಹೆಚ್ಚಾಗಿ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂಬ ಭೀತಿ ಜನರಲ್ಲಿದೆ. ಇದು ಸತ್ಯವಾದರೂ ಎಲ್ಲ ಧೂಮಪಾನಿಗಳೂ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂದಲ್ಲ. ಸಂಶೋಧನೆಗಳ ಪ್ರಕಾರ ಸಿಗರೇಟ್ ಸೇದುವವರಿಗೆ ಈ ವ್ಯಾಧಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಗೊತ್ತಾಗಿದೆ. ನಾನು ಸಿಗರೇಟ್ ಸೇದುವುದಿಲ್ಲ ಎಂದು ನಿಶ್ಚಿಂತರಾದರೆ ಸಾಲದು! ಕುಟುಂಬದಲ್ಲಿರುವ ಒಬ್ಬ ಧೂಮಪಾನಿಯಿಂದ ಇತರ ಸದಸ್ಯರಿಗೂ ತೊಂದರೆ ತಪ್ಪಿದ್ದಲ್ಲ. ಪ್ರತೀ ದಿನ 2 ಪ್ಯಾಕ್ ಧೂಮಪಾನ ಮಾಡುವ ವ್ಯಕ್ತಿಯೊಂದಿಗೆ ಜೀವಿಸುವ ವ್ಯಕ್ತಿಯೂ ಪರೋಕ್ಷವಾಗಿ ದಿನಕ್ಕೆ 3 ಸಿಗರೇಟ್ ಸೇದಿದಂತಾಗುತ್ತದೆ. ಪರೋಕ್ಷ ಧೂಮಪಾನ ಮಾಡಿದವರ ಮೂತ್ರ ಪರೀಕ್ಷೆಯಿಂದ ಅವರ ಮೂತ್ರದಲ್ಲಿ ನಿಕೋಟಿನ್ ಅಂಶ ಕಂಡುಬಂದಿದೆ. ಈ ಪರೋಕ್ಷ ಧೂಮಪಾನಿಗಳಿಗೆ 'ಪ್ಯಾಸೀವ್ ಸ್ಮೋಕರ್ಸ್' ಎನ್ನುವರು.

ಜನಸಾಮಾನ್ಯರನ್ನು ತಂಬಾಕಿನ ದುಷ್ಪರಿಣಾಮಗಳಿಂದ ರಕ್ಷಿಸಲು ಭಾರತ ಸರ್ಕಾರವು ಒಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಿದೆ. ಈ ಕಾಯ್ದೆಯಡಿ ಕೆಳಕಂಡವು ಅಪರಾಧವಾಗುತ್ತವೆ–

ಸಾರ್ವಜನಿಕ ಪ್ರದೇಶ ಹಾಗು ಕೆಲಸ ಮಾಡುವ ಸ್ಥಳಗಳಲ್ಲಿ ಧೂಮಪಾನ ಮಾಡುವುದು, ತಂಬಾಕು ಉತ್ಪನ್ನಗಳ ಜಾಹೀರಾತು ನೀಡುವುದು, 18 ವರ್ಷದೊಳಗಿನ ಮಕ್ಕಳಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವದು, ಶಾಲಾ ಕಾಲೇಜುಗಳ 100 ಅಡಿಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು, ತಂಬಾಕು ಉತ್ಪನ್ನಗಳ ಮೇಲೆ ಚಿತ್ರಗಳಿಂದ ಕೂಡಿದ ಎಚ್ಚರಿಕೆಯನ್ನು ಹಾಕದೇ ಇರುವುದು.

**ಧೂಮಪಾನ ತ್ಯಜಿಸುವುದರಿಂದ ಆಗುವ ಲಾಭಗಳು–**

ಧೂಮಪಾನ ಬಿಟ್ಟ 2 ಗಂಟೆಗಳ ನಂತರ–ದೇಹದಿಂದ ನಿಕೋಟಿನ್ ಅಂಶ ಮರೆಯಾಗುತ್ತದೆ, 12 ಗಂಟೆಗಳ ನಂತರ– ಕಾರ್ಬನ್ ಮೊನಾಕ್ಸೈಡ್ ದೇಹದಿಂದ ಮರೆಯಾಗಿ ಶ್ವಾಸಕೋಶದ ಚಟುವಟಿಕೆ ಹೆಚ್ಚಾಗುತ್ತದೆ, 2 ತಿಂಗಳ ನಂತರ–ಶ್ವಾಸಕೋಶ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಅಂಗಾಂಗಗಳಿಗೆ ರಕ್ತ ಚಲನೆ ವೃದ್ಧಿಸುತ್ತದೆ.

ತಂಬಾಕು ನಿರ್ಮೂಲನೆ ಖಂಡಿತ ಸಾಧ್ಯ. ನಿಮಗೆ ಬೇಕಾಗಿರುವುದು ನಿಮ್ಮ ಮನೋ ದೃಢತೆ, ಅಚಲ ನಿರ್ಧಾರ ಹಾಗು ಮನೋವೈದ್ಯರ ಸಹಾಯ ಹಸ್ತ. ಶೇ.70–80 ಜನರು ತಂಬಾಕು ಸಿಗರೇಟ್ ಸೇವನೆ ಬಿಡಲು ಪ್ರಯತ್ನಿಸುತ್ತಾರೆ ಆದರೆ ವೈದ್ಯರ ಮತ್ತು ಆಪ್ತಸಮಾಲೋಚಕರ ಮಾರ್ಗದರ್ಶನವಿಲ್ಲದೇ ಅವರ ಪ್ರಯತ್ನ ವಿಫಲವಾಗುವದು. ಇದಕ್ಕಾಗಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ 'ಜಿಲ್ಲಾ ತಂಬಾಕು ನಿಯಂತ್ರಣ ಘಟಕ' ಸ್ಥಾಪಿಸಲಾಗಿದೆ. ಇಲ್ಲಿ ತಂಬಾಕು ಸೇವನೆ ಬಿಡಲು ಸಿದ್ಧವಿರುವವರಿಗೆ ತಂಬಾಕಿನಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಸಂಸಾರದ ಆರ್ಥಿಕ ಪರಿಸ್ಥಿತಿ ಹದಗೆಡುವ ಬಗ್ಗೆ ತಿಳಿಹೇಳಲಾಗುವದು ಮತ್ತು ಅಗತ್ಯವಿದ್ದರೆ ಮನೋವೈದ್ಯರಿಂದ ಔಷಧೋಪಚಾರವನ್ನೂ ಮಾಡಲಾಗುವುದು. ತಂಬಾಕು–ಸಿಗರೇಟ್ ಬಿಡಲಿಚ್ಛಿಸುವವರು ಈ ತಂಬಾಕು ನಿಯಂತ್ರಣ ಘಟಕದ ಸದುಪಯೋಗ ಪಡೆದುಕೊಳ್ಳಬಹುದು. ಇನ್ನು ಮಾರುಕಟ್ಟೆಯಲ್ಲಿ ಸಿಗುವ ನಿಕೋಟಿನ್ ಗಮ್, ಮಾತ್ರೆಗಳು, ನಿಮಗೆ ಸಹಾಯ ಮಾಡಬಲ್ಲವು.

ವೈದ್ಯರ ಸಲಹೆ, ಮನೋವಿಶ್ಲೇಷಣೆ, ಖಿನ್ನತೆ ನಿವಾರಣಾ ಔಷಧಿಗಳು ನಿಮ್ಮ ಮನಸ್ಸನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ. ಇದಕ್ಕೆ ನೀವು ಮಾಡಬೇಕಾದದ್ದು ದೃಢನಿರ್ಧಾರ, ಯಾವುದೇ ಬಗೆಯ ತಂಬಾಕು, ಲೈಟರ್, ಬೆಂಕಿಪೊಟ್ಟಣ, ಆ್ಯಶ್‌ಟ್ರೇಗಳನ್ನು ನಾಶಪಡಿಸಿರಿ ಇನ್ನು ಅವುಗಳ ಅವಶ್ಯಕತೆ ನಿಮಗಿಲ್ಲ. ನಿಮಗೆ ಧೂಮಪಾನ ಮಾಡಲು ಪ್ರಚೋದಿಸುವ ಸಂಗತಿಗಳನ್ನು (ಸಿಗರೇಟ್ ಅಂಗಡಿ, ಧೂಮಪಾನ ಮಾಡುವವರನ್ನು ನೋಡುವುದು) ಗುರುತಿಸಿ ಅವುಗಳಿಂದ ದೂರವಿರಿ. ಇಂದಿನ ದಿನಗಳಲ್ಲಿ ಮಕ್ಕಳು ತಮ್ಮ 14ನೇ ವಯಸ್ಸಿಗೇ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಪೋಷಕರು ಮಕ್ಕಳೊಂದಿಗೆ ಮುಕ್ತವಾಗಿ ತಂಬಾಕಿನ ದುಷ್ಪರಿಣಾಮಗಳನ್ನು ಚರ್ಚಿಸಬೇಕು, ಮಾಧ್ಯಮ ಜಾಹಿರಾತುಗಳಿಗೆ ಮಕ್ಕಳು ಬೇಗನೆ ಆಕರ್ಷಿತರಾಗುತ್ತಾರೆ. ಆದ್ದರಿಂದ ಅದರ ಸತ್ಯಾಂಶಗಳನ್ನು ಪೋಷಕರೇ ನೇರವಾಗಿ ತಿಳಿಸಿ ಹೇಳಬೇಕು. ಈ ಧೂಮಪಾನಿಗಳು ತಮ್ಮ ಜೊತೆಗೆ ಇತರರ ಆರೋಗ್ಯವನ್ನೂ ಹಾಳುಮಾಡುತ್ತಿದ್ದಾರೆ. ಜನನಿಬಿಡ ಪ್ರದೇಶಗಳಾದ ಬಸ್‌ನಿಲ್ದಾಣ, ಚಿತ್ರಮಂದಿರ, ಉದ್ಯಾನ, ಆಸ್ಪತ್ರೆ, ಶಾಲಾ ಕಾಲೇಜ್ ಆವರಣದಲ್ಲಿ ಇವರು ನಿರಾತಂಕವಾಗಿ ಧೂಮಪಾನ ಮಾಡುತ್ತಿದ್ದಾರೆ. ಸರ್ಕಾರ 'ಧೂಮಪಾನ ನಿಷೇಧಿಸಿದೆ', 'ಧೂಮಪಾನ ದಂಡಕ್ಕೆ ಕಾರಣ' ಎಂತೆಲ್ಲ ಸೂಚನಾ ಫಲಕಗಳನ್ನು ಹಾಕಿದರೂ ಪ್ರಯೋಜನವಾಗಿಲ್ಲ ಕಾರಣ ಜನಸಾಮಾನ್ಯರಾದ ನಾವುಗಳು ಕನಿಷ್ಟಪಕ್ಷ 'ಇಲ್ಲಿ ಧೂಮಪಾನ ಮಾಡಬೇಡಿ' ಎಂದು ವಿನಯಪೂರ್ವಕವಾಗಿ ಒಂದು ಮಾತನ್ನಾದರೂ ಹೇಳುವುದರಿಂದ ನೂರರಲ್ಲಿ ಒಬ್ಬರಾದರೂ ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ಮಾಡುವುದನ್ನು ನಿಲ್ಲಿಸಿದರೆ ಅದು ಈ ಸಮಾಜಕ್ಕೆ ನಿಮ್ಮ ಕೊಡುಗೆಯೇ ಸರಿ.

ಕೊನೆಯದಾಗಿ–

- ಎಲ್ಲ ಬಗೆಯ ತಂಬಾಕು ಸೇವನೆ ಅಪಾಯಕಾರಿ.
- ತಂಬಾಕು ಸೇವನೆಯಿಂದ ಆರೋಗ್ಯ ಮತ್ತು ಕುಟುಂಬದ ಆರ್ಥಿಕ ಪರಿಸ್ಥಿತಿಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ.
- ನಾನು ಸುಡುತ್ತಿರುವ ಸಿಗರೇಟ್ ನನ್ನನ್ನೂ ನನ್ನ ಸುತ್ತಲ ಪ್ರಪಂಚವನ್ನೂ ಒಟ್ಟಿಗೆ ಸುಡುತ್ತದೆ, ಎಂಬ ಪುಟ್ಟದೊಂದು ಅರಿವು ಧೂಮಪಾನಿಗೆ ಇದ್ದರೆ ಸಾಕು.
- "ತಂಬಾಕು ರಹಿತ ಜೀವನ ಸುಖ–ಸಂತೋಷಗಳ ಆಗರ"

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd., Dr. Rajkumar Road, Bangalore - 560 010